ರಂಜನೆ ಬೋಧನೆ ಪ್ರಚೋದನೆ
ಗೌರಿ ಲಂಕೇಶ್
ಸೆಪ್ಟೆಂಬರ್ 17, 2008 ರೂ. 12/-



ಯಡ್ಡಿ ರಕ್ಷಣೆಗೆ ಕೋಟಿ ಡೀಲ್

ಮತ್ತೆ ಲವ್ವು!



ಕಾಂಗ್ರೆಸ್ ಅಧ್ಯಕ್ಷ ಸ್ಥಾನ ಸಿದ್ದು ವಿರುದ್ಧ ಗೌಡ!



ಬ್ರಾಹ್ಮಣ ಹುಡುಗಿ ಜೊತೆ ಬ್ಯಾಂಡು ಬಾರ್ಸುಮ್ಮ!



ಯಡಿಯೂರು ದೇವಸ್ಥಾನ

ಲಿಂಗಾಯತರಿಗೆ ಯಡ್ಡಿ ಮೋಸ!

ಆಪರೇಷನ್ ಕಮಲ

ಮಂಡ್ಯ ನಗರಸಭೆಯೂ ಹರಾಜು

ಚಾಮರಾಜನಗರ

ಎಮ್ಮೆಲ್ಲೆ ಮಗಳನ್ನು ಪ್ರೀತಿಸಿ ಗೂಸಾ ತಿಂದ



ಗೋಕರ್ಣ

ಯುದ್ಧ ಶುರು


0 ಟು 100



ಒಂದು ಕಾಲದಲ್ಲಿ ನಯಾಪೈಸೆಯೂ ಇಲ್ಲದಿದ್ದ ರಾಮಚಂದ್ರಾಪುರ ಮಠ ಇವತ್ತು ನೂರು ಕೋಟಿಗೂ ಹೆಚ್ಚು ಬಾಳುತ್ತಿದೆ. ಇದಕ್ಕೆ ಕಾರಣ 7 ನೇ ತರಗತಿ ಪಾಸ್ ಆಗಿರುವ ಹರೀಶ್ ಶರ್ಮ ಎಂಬಾತ ರಾಘವೇಶ್ವರ ಸ್ವಾಮಿಯಾಗಿದ್ದು ಮತ್ತು ಆತನ ಆಪ್ತ ಸಲಹೆಗಾರರ ಮಂಡಳಿಯಲ್ಲಿ ಮಾಜಿ ಪೊಲೀಸ್ ಅಧಿಕಾರಿಗಳಾದ ಟಿ. ಮದಿಯಾಳ್ ತರಹದವರು ಇರುವುದು.

-ಡಿ.ಪಿ. ಸತೀಶ್, ಚುರುಮುರಿ ವೆಬ್‌ಸೈಟಿನಲ್ಲಿ

'ಸಂತ ನೆಹರೂ'



"ರಾಜಕೀಯದಲ್ಲಿ ಮಹಾತ್ಮಾ ಗಾಂಧಿಯವರನ್ನು ಸಂತ ಎಂದು ಕರೆಯುತ್ತಾರೆ. ಆದರೆ ಆ ಕ್ಷೇತ್ರದಲ್ಲಿ ಸಂತ ನಂತಿದ್ದವರು ನನ್ನ ತಂದೆ. ಮಹಾತ್ಮ ಅವರು ಸಂತನಾಗಿರಲು ತುಂಬಾ ಪ್ರೂಡ್ ಆಗಿದ್ದರು."

-ಇಂದಿರಾ ಗಾಂಧಿ ಒಮ್ಮೆ ತಮ್ಮ ಪತ್ರಿಕಾ ಕಾರ್ಯದರ್ಶಿಯಾಗಿದ್ದ ಇತ್ತೀಚೆಗೆ ತೀರಿಕೊಂಡ ಎಚ್.ವೈ. ಶಾರದಾ ಪ್ರಸಾದರಿಗೆ ಹೇಳಿದ್ದು

ಸಿಂಘಾಲ್ ಕುಟುಂಬಂ

"ನಿಮ್ಮ ವಸುದೈವ ಕುಟುಂಬಂ ಹಾಳಾಗಲಿ...."

-ವಿಶ್ವಹಿಂದೂ ಪರಿಷತ್ತಿನ ನಾಯಕ ಬಿ.ಕೆ. ಸಿಂಘಾಲ್, ರಾಜದೀಪ್ ಸರ್‌ದೇಸಾಯಿಯವರ ಕಾರ್ಯಕ್ರಮದಲ್ಲಿ ಜಾನ್ ದಯಾಲ್‌ರಿಗೆ.

ಒರಿಸ್ಸಾ: ಹಾಗಲ್ಲ, ಹೀಗೆ



"ಇತ್ತೀಚೆಗೆ ಒಳ್ಳೆ ಬಟ್ಟೆ ತೊಡುವುದು, ಇಂಗ್ಲಿಷ್‌ನಲ್ಲಿ ಮಾತನಾಡುವುದು, ಹೀಗೆ ಹಲವು ರೀತಿಯಲ್ಲಿ ದಲಿತರ ಸಾಧನೆಗಳು ವ್ಯಕ್ತವಾಗುತ್ತಿವೆ. ಆದರೆ ಪಾರಂಪರಿಕವಾಗಿ ತುಳಿತಕ್ಕೆ ಒಳಗಾಗಿದ್ದ ಆ ಸಮುದಾಯ ಹೀಗೆ ತನ್ನ ಸ್ಥಿತಿಗತಿಗಳಲ್ಲಿ ಸುಧಾರಣೆ ಕಾಣುತ್ತಿರುವುದನ್ನು ವ್ಯಾಪಾರಸ್ಥರೇ ಹೆಚ್ಚಾಗಿರುವ ಹಿಂದೂ ಮೂಲಭೂತವಾದಿಗಳಿಗೆ ಸಹಿಸಲಾಗುತ್ತಿಲ್ಲ. ಈಗ ಅವರೆಲ್ಲ ಜೊತೆಗೂಡಿ ದಲಿತರಿಗೆ 'ಪಾಠ ಕಲಿಸಲು' ಸಜ್ಜಾಗಿದ್ದಾರೆ. ಆದ್ದರಿಂದ ಇವತ್ತು ಒರಿಸ್ಸಾದಲ್ಲಿ ನಡೆಯುತ್ತಿರುವುದು ಕೋಮು ಗಲಭೆ ಎನ್ನುವುದಕ್ಕಿಂತಲೂ ದಲಿತರ ಮೇಲಿನ ದೌರ್ಜನ್ಯ ಎಂದೇ ಮಾನವಹಕ್ಕು ಸಂಘಟನೆಗಳು ವ್ಯಾಖ್ಯಾನಿಸುತ್ತಿವೆ."

-ಆರ್. ಅಖಿಲೇಶ್ವರಿ, ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಬರಹಗಾರ್ತಿ

ಇನ್ಫಿ ನಾಣಿಯ ದುರಾದೃಷ್ಟ



"ಸಿಂಗೂರ್‌ನಲ್ಲಿ ನಡೆದಿರುವ ವಿವಾದ ಪಶ್ಚಿಮ ಬಂಗಾಳಕ್ಕೆ, ಭಾರತಕ್ಕೆ ಮತ್ತು ಅಭಿವೃದ್ಧಿ ಬಯಸುವ ಎಲ್ಲಾ ಭಾರತೀಯರ ಪಾಲಿಗೆ ದುರಾದೃಷ್ಟಕರ ಬೆಳವಣಿಗೆಯಾಗಿದೆ. ಈ ಒಂದು ಪ್ರಕರಣದಿಂದಾಗಿ ಭಾರತೀಯ ಮತ್ತು ವಿದೇಶೀಯ ಬಂಡವಾಳ ಹೂಡಿಕೆದಾರರಲ್ಲಿ ಭಯ ಉಂಟಾಗಿ ಕಳೆದ ಒಂದು ದಶಕದಿಂದ ಉತ್ತಮವಾಗಿ ಬೆಳೆದಿರುವ ದೇಶದ ಜಿಡಿಪಿಗೆ ಅಡ್ಡಗಾಲಾಗುತ್ತದೆ. ಒಳ್ಳೆ ಉದ್ದೇಶವನ್ನು ಹೊಂದಿರುವ ಎಲ್ಲಾ ಭಾರತೀಯರು ಸಿಂಗೂರು ಸೇರಿದಂತೆ ಇತರೆ ವಿವಾದಗಳು ಶಾಂತಿಯುತವಾಗಿ ಮತ್ತು ತರ್ಕಬದ್ಧವಾಗಿ ಅಂತ್ಯಗೊಳ್ಳಬೇಕೆಂದು ಎದ್ದು ನಿಂತು ಒತ್ತಾಯಿಸುವ ಕ್ಷಣ ಈಗ ಉದ್ಭವವಾಗಿದೆ."

-ಎನ್.ಆರ್. ನಾರಾಯಣಮೂರ್ತಿ, ಇನ್ಫೋಸಿಸ್ ಮುಖ್ಯಸ್ಥ

ಆರಕ್ಕೆ ಐದು!

"ತನ್ನ ಐಷಾರಾಮಿ ಬಿಎಂಡಬ್ಲ್ಯೂ ಕಾರ್ ಅನ್ನು ಕುಡಿದ ಮಂಪರಿನಲ್ಲಿ ಓಡಿಸಿ ಆರು ಜನರ ಸಾವಿಗೆ ಕಾರಣನಾಗಿದ್ದ ಸಂಜೀವ್ ನಂದನಿಗೆ ಐದು ವರ್ಷ ಜೈಲು ಶಿಕ್ಷೆ."

-ಪತ್ರಿಕಾ ವರದಿ


ಅಜ್ಜಂಪುರದಲ್ಲಿ ನೈಜ ಪ್ರಜಾಪ್ರಭುತ್ವ



"ಅಜ್ಜಂಪುರದಲ್ಲಿನ ಅಮೃತ ಮಹಲ್ ಜಾನುವಾರು ಸಂವರ್ಧನಾ ಕೇಂದ್ರವನ್ನು ರಾಮಚಂದ್ರಾಪುರ ಮಠಕ್ಕೆ ವಹಿಸುವ ಬದಲಾಗಿ ಅದನ್ನು ಅಜ್ಜಂಪುರ ಗ್ರಾಮ ಪಂಚಾಯತಿಗೆ ವಹಿಸಿದ್ದಲ್ಲಿ ಸೂಕ್ತ ನಿರ್ವಹಣೆ ಮಾಡುವುದಾಗಿ ಗ್ರಾಮ ಪಂಚಾಯತಿ ಪದಾಧಿಕಾರಿಗಳು ಒಮ್ಮತ ವ್ಯಕ್ತಪಡಿಸಿದರು."

-ಪತ್ರಿಕಾ ವರದಿ

ಕಾಶ್ಮೀರ ಕುರಿತು ನೆಹರೂ



"ಕಾನೂನಿನ ಪ್ರಕಾರವೇ ಕಾಶ್ಮೀರ ಭಾರತದೊಂದಿಗೆ ಸೇರ್ಪಡೆಗೊಂಡಿದ್ದರೂ, ಕಾಶ್ಮೀರದ ಜನರಿಗೆ-ಅಷ್ಟೇ ಯಾಕೆ, ಇಡೀ ಜಗತ್ತಿಗೆ - ನಾವು ಕೊಟ್ಟಿರುವ ಮಾತೊಂದಿದೆ. ಅದೇನೆಂದರೆ ಕಾಶ್ಮೀರದ ಜನರು ತಮ್ಮ ಇಚ್ಛೆಯಂತೆ ಈ ಒಪ್ಪಂದವನ್ನು ಸ್ವೀಕರಿಸಬಹುದು ಅಥವಾ ತಿರಸ್ಕರಿಸಬಹುದು. ಬಲಾತ್ಕಾರದಿಂದ, ಸೈನ್ಯದ ಬಳಕೆಯಿಂದ ಜನರನ್ನು ನಮ್ಮತ್ತ ಒಲೈಸುವ ಅಗತ್ಯ ನಮಗಿಲ್ಲ. ನಮ್ಮಿಂದ ಬೇರ್ಪಟ್ಟು ತಮ್ಮ ಪ್ರತ್ಯೇಕ ಹಾದಿಯನ್ನು ತುಳಿಯಲು ಕಾಶ್ಮೀರದ ಜನ ಇಚ್ಛಿಸಿದರೆ ನಾವು ಕೂಡ ನಮ್ಮ ಪ್ರತ್ಯೇಕ ಹಾದಿಯನ್ನು ತುಳಿಯುತ್ತೇವೆ. ನಮಗೆ ಬಲವಂತದ ಮದುವೆಗಳಾಗಲಿ, ಸಂಬಂಧಗಳಾಗಲಿ ಬೇಕಿಲ್ಲ."

-ಜವಾಹರ್‌ಲಾಲ್ ನೆಹರೂ, ಆಗಸ್ಟ್ *7, 1952* ರಲ್ಲಿ ಸಂಸತ್ತಿನಲ್ಲಿ

ಲಕ್ಷ್ಮಣಾನಂದ ಸರಸ್ವತಿ ಎಂತಹ 'ಸ್ವಾಮಿ' ಆಗಿದ್ದ?

ಇತ್ತೀಚೆಗೆ ಕೊಲೆಯಾದ ವಿಶ್ವಹಿಂದೂ ಪರಿಷತ್ತಿನ ಲಕ್ಷ್ಮಣಾನಂದ ಸರಸ್ವತಿ ಹಿಂದೊಮ್ಮೆ ಲಕ್ಸನ್ ಆಗಿದ್ದಾಗ ಸರ್ಕಾರಿ ನೌಕರನಾಗಿದ್ದ. ಆದರೆ ಆತನ ವಿರುದ್ಧ 'ಅವ್ಯವಹಾರ'ದ ಆರೋಪಗಳು ಕೇಳಿಬಂದಾಗ ತನ್ನ ನೌಕರಿಗೆ ರಾಜೀನಾಮೆ ನೀಡಿದ್ದ. ಆನಂತರ ಆತನ ವಿರುದ್ಧ ಸಾಬೀತುಪಡಿಸಲಾಗದ ಕೊಲೆ ಆರೋಪಗಳೂ ಕೇಳಿಬಂದಿದ್ದವು.


-ಪತ್ರಿಕಾ ವರದಿ


ಹಿಟ್ಲರ್ ಪ್ರೇಮ

"ಅಭಿವೃದ್ಧಿ ಕುರಿತಂತೆ ಹಿಟ್ಲರ್‌ನ ಸಂಘಟನಾ ಕಲೆಯ ಬಗ್ಗೆ ನನಗೆ ಮೆಚ್ಚುಗೆ ಇದೆ."

-ಮಹಾರಾಷ್ಟ್ರ ನವನಿರ್ಮಾಣ ಸೇನೆಯ ಮುಖ್ಯಸ್ಥ ರಾಜ್ ಠಾಕ್ರೆ

ಕಾರ್ಟೂನ್ ಕಾರ್ನರ್





ಮೇಷ್ಟ್ರು (ಸಿಟ್ಟನಿಂದ): ನೀನು ಮುಂದಿನ ಜನ್ಮದಲ್ಲಿ ನಾಯಿಯಾಗಿ ಹುಟ್ಟು!

ಗುಂಡ: ನೀವು ಮುಂದಿನ ಜನ್ಮದಲ್ಲಿ ಲೈಟ್ ಕಂಬವಾಗಿ ಹುಟ್ಟಿ. ಆವಾಗ ನೋಡ್ಕೋತಿನಿ!

* * * * * *

ಹೆಂಡತಿ: ಈ ಮನೇಲಿ ಒಂದು ನಾನು ಇರಬೇಕು ಅಥವಾ ನಿಮ್ಮ ಅಮ್ಮ ಇರಬೇಕು, ಏನಂತೀರಾ?

ಗಂಡ: ಇಬ್ರೂ ಹೋಗ್ರಿ. ಕೆಲಸದವಳು ಮಾತ್ರ ಇರಲಿ!

* * * * * *

ನಾವು ಕುಸಿಯುತ್ತಿರುವವರನ್ನು ಎತ್ತಿ ಹಿಡಿಯುತ್ತೇವೆ, ದೂರ ಸರಿಯುತ್ತಿರುವವರನ್ನು ಹತ್ತಿರ ತರುತ್ತೇವೆ.

ನಾವು ಯಾವ ದೇಶೋದ್ಧಾರದ ಸಂಘಟನೆಯವರೂ ಅಲ್ಲ, ಸಮಾಜೋದ್ಧಾರದ ಸಂಸ್ಥೆಯೂ ಅಲ್ಲ,

ಬದಲಾಗಿ ನಾವು ಬ್ರಾ ತಯಾರಿಸುವವರು!

* * * * * *

ಮೇಷ್ಟ್ರು: ಹೌದೇನೊ ಮಹೇಶ, ಕ್ಲಾಸ್‌ನಲ್ಲಿ ಎಲ್ಲರಿಗೂ ಕೆಟ್ಟ ಮಾತು ಬೈತೀಯಂತೆ?

ಮಹೇಶ: ಅವನಜ್ಜಿ ಪಿಂಡ, ಯಾವ ಬೇವರ್ಸಿ ಬೋಳಿಮಗ ಸಾರ್ ನಿಮ್ಮ ತಿಕಕ್ಕೇ ಬತ್ತಿ ಇಟ್ಕೋನು?!



ಮತ್ತೆ ನೆನಪಾಗುತ್ತಾರೆ ಮೇಷ್ಟ್ರು

ಮತ್ತೆ ನೆನಪಾಗುತ್ತಾರೆ ಮೇಷ್ಟ್ರು
ಗಾಂಧಿ-ಅಂಬೇಡ್ಕರರೊಡನೆ ಮಾತು ಮುಗಿಸಿ
ನೆಹರು ಶಾಸ್ತ್ರಿಯವರೊಂದಿಗೆ ಎಲೆಯಡಿಕೆ ಜಗಿದು
ಕುಶಲ ವಿಚಾರಿಸಿ ಬಂದವರ ಹಾಗೆ
ಕನಸಿನ ಕಿನ್ನರಲೋಕಕ್ಕೊಯ್ದ ಮೇಷ್ಟರು
ವಾಸ್ತವಕೆ ಕರೆ ತಂದಿದ್ದು ಅವರಲ್ಲ
ನೆಹರು ಜುಬ್ಬಾದೊಳಗಿನ ಹರಿದ ಬನಿಯನ್ನಿನ
ತೂತುಗಳು

ಬಿಗ್ ಬಜಾರು-ಜನತಾ ಬಜಾರುಗಳ
ಗೌಜು-ಗದ್ದಲದ ನಡುವೆ
ನನ್ನೂರ ಸಂತೆಯಲ್ಲಿ
ಬದನೆಕಾಯಿ ಮಾರುವ ಅಜ್ಜಿಯೆದುರಿಗೆ
ಚೌಕಾಶಿ ಮಾಡುತ ನಿಂತ ಮೇಷ್ಟ್ರು
ಥಟ್ಟನೆ ನೆನಪಾಗುತ್ತಾರೆ.....

ಮೊಬೈಲು ಫೋನಿಗೆ ಕಿವಿಯಾನಿಸಿ ನಿಂತ
ಕಾಲೇಜು ಹುಡುಗರು
ಬರುವವರೆಂದು ಕಾದು ಕುಳಿತ
ಸರ್ಕಾರಿ ಲೈಬ್ರರಿಯ ಪುಸ್ತಕಗಳ ಹಾಗೆ!
ಮುರಿದ ಕನ್ನಡಕ ಸರಿಪಡಿಸುತ
ನಿಂತ ಮೇಷ್ಟ್ರು
ಥಟ್ಟನೆ ನೆನಪಾಗುತ್ತಾರೆ....

ಡಿಸ್ಕೊಥೆಕ್‌ಗಳ ಅಬ್ಬರದಲ್ಲಿ
ಟ್ರಾಫಿಕ್ಕಿನ ಗದ್ದಲದಲ್ಲಿ
ಯಾವುದೋ ರಾಗವೊಂದು
ಆಲಾಪನೆಗೈಯುತ್ತಾ ತೇಲಿಬಂದಂತೆ....
ಸಂಜೆ ಲಾಟೀನಿನ ಪಾವು ಒರೆಸುತ
ಕುಳಿತ ಮೇಷ್ಟ್ರು
ಎದ್ದು ಬಂದು ಮೈದಡವಿ ತಲೆನೇವರಿಸಿದಂತೆ
ಮತ್ತೆ ನೆನಪಾಗುತ್ತಾರೆ ಮೇಷ್ಟ್ರು....

■ ಬಿ. ಶ್ರೀನಿವಾಸ

ಲಂಕೇಶ್

ನೂರು ದಿನ ಎಂಬ ಬಿಜೆಪಿ ಸಾಧನೆ



ಕಂಡಹಾಗೆ

■ ಗೌರಿ ಲಂಕೇಶ್

ಮೊನ್ನೆ ನಮ್ಮ ಆಫೀಸಿಗೆ ದಾವಣಗೆರೆಯಿಂದ ಕೆಲ ಕ್ರಿಶ್ಚಿಯನ್ ಧರ್ಮಗುರುಗಳು ಬಂದಿದ್ದರು. ಇತ್ತೀಚೆಗೆ ದಾವಣಗೆರೆಯಲ್ಲಿ ಕ್ರಿಶ್ಚಿಯನ್ನರ ಪ್ರಾರ್ಥನಾ ಸ್ಥಳಗಳ ಮೇಲೆ, ಕ್ರಿಶ್ಚಿಯನ್ ಧರ್ಮಗುರುಗಳ ಮೇಲೆ ಚಡ್ಡಿಗಳ ದಾಳಿಗಳು ಹೆಚ್ಚಾಗಿವೆಯೆಂದೂ, ಕಳೆದ ಎರಡು ತಿಂಗಳಲ್ಲಿ ಕನಿಷ್ಠ ಇಪ್ಪತ್ತು ಇಂತಹ ದಾಳಿ ಪ್ರಕರಣಗಳು ನಡೆದಿವೆಯೆಂದೂ, ಸ್ಥಳೀಯ ಪೊಲೀಸರು ಕ್ರಿಶ್ಚಿಯನ್ನರಿಗೆ ರಕ್ಷಣೆ ನೀಡುವ ಬದಲಾಗಿ ಚಡ್ಡಿಗಳೊಂದಿಗೆ ಕೈಜೋಡಿಸಿ ದಾಳಿಗೊಳಗಾದವರ ಮೇಲೆಯೇ ದೂರುಗಳನ್ನು ದಾಖಲಿಸುತ್ತಿದ್ದಾರೆಂದೂ ವಿವರಿಸಿದರು.

ಮೊನ್ನೆ ಏನಾಗಿದೆ ಎಂದರೆ ಚರ್ಚ್ ಸುತ್ತಲೂ ನಿಂತಿದ್ದ ಭಜರಂಗಿಗಳು ಜನರು ಪ್ರಾರ್ಥನೆಗೆಂದು ಚರ್ಚಿಗೆ ಬಾರದಂತೆ ಧಮಕಿ ಹಾಕಿದ್ದಾರೆ. ಅದಕ್ಕೆ ತಕ್ಕಂತೆ ಚರ್ಚ್ ಬಾಗಿಲಲ್ಲಿ ನಿಂತಿದ್ದ ಪೊಲೀಸ್ ಒಬ್ಬ ಅದು ಹೇಗೋ ಚರ್ಚಿಗೆ ಬಂದವರ ಹೆಸರು, ವಿಳಾಸ ಇತ್ಯಾದಿಗಳನ್ನು ಪರಿಶೀಲಿಸಿ ಅವರೆಲ್ಲ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರೆಂದು ಖಾತರಿಪಡಿಸಿಕೊಂಡ ನಂತರವೇ ಅವರನ್ನು ಒಳಗೆ ಬಿಟ್ಟಿದ್ದಾನೆ. ಯಾಕೆ ಹೀಗೆ ಮಾಡುತ್ತಿದ್ದೀರಿ ಎಂದು ಪ್ರಶ್ನಿಸಿದರೆ "ಅವರು ಹಿಂದೂಗಳನ್ನು ಮತಾಂತರ ಮಾಡುತ್ತಿದ್ದಾರೆ, ಅದನ್ನು ತಡೆಯಬೇಕಿದೆ" ಎಂದಿದ್ದಾನೆ ಆ ಪೊಲೀಸ್.

ಇಲ್ಲಿಗೇ ಕತೆ ಮುಗಿಯುವುದಿಲ್ಲ. ಚರ್ಚಿಗೆ ಜನ ಬಾರದಂತೆ ತಡೆದಿದ್ದಲ್ಲದೆ ಆ ಕಟ್ಟಡದಲ್ಲಿ ಪ್ರಾರ್ಥನೆ ನಡೆಸಲು ಅನುಮತಿ ಇದೆಯೇ ಎಂದು ಜಿಲ್ಲಾಡಳಿತ ತಕರಾರೆತ್ತಿದೆ. ಆಗ ಅಲ್ಲಿನ ಧರ್ಮಗುರುಗಳು ಪರವಾನಗಿ ಪತ್ರವನ್ನೂ, ಎಲ್ಲಾ ದಾಖಲೆಗಳನ್ನು ತೋರಿಸಿದರೂ ಇದೆಲ್ಲ ಸಾಕಾಗಲ್ಲ ಎಂದೆಲ್ಲಾ ತಕರಾರೆತ್ತಿದ್ದಾರೆ. ಕೊನೆಗೆ ಇಡೀ ಕಟ್ಟಡಕ್ಕೆ ನೀರು ಮತ್ತು ವಿದ್ಯುತ್ ಸರಬರಾಜನ್ನು ತಡೆಹಿಡಿದಿದ್ದಾರೆ. ಇದೆಲ್ಲದರ ಅರ್ಥ ಇಷ್ಟೆ. ಯಾವುದೇ ಕಾರಣಕ್ಕೂ ಕ್ರಿಶ್ಚಿಯನ್ನರು ಚರ್ಚಿಗೆ ಬಾರದಂತೆ, ಅವರ ಪ್ರಾರ್ಥನಾ ಸ್ಥಳ ನಡೆಯದಂತೆ ನೋಡಿಕೊಳ್ಳುವುದೇ ಆಗಿದೆ.

ಇಂತಹ ಪ್ರಕರಣಗಳು ಇವತ್ತು ದಾವಣಗೆರೆ ಜಿಲ್ಲೆಯಲ್ಲಿ ಮಾತ್ರವಲ್ಲ ರಾಜ್ಯದ ಇತರೆಡೆಯೂ ಜರಗುತ್ತಿವೆ.

ಪಾಸ್ಟರ್‌ಗಳು ತಮ್ಮ ಮಾತು ಮುಗಿಸಿದ ನಂತರ "ನಿಮ್ಮನ್ನ ಒಂದು ಪ್ರಶ್ನೆ ಕೇಳುತ್ತೇನೆ. ಬೇಜಾರು ಮಾಡಿಕೊಳ್ಳಬೇಡಿ" ಎಂದೆ.

"ಕೇಳಿ" ಅಂದರು.

"ನಿಮ್ಮಂತೆ ಈ ರಾಜ್ಯದಲ್ಲಿ ಮುಸಲ್ಮಾನರೂ ಅಲ್ಪಸಂಖ್ಯಾತರು. ಯಾವ ಆರ್‌ಎಸ್‌ಎಸ್, ಭಜರಂಗದಳ, ವಿಶ್ವಹಿಂದೂ ಪರಿಷತ್ ಇವತ್ತು ನಿಮ್ಮ ಸಮುದಾಯವನ್ನು ಗುರಿಯಾಗಿಸಿಕೊಂಡಿದೆಯೋ, ಅವರೆಲ್ಲಾ ಕಳೆದ ಹಲವು ವರ್ಷಗಳಿಂದ ಮುಸಲ್ಮಾನರ ಮೇಲೆ ಇದಕ್ಕಿಂತ ತೀವ್ರತರವಾದ ದಾಳಿ, ಹಲ್ಲೆ ನಡೆಸುತ್ತಲೇ ಬಂದಿದ್ದಾರೆ. ಕರಾವಳಿ ಪ್ರದೇಶದಲ್ಲಿ ಕ್ರಿಶ್ಚಿಯನ್ ಸಮುದಾಯವು ಹೆಚ್ಚಿನ ಸಂಖ್ಯೆಯಲ್ಲಿದೆ. ಆದಿ ಉಡುಪಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಿಮ್ಮ ಸಮುದಾಯದವರು ಕನಿಷ್ಠ ಒಂದು ಖಂಡನಾ ಹೇಳಿಕೆ ಕೊಡಬಹುದಿತ್ತು, ಆ ಕೇಸು ನ್ಯಾಯಾಲಯದಲ್ಲಿ ಬಿದ್ದು ಹೋದಾಗ ನಡೆದ ಪ್ರತಿಭಟನೆಗಳಲ್ಲಿ ಭಾಗವಹಿಸಬಹುದಿತ್ತು, ಆದರೆ ಅದ್ಯಾವುದನ್ನೂ ಮಾಡದೆ ಕ್ರಿಶ್ಚಿಯನ್ ಸಂಘಟನೆಗಳು ಮೌನ ವಹಿಸಿದವಲ್ಲದೆ, ತಮಗೂ ತಮ್ಮ ಸುತ್ತಲು ನಡೆಯುತ್ತಿರುವ ವಿದ್ಯಮಾನಗಳಿಗೂ ಸಂಬಂಧವೇ ಇಲ್ಲ. ಮುಸಲ್ಮಾನರಿಗೆ ಏನಾದರೇನಂತೆ, ತಮಗೆ ಹಾಗಾಗದೆ ಇದ್ದರೆ ಸಾಕು ಎಂಬಂತೆ ಇದ್ದಿರಿ. ಆದರೆ ಈಗ ನಿಮ್ಮ ಸಮುದಾಯವೂ ಚಡ್ಡಿಗಳ ಕೆಂಗಣ್ಣಿಗೆ ತುತ್ತಾಗಿರುವಾಗ ಅನ್ಯಾಯ ಎನ್ನುತ್ತಿದ್ದೀರಿ. ಯಾಕೆ ಹೀಗೆ?" ಎಂದೆ.


ಅವರೆಲ್ಲ "ನಾವು ಸುಮ್ಮನಿದ್ದದ್ದು ತಪ್ಪು" ಎಂದು ಒಪ್ಪಿಕೊಂಡರು. ಮಾತ್ರವಲ್ಲ, ಇನ್ನು ಮುಂದೆಯಾದರೂ ಯಾರಿಗೇ ಅನ್ಯಾಯವಾದರೂ ತಮ್ಮ ದನಿ ಎತ್ತಬೇಕು ಎಂದು ಅಭಿಪ್ರಾಯಪಟ್ಟರು.

ಇವತ್ತು ಒರಿಸ್ಸಾದಲ್ಲಾಗುತ್ತಿರುವ ಹಿಂಸಾಕೃತ್ಯಗಳು ಕರ್ನಾಟಕದ ಜನರ ಕಣ್ಣು ತೆರೆಸಬೇಕಿದೆ. ಯಾಕೆಂದರೆ ಅಲ್ಲಿ ಕೂಡ ಚಡ್ಡಿಗಳ ಕ್ರೌರ್ಯ ಮೊದಲು ಗುರಿ ಮಾಡಿಕೊಂಡದ್ದು ಮುಸಲ್ಮಾನರನ್ನು. ಅದೀಗ ಕ್ರಿಶ್ಚಿಯನ್ನರತ್ತ ತಿರುಗಿ ಈಗ ನೂರಾರು ಜನರನ್ನು ಬಲಿತೆಗೆದುಕೊಂಡಿದೆ.

ಯಾವುದೇ ಫ್ಯಾಸಿಸ್ಟ್ ಸಂಘಟನೆ ಮೊದಲು ಬಲಿತೆಗೆದುಕೊಳ್ಳುವುದು ಸಂಖ್ಯಾಬಲವಿಲ್ಲದ ಅಲ್ಪಸಂಖ್ಯಾತರನ್ನು. ಆನಂತರ ಅದಕ್ಕೆ ಬಲಿಯಾಗುವುದು ಸಮಾಜದ ಕೆಳವರ್ಗದಲ್ಲಿರುವವರು. ಆದ್ದರಿಂದ ಅಂತಹ ಫ್ಯಾಸಿಸ್ಟರನ್ನು ಎಲ್ಲಾ ಸಮುದಾಯಗಳು, ಅಲ್ಪಸಂಖ್ಯಾತರು, ದಲಿತರು, ಹಿಂದುಳಿದವರು ಜೊತೆಗೂಡಿ ವಿರೋಧಿಸಬೇಕಿದೆ.

ಒರಿಸ್ಸಾದಲ್ಲಿ ಇವತ್ತು ಬಿಜೆಪಿ ಬೆಂಬಲಿತ ಬಿಜೆಡಿ ಪಕ್ಷ ಅಧಿಕಾರದಲ್ಲಿದೆ. ಆ ಕಾರಣದಿಂದ ಅಲ್ಲಿ ಅಲ್ಪಸಂಖ್ಯಾತರ ಮೇಲೆ ಸಂಘ ಪರಿವಾರವು ಮಾರಣಹೋಮ ನಡೆಸುತ್ತಿದ್ದರೂ ಅವರನ್ನು ತಡೆಯುವ ನೈತಿಕ ಧೈರ್ಯ ಅಲ್ಲಿನ ಮುಖ್ಯಮಂತ್ರಿ ನವೀನ್ ಪಟ್ನಾಯಕ್‌ರಿಗೆ ಇಲ್ಲದಂತಾಗಿದೆ.

ಆದರೆ ಈಗ ಕರ್ನಾಟಕದಲ್ಲಿ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರವಿದೆ. ಅವರು ಅಧಿಕಾರ ವಹಿಸಿಕೊಂಡ ದಿನದಿಂದ ಇಲ್ಲಿಯೂ ಅಲ್ಪಸಂಖ್ಯಾತರ ಮೇಲಿನ ದಬ್ಬಾಳಿಕೆ ಹೆಚ್ಚಾಗಿದೆ. ಈಗ ಅಲ್ಲಲ್ಲಿ ನಡೆಯುತ್ತಿರುವ ಇಂತಹ ಕೃತ್ಯಗಳು ಕ್ರಮೇಣ ಹೆಚ್ಚಾಗುವುದರಲ್ಲಿ, ಕೊನೆಗೊಂದು ದಿನ ಕೋಮುದಳ್ಳುರಿಯ ರೂಪ ಪಡೆಯುವುದರಲ್ಲಿ ಯಾವ ಅನುಮಾನಗಳೂ ಉಳಿದಿಲ್ಲ.



ಬರಲಿರುವ ಇಂತಹ ಕರಾಳ ದಿನಗಳ ಬಗ್ಗೆ ಈ ನಿಮ್ಮ 'ಲಂಕೇಶ್' ಮೊದಲಿನಿಂದಲೂ ಎಚ್ಚರಿಸುತ್ತಲೇ ಬಂದಿದೆ. ಈಗಲಾದರೂ ಈ ನಾಡಿದ ಪ್ರಜ್ಞಾವಂತ ಜನ, ಶೋಷಣೆಗೆ ಗುರಿಯಾಗಿರುವ ಸಮುದಾಯಗಳು ಜೊತೆಗೂಡಬೇಕಿದೆ.

* * * * * * *

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದ ಗದ್ದುಗೆಗೇರಿ ನೂರು ದಿನ ತುಂಬಿದೆ ಎಂದು ನಾಳೆಯಿಂದ ಎಲ್ಲಾ ಮಾಧ್ಯಮಗಳಲ್ಲಿ ಬಣ್ಣಬಣ್ಣದ ಜಾಹೀರಾತುಗಳ ಪ್ರವಾಹವನ್ನೇ ನೋಡಲಿದ್ದೇವೆ.

ಆದರೆ ವಾಸ್ತವವಾಗಿ ಈ ನೂರು ದಿನಗಳಲ್ಲಿ ನಡೆದಿರುವುದೇನು?

ಮೊನ್ನೆ ತಾನೇ ಸ್ವತಃ ಯಡಿಯೂರಪ್ಪ ಖಜಾನೆ ಖಾಲಿಯಾಗಿದೆ ಎಂದಿದ್ದಾರೆ. ಯಾವುದೇ ಸರ್ಕಾರ ನೂರುದಿನಗಳಲ್ಲೇ ಖಜಾನೆ ಖಾಲಿ ಮಾಡಿದ್ದು ಒಂದು ದಾಖಲೆಯೇ ಸರಿ ಎಂದು ಟೀಕಾಪ್ರಹಾರ ಶುರುವಾದಾಗ ಯಡ್ಡಿ "ನಾನು ಹಾಗೆ ಹೇಳಲಿ, ಹೊಸ ಯೋಜನೆಗಳಿಗೆ ಕಾಸಿಲ್ಲ ಎಂದಷ್ಟೇ ಹೇಳಿದ್ದೇನೆ" ಎಂದು ಪ್ಲೇಟ್ ಬದಲಾಯಿಸಿದ್ದಾರೆ.

ಹೋಗಲಿ, ಇಲ್ಲಿಯವರೆಗೂ ಯಡ್ಡಿ ಸರ್ಕಾರ ಕಡಿದು ಕಟ್ಟಿ ಹಾಕಿರುವುದಾದರೂ ಏನನ್ನು?

ಅಧಿಕಾರಕ್ಕೆ ಬಂದ ಹೊಸತರಲ್ಲಿ ರೈತರಿಗೆ ಅಗತ್ಯವಿದ್ದ ರಸಗೊಬ್ಬರ ತರಿಸಿಕೊಡದೆ, "ಶೆಟ್ಟರ್‌ಗೆ ಸ್ಪೀಕರ್ ಸ್ಥಾನ, ಶೋಭಾ ಕರಂದ್ಲಾಜೆಗೆ ಕ್ಯಾಬಿನೆಟ್ ಸ್ಥಾನ" ಎಂದೆಲ್ಲಾ ರಾಡಿ ಎಬ್ಬಿಸಿ ಅದರಲ್ಲೇ ಯಡ್ಡಿ ಮುಳುಗಿದ್ದರು. ರಸಗೊಬ್ಬರಕ್ಕಾಗಿ ಕಾದು, ಊರೂರು ಅಲೆದು ಕೊನೆಗೆ ತಾಳ್ಮೆಗೆಟ್ಟ ರೈತರು ಪ್ರತಿಭಟಿಸಲಾರಂಭಿಸಿದಾಗಲೂ ಎಚ್ಚರಗೊಳ್ಳದ ಸರ್ಕಾರ ರೈತರಿಗೆ ಪೊಲೀಸರ ಬಂದೂಕಿನಿಂದ ಉತ್ತರ ನೀಡಿತು. ಹೀಗೆ ಆರಂಭದಲ್ಲಿ ರೈತರ ರಕ್ತವನ್ನು ತನ್ನ ಕೈಗಂಟಿಸಿಕೊಂಡ ಯಡ್ಡಿ ಸರ್ಕಾರ ಆನಂತರವಾದರೂ ಅವರಿಗೆ ಕೊಟ್ಟಿದ್ದ ಮಾತನ್ನು ಉಳಿಸಿಕೊಂಡಿತಾ? ಇಲ್ಲ, ಯಾವ ರೈತರಿಗೆ ಉಚಿತ ವಿದ್ಯುತ್ ನೀಡುತ್ತೇವೆಂದು ಮತ ಯಾಚಿಸಿದ್ದರೋ, ಯಾವ ರೈತರ ಹೆಸರಲ್ಲಿ ಯಡ್ಡಿ ಪ್ರಮಾಣವಚನ ಸ್ವೀಕರಿಸಿದ್ದರೋ, ಯಾವ ಇಪ್ಪತ್ತು ಲಕ್ಷ ರೈತರಿಗೆ ಉಚಿತವಾಗಿ ವಿದ್ಯುತ್ ನೀಡಲಾಗುತ್ತದೆ ಎಂದು ಬಜೆಟ್‌ನಲ್ಲಿ ಘೋಷಿಸಿದ್ದರೋ, ಆ ಯಾವ ರೈತರಿಗೂ ಇವತ್ತಿನ ತನಕ ಉಚಿತ ವಿದ್ಯುತ್ ಸಿಕ್ಕಿಲ್ಲ. ಮಾತ್ರವಲ್ಲ ಕಾಸು ಕೊಟ್ಟರೂ ರೈತರಿಗೆ ಒಂದು ಯೂನಿಟ್ ವಿದ್ಯುತ್ ನೀಡಲು ಸರ್ಕಾರದ ಬಲಿ ಎಲೆಕ್ಟ್ರಿಸಿಟಿಯೇ ಇಲ್ಲ! ಈ ಟ್ರ್ಯಾಜಿ ಕಾಮಿಡಿ ಇಲ್ಲಿಗೆ ಅಂತ್ಯಗೊಳ್ಳುವುದಿಲ್ಲ, ಬದಲಾಗಿ ಕೃಷಿ ಪಂಪ್‌ಸೆಟ್‌ಗಳಿಗೆ ಈಗ ಮೀಟರ್ ಅಳವಡಿಸಬೇಕು ಎನ್ನುತ್ತಿರುವ ಯಡ್ಡಿ ಸರ್ಕಾರ ರೈತ ರಿಂದಲೇ ಹಣ ಸುಲಿಯಲು ತಯಾ ರಾಗಿದೆ.

ಯಡಿಯೂರಪ್ಪನಂತೂ ಅವಕಾಶ ಸಿಕ್ಕಾಗಲೆಲ್ಲ ತಾನು ಎರಡು ಉತ್ತಮ ಬಜೆಟ್‌ಗಳನ್ನು ಮಂಡಿಸಿದ್ದೇನೆ; ತಾನೋರ್ವ ಸಮರ್ಥ ಆರ್ಥಿಕ ತಜ್ಞ ಎಂಬಂತೆ ಬಡಾಯಿ ಕೊಚ್ಚಿಕೊಳ್ಳುತ್ತಾರೆ. ಆದರೆ ಹಣಕಾಸು ನಿರ್ವಹಣೆ ವಿಷಯದಲ್ಲಿ ಇವರಿಗೆಷ್ಟು ಪರಿಣಿತಿ ಇದೆ ಎಂದು ಸಾಬೀತಾಗಲು ರಾಜ್ಯದ ಜನ ನೂರು ದಿನಗಳ ಕಾಲ ಕಾಯಬೇಕಿರಲಿಲ್ಲ. ಅದು ಅವರು ಮುಖ್ಯಮಂತ್ರಿಯಾದ ಕೆಲವೇ ದಿನಗಳಲ್ಲಿ ಜಗಜ್ಜಾಹೀರಾಯಿತು. ನೆನಪಿದೆಯೇ? 'ಆರ್ಥಿಕ ತಜ್ಞ' ಯಡಿಯೂರಪ್ಪ ಹಲ್ಲು ಗಿಂಜುತ್ತಿದ್ದ ಚುನಾವಣಾ ಪ್ರಣಾಳಿಕೆಯಲ್ಲಿ ಬಡವರಿಗೆ ಎರಡೂ ರೂಪಾಯಿಗೆ ಕೆಜಿ ಅಕ್ಕಿ ಕೊಡಲಾಗುವುದು ಎಂಬ ಭರವಸೆ ನೀಡಿದ್ದು? ಆದರೆ ಆದದ್ದೇನು? ಯಡ್ಡಿ ನಡೆಸಿದ ಹಲವಾರು ಹೋಮ, ಹವನ, ಯಜ್ಞಗಳಲ್ಲಿ ಕೇಜಿಗಟ್ಟಲೆ ಭತ್ತ ಭಸ್ಮವಾಯಿತೇ ಹೊರತು ನಾಲ್ಕು ಕಾಳು ಅಕ್ಕಿ ಮಾತ್ರ ಯಾವ ಬಡವನಿಗೂ ಸಿಗಲಿಲ್ಲ. ಇದಕ್ಕಿಂತ ಅಘಾತಕಾರಿಯಾದದ್ದು ಯಡಿಯೂರಪ್ಪ ಮುಖ್ಯಮಂತ್ರಿ ಕುರ್ಚಿಯಲ್ಲಿ ಕೂರುತ್ತಿದ್ದಂತೆ "ಎರಡು ರೂಪಾಯಿಗೆ ಕೆಜಿ ಅಕ್ಕಿ ಕೊಡಕ್ಕೆ ಹೇಗೆ ಸಾಧ್ಯಾರೀ...?" ಎಂದು ಆರ್ಭಟಿಸಿದ್ದು. ಅಕ್ಕಿ ವಿಷಯದಲ್ಲಿ ಉಚಿತ ವಿದ್ಯುತ್ ಕುರಿತಂತೆ ಆದದ್ದೇ ಆಗಿದೆ. ಯಾಕೆಂದರೆ ಎರಡು ರೂಪಾಯಿಗೆ ಕೆಜಿ ಅಕ್ಕಿ ಕೊಡುವುದಿರಲಿ, ನಿಜವಾದ ಬಡವರಿಗೆ ಪಡಿತರ ಚೀಟಿಯನ್ನಾದರೂ ವಿತರಿಸಿ ಅವರಿಗೆ ಕಡಿಮೆ ಬೆಲೆಯಲ್ಲಿ ಧವಸಧಾನ್ಯ ಸಿಗುವಂತೆಯೂ ಯಡ್ಡಿ ಸರ್ಕಾರಕ್ಕೆ ಈ ನೂರು ದಿನಗಳಲ್ಲಿ ಮಾಡಲಾಗಿಲ್ಲ.

ಅತ್ತ ರೈತರು, ಬಡಜನರು ಬಿಜೆಪಿಯ 'ವಚನ ಭ್ರಷ್ಟತೆ'ಯಿಂದ ಕಂಗಾಲಾಗಿದ್ದರೆ ಯಡ್ಡಿ ಮತ್ತವರ ಪಟಾಲಂ ಕ್ಯಾರೇ ಅನ್ನಲಿಲ್ಲ. ಬದಲಾಗಿ ಕೋಟ್ಯಂತರ ರೂಪಾಯಿಗಳ ಹಡಬೆ ದುಡ್ಡನ್ನು ನೀಡಿ ಇತರ ಪಕ್ಷಗಳ ಶಾಸಕರನ್ನು ಖರೀದಿಸುವುದೇ ಅವರೆಲ್ಲರಿಗೆ ಮುಖ್ಯವಾಗಿತ್ತು. ಪ್ರಜಾಪ್ರಭುತ್ವವನ್ನೇ ಅಣಕಿಸುವ, ಜನಮತವನ್ನೇ ಅವಮಾನಿಸುವ ಇಂತಹ ದಗಲ್ಬಾಜಿ ರಾಜಕೀಯಕ್ಕೆ ಯಡ್ಡಿ-ರೆಡ್ಡಿಗಳು ತಮ್ಮ ಪಕ್ಷದ ಲಾಂಛನವನ್ನೇ ಬಳಿಕೊಟ್ಟು ಆಪರೇಷನ್ ಕಮಲ ಎಂದು ಹೆಸರಿಟ್ಟರು.

ಇನ್ನು ಪದ್ಮಪ್ರಿಯಾ ಪ್ರಕರಣದಲ್ಲಿ ಬಿಜೆಪಿ ಪಕ್ಷದ ನಾಯಕರ ನಡವಳಿಕೆಯಂತೂ ಅಸಹ್ಯ ಹುಟ್ಟಿಸುವಂತಿತ್ತು. ಪದ್ಮಪ್ರಿಯಾಳ ಸಾವಿನಲ್ಲಿ ಆಕೆಯ ಗಂಡ ಉಡುಪಿ ಶಾಸಕ ರಘುಪತಿ ಭಟ್ಟ ಮತ್ತು ಕಾರ್ಕಳದ ಮಾಜಿ ಶಾಸಕ ಸುನೀಲ್‌ಕುಮಾರನ ಪಾತ್ರ ಎಷ್ಟಿತ್ತೆಂದು ವಿಚಾರಿಸುವ ಗೋಜಿಗೆ ಇವತ್ತಿನವರೆಗೂ ಪೊಲೀಸರು ಹೋಗಿಲ್ಲ. ಗೃಹ ಸಚಿವರಾಗಿರುವ ವಿ.ಎಸ್. ಆಚಾರ್ಯ ಎಂಬ ವೈದ್ಯನಂತೂ ಅವರಿಬ್ಬರನ್ನು ರಕ್ಷಿಸುವುದಕ್ಕೇ ತನ್ನ ಸಚಿವಗಿರಿ ಮೀಸಲು ಎಂಬಂತೆ ವರ್ತಿಸುತ್ತಿದ್ದಾರೆ.

ಇವತ್ತು ಹೆಸರಿಗೆ ಮಾತ್ರ ಆಚಾರ್ಯ ಗೃಹ ಸಚಿವ ಆಗಿದ್ದರೂ ಆತನ ಇಲಾಖೆಯನ್ನು ಮುಖ್ಯಮಂತ್ರಿಯ ಗೃಹದಿಂದಲೇ ನೋಡಿಕೊಳ್ಳುತ್ತಿರುವುದು ಯಡ್ಡಿ ಪುತ್ರ ವಿಜಯೇಂದ್ರ. ಎಲ್ಲಾ ವರ್ಗಾವರ್ಗಿ ದಂಧೆಯನ್ನು ತಾನೇ ನಿಭಾಯಿಸುತ್ತಿರುವ ವಿಜಯೇಂದ್ರ ಆಚಾರ್ಯರನ್ನು ಪೊಲೀಸ್ ಪೇದೆಯ ಮಟ್ಟಕ್ಕೆ ತಂದು ಕೂರಿಸಿದ್ದಾನೆ.

ಇದೆಲ್ಲ ಒಂದೆಡೆಯಾದರೆ ಇನ್ನೊಂದೆಡೆ ರಾಮಚಂದ್ರಾಪುರದ ರಾಘವೇಶ್ವರ ಸ್ವಾಮಿಗೆ ಗೋಕರ್ಣ ದೇವಸ್ಥಾನ ಮತ್ತು ಅಮೃತಮಹಲ್ ತಳಿ ಅಭಿವೃದ್ಧಿ ಕೇಂದ್ರ ಹಸ್ತಾಂತರ, ಇನ್ನೊಂದೆಡೆ ಆದಿ ಉಡುಪಿ ಪ್ರಕರಣದಲ್ಲಿ ಹಲ್ಲೆಗೊಳಗಾಗಿದ್ದ ಹಾಜಬ್ಬ ಮತ್ತು ಹಸನಬ್ಬ ಕುರಿತ ಕೇಸಿನಲ್ಲಿ ಚಡ್ಡಿಗಳ ಖುಲಾಸೆ, ಮತ್ತೊಂದೆಡೆ ಕ್ರಿಶ್ಚಿಯನ್ನರ ಮತ್ತು ಮುಸಲ್ಮಾನರ ಮೇಲೆ ಹೆಚ್ಚಾಗುತ್ತಿರುವ ದಾಳಿಗಳು, ಎಲ್ಲೆಡೆ ಲಂಗು ಲಗಾಮಿಲ್ಲದೆ ನಡೆಯುತ್ತಿರುವ ಭ್ರಷ್ಟಾಚಾರ....

ಬಿಜೆಪಿ ಅಧಿಕಾರಕ್ಕೆ ಬಂದರೆ ತುಂಬಾ ಬದಲಾವಣೆಗಳಾಗುತ್ತವೆ ಎಂದು ನಂಬಿದ್ದ ರಾಜ್ಯದ ಶೇ. 31 ಮತದಾರರು ಅದನ್ನು ಚುನಾವಣೆಯಲ್ಲಿ ಬೆಂಬಲಿಸಿದ್ದರು. ಹೌದು ಬದಲಾವಣೆಗಳಾಗುತ್ತವೆ ಎಂದು ನಾವೂ ಹೇಳಿದ್ದೆವು. ಈಗ ಶೇ. 31 ಮತದಾರರು ನಿರೀಕ್ಷಿಸಿದ್ದ ಯಾವ ಬದಲಾವಣೆಯೂ ಆಗಿಲ್ಲ. ಬದಲಾಗಿ ನಾವು ಎಚ್ಚರಿಸಿದ್ದೆಲ್ಲವೂ ಹಂತಹಂತದಲ್ಲಿ ಜಾರಿಯಾಗುತ್ತಿದೆ.

ನೂರು ದಿನಗಳಲ್ಲೇ ಇಷ್ಟೆಲ್ಲ ಎಡವಟ್ಟುಗಳನ್ನು ಮಾಡಿರುವ ಈ ಬಿಜೆಪಿ ಸರ್ಕಾರ ಬರುವ ವರ್ಷಗಳಲ್ಲಿ ಇಡೀ ರಾಜ್ಯವನ್ನೇ ಗಬ್ಬೆಬ್ಬಿಸುವುದರ ಬಗ್ಗೆ ಯಾವ ಅನುಮಾನವೂ ಇಲ್ಲ.

ನೂರು ದಿನಗಳನ್ನು ಪೂರೈಸಿರುವುದೇ ಒಂದು ಸಾಧನೆ ಎಂದು ಅದಕ್ಕೆ ತಯಾರಿ ನಡೆಸಲು ಇವತ್ತು ಭಾನುವಾರ ಯಡಿಯೂರಪ್ಪ ತಮ್ಮ ಸಚಿವ ಸಹೋದ್ಯೋಗಿಗಳ ಮತ್ತು ಪಕ್ಷದ ನಾಯಕರ ಸಭೆ ಕರೆದಿದ್ದರು. ಆ ಸಭೆ ಮುಗಿದ ನಂತರ ನನಗೆ ಫೋನ್‌ನಲ್ಲಿ ಸಿಕ್ಕ ಸಚಿವರೊಬ್ಬರು ಯಡಿಯೂರಪ್ಪನ ಕುತಂತ್ರ ಬುದ್ಧಿಗೆ ಒಂದೆರಡು ಉದಾಹರಣೆಗಳನ್ನು ನೀಡಿದರು.

ಅದರಲ್ಲಿ ಒಂದು ಇವತ್ತಿನ ಸಭೆಯಲ್ಲಿ ಯಡಿಯೂರಪ್ಪ "ಮಾಧ್ಯಮದ ಸ್ನೇಹಿತರಿಗೆ ಏನೇನು ಬೇಕೋ ಅದನ್ನೆಲ್ಲ ಒದಗಿಸಿಕೊಡಿ. ಅವರೆಲ್ಲ ನಮ್ಮ ಬಗ್ಗೆ ನಮ್ಮ ಸರ್ಕಾರದ ಬಗ್ಗೆ ಚೆನ್ನಾಗಿ ಬರೆಯುವಂತೆ ನೋಡಿಕೊಳ್ಳಿ" ಎಂದು 'ಸಲಹೆ' ನೀಡಿದ್ದು.

ಒಂದು ಕೋಟಿ ಹಾಸು ಕೆಡುವುದಲ್ಲದೆ.... ■

ಬ್ರಾಹ್ಮಣ ಹುಡುಗಿಯೊಂದಿಗೆ ಸುನೀಲನ ಬ್ಯಾಂಡು ಬಾರ್ಸುಮ್ಮ!

ಆತ ರೌಡಿ ಅನ್ನೋದು ಆಕೆಗೆ ಚೆನ್ನಾಗಿ ಗೊತ್ತಿತ್ತು, ಮತ್ತು ರೌಡಿ ಅನ್ನೋ ಕಾರಣಕ್ಕೆ ಆತನನ್ನು ಪ್ರೀತಿಸುತ್ತಿದ್ದಳು. ಅದೂ ಪಕ್ಕಾ ಸಂಪ್ರದಾಯಸ್ಥ ಮಾಧ್ವ ಬ್ರಾಹ್ಮಣ ಮನೆತನದ ಸರ್ಕಾರಿ ಅಧಿಕಾರಿಯೊಬ್ಬರ ಒಬ್ಬಳೇ ಮಗಳು ಹೋಗಿಹೋಗಿ ಸೈಲೆಂಟ್ ಸುನೀಲನಂಥವನ ಪಾಲಾಗುತ್ತಾಳೆಂದರೆ ಅದನ್ನು ಕರ್ಮ ಅಂತೀರಾ ಹುಚ್ಚು ಅಂತೀರಾ?

ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ವಿಷಾದದಿಂದ ಹೇಳಿದ ಮಾತಿದು.


ಇವತ್ತು ಬೆಂಗಳೂರಿನ ಯಾವುದೇ ಕಾಲೇಜಿನ ಹುಡುಗಿಯರ ಪಾಲಿಗೆ ಹೀರೋಗಳೆಂದರೆ ಯಾರು ಗೊತ್ತೆ?

ರೌಡಿಗಳು!

ತೀರ ಇತ್ತೀಚೆಗೆ ಸೈಲೆಂಟ್ ಸುನೀಲನ ಗ್ಯಾಂಗಿನ ಪೀಸಿ ಉರ್ಫ್ ವಿಜಯಕುಮಾರ್‌ನ ಮದುವೆ ಸುಂಕದಕಟ್ಟೆಯ ಕಲ್ಯಾಣ ಮಂಟಪವೊಂದರಲ್ಲಿ ಅದ್ದೂರಿಯಾಗೇ ನಡೆಯಿತು. ಪೀಸಿಯ ಕೈಹಿಡಿದ ಆ ಪುಣ್ಯಾತಗಿತ್ತಿ ಯಾದರೂ ಯಾರು ಅಂತ ನೋಡಿದರೆ ಆಕೆ ರಾಜಾಜಿನಗರದ ಸಾಯಿ ಮಹಿಳಾ ಕಾಲೇಜಿನ ವಿದ್ಯಾರ್ಥಿನಿ. ತಂದೆ-ತಾಯಿ, ಮನೆ ಎಲ್ಲವನ್ನೂ ತೊರೆದು ಈಕೆ ಒಲಿದದ್ದು ಪೀಸಿ ಎಂಬ ವೀರಪುರುಷನಿಗೆ.

ಸಂತೋಷ, ಬಾಳು ಬಂಗಾರವಾಗಲಿ. ರೌಡಿಯಾದವನು ಸುಸಂಸ್ಕೃತ, ವಿದ್ಯಾವಂತ, ಅನುಕೂಲಸ್ಥರ ಮನೆಮಗಳನ್ನು ಮದುವೆಯಾದ ಕಾರಣಕ್ಕಾದರೂ ಒಳ್ಳೆಯವನಾಗುವುದಾದರೆ ಬೇಡ ಅನ್ನುವವರ್‍ಯಾರು?

ಹಾಗೇ ನಡೆದದ್ದು ಸೈಲೆಂಟ್ ಸುನೀಲನ ಮದುವೆ. ಇಲ್ಲಿಗೆ ತಿಂಗಳ ಹಿಂದೆ ಸುನೀಲನನ್ನು ಮದುವೆಯಾದವಳು ರಾಜಾಜಿನಗರದ ಕೆ.ಎಲ್.ಇ. ಕಾಲೇಜಿನ ವಿದ್ಯಾರ್ಥಿನಿ ರಮ್ಯ (ಹೆಸರು ಬದಲಿಸಿದೆ). ವಿಧಾನಸೌಧದ



ಸೈಲೆಂಟ್ ಸುನೀಲ

ಸಚಿವಾಲಯದಲ್ಲಿ ಡೆಪ್ಯೂಟಿ ಸೆಕ್ರೆಟರಿಯಾಗಿರುವ ಆಕೆಯ ತಂದೆ ಸಂಪ್ರದಾಯಸ್ಥ ಮಾಧ್ವ ಬ್ರಾಹ್ಮಣರು. ಒಬ್ಬಳೇ ಮಗಳು. ಮೊದಮೊದಲು ಯಾರೋ ತನ್ನ ಸಹಪಾಠಿಯನ್ನು ಪ್ರೀತಿಸುತ್ತಿರಬೇಕೆಂದೇ ಲೆಕ್ಕ ಹಾಕಿದರು. ಅದು ಚಿಕ್ಕನಕಣ್ಣು ರಾಜೇಂದ್ರನ ಹಂತಕ ಸುನೀಲನನ್ನು ಎಂದು ಗೊತ್ತಾಗುವ ಹೊತ್ತಿಗೆ ಕಾಲ ಮಿಂಚಿತ್ತು. ಕಂಡಕಂಡ ಪೊಲೀಸ್ ಅಧಿಕಾರಿಗಳನ್ನು ಕಂಡು ಕಣ್ಣೀರಿಟ್ಟರು. ಒಂದಷ್ಟು ದಿನಗಳ ಕಾಲ ಮಗಳನ್ನು ಹೆಬ್ಬಾಳದ ಅಪಾರ್ಟ್‌ಮೆಂಟ್ ಒಂದರಲ್ಲಿ ಕೂಡಿಟ್ಟರು. ಒಂದು ಹಂತದಲ್ಲಿ ಮಗಳು ತಪ್ಪು ತಿದ್ದಿಕೊಂಡಂತೆ ನಟಿಸಿದ್ದಳು.

ಯಾವತ್ತು ಮತ್ತೆ ನಂಬಿ ಕಾಲೇಜಿಗೆ ಕಳಿಸತೊಡಗಿದರೋ ಯಡವಟ್ಟು ನಡೆದೇ ಹೋಯಿತು. ಇಲ್ಲಿಗೆ ಮೂರು ತಿಂಗಳ ಹಿಂದೆ ತನ್ನ ಬಟ್ಟೆ ಬರೆಗಳನ್ನೆಲ್ಲ ಪ್ಯಾಕ್ ಮಾಡಿಕೊಂಡು ನಾಪತ್ತೆಯಾದ ರಮ್ಯ ಮತ್ತೆ ಮನೆಗೆ ಬಂದಿದ್ದು ಮೊನ್ನೆಯೇ. ಅದು ಎಂಥಾ ಶಾಕ್ ಎಂದರೆ ಮಿರಿಮಿರಿ ಮಿಂಚುತ್ತಿದ್ದ ನಲವತ್ತು ಲಕ್ಷ ರೂಪಾಯಿ ಬೆಲೆಬಾಳುವ ಬೆಂಜ್ ಕಾರಿನಲ್ಲಿ ಬಂದಿಳಿದ ಮಗಳ ಬೆಂಗಾವಲಿಗೆ ಒಂದು ಕ್ವಾಲೀಸ್ ಮತ್ತೊಂದು ಸ್ಕಾರ್ಪಿಯೋ ತುಂಬ ಹುಡುಗರಿದ್ದರು!

ಪಕ್ಕಾ ಸಿನಿಮಾ ಹಿರೋಯಿನ್ ಗತ್ತಿನಲ್ಲಿ ಕಾರಿಳಿದ ರಮ್ಯ ಬಂದವಳೇ ತಾನು ಸುನೀಲನ ಜೊತೆ ರಿಜಿಸ್ಟರ್ಡ್ ಮದುವೆಯಾದ ದಾಖಲೆ ಪತ್ರಗಳನ್ನು ಅಪ್ಪನ ಮುಖಕ್ಕೆ ಬೀಸಾಕಿದ್ದೇ ತನ್ನ ಅಳಿದುಳಿದ ವಸ್ತ್ರಗಳನ್ನೂ ಹೊತ್ತೊಯ್ದಿದ್ದಾಳೆ. ಯಾವ ತಂದೆ ತಾನೇ ಏನು ಮಾಡಲು ಸಾಧ್ಯ?

ಮೊದಲೇ ರೌಡಿ. ಸಾವಿನ ಕತ್ತಿ ಸದಾ ತೂಗುತ್ತಲೇ ಇದೆ. ಯಾವ ಹೊತ್ತಲ್ಲಿ ಏನಾಗುತ್ತೋ.

ಇಲ್ಲಿಗೆ ಮೂರು ವರ್ಷದ ಹಿಂದೆ ಕೊಲೆಯಾದ ಕಾಮಾಕ್ಷಿಪಾಳ್ಯದ ಮಚ್ಚನದ್ದೂ ಲವ್ ಮ್ಯಾರೇಜೇ. ಮೂಲತಃ ಬಂಗಾರಪೇಟೆಯ ಬಿಲ್ಡಿಂಗ್ ಕಂಟ್ರಾಕ್ಟರ್ ಒಬ್ಬನ ಮಗಳು ಮಂಜುಳಾ ಅದ್ಯಾವ ಗಳಿಗೆಯಲ್ಲಿ ಮಚ್ಚನ ಕಣ್ಣಿಗೆ ಬಿದ್ದಳೋ. ಮಚ್ಚ ಜೈಲಲ್ಲಿದ್ದಷ್ಟೂ ದಿನ ವಾರಕ್ಕೆರಡು ಬಾರಿ 'ಇಂಟರ್‌ವ್ಯೂ'ಗೆ ಬರುತ್ತಿದ್ದಳು. ಮಚ್ಚ ಬಿಡುಗಡೆಯಾಗಿ ಬಂದದ್ದೇ ಮದುವೆಯೂ ಮುಗಿಯಿತು. ಫಲಿತಾಂಶವೇನು?

ಬೇಡ, ಇತ್ತೀಚೆಗೆ ಕೊಲೆಯಾದ ಮಂಡ್ಯದ ರೌಡಿ ಜಡೇಜಾ ರವಿಯನ್ನೇ ತೆಗೆದುಕೊಂಡರೆ, ಆತನ ಪತ್ನಿ ಪೂರ್ಣಿಮಾಳದ್ದೂ ಇದೇ ಕತೆ. ಜಡೇಜಾ ರವಿಯ ಹೆಣದ ಮುಂದೆ ಕೂತು ಕಣ್ಣೀರಿಡುತ್ತಿದ್ದ ಆಕೆಯ ಫೋಟೋ ನೋಡಿದ ಯಾರಿಗಾದರೂ ಹೊಟ್ಟೆ ಉರಿಯಲೇಬೇಕು. ಕೆ.ಎಂ. ದೊಡ್ಡಿಯ ಭಾರತಿ ಕಾಲೇಜಿನಲ್ಲಿ ಪಿಯುಸಿ ಓದಿಕೊಂಡಿದ್ದ ಪೂರ್ಣಿಮಾಳಿಗೆ ತಾನು ಪ್ರೀತಿಸುತ್ತಿದ್ದ ಜಡೇಜಾ ರವಿ ಓರ್ವ ರೌಡಿ ಎಂಬುದು ಗೊತ್ತಾಗುವ ಹೊತ್ತಿಗಾಗಲೇ ಚೀರನಹಳ್ಳಿ ಶಂಕ್ರನ ಕೊಲೆ ನಡೆದುಹೋಗಿತ್ತು.

ಆ ಹಂತದಲ್ಲೇ ಮನಸ್ಸು ಬದಲಾಯಿಸಿದ ಪೂರ್ಣಿಮಾಳಿಗೆ ಬೇರೆ ಹುಡುಗನೊಬ್ಬನ ಜೊತೆ ನಿಶ್ಚಿತಾರ್ಥವೂ ಆಗಿತ್ತು. ಆದರೆ ಮದುವೆಗೆ ಮೊದಲೇ ಜೈಲಿಂದ ಹೊರಬಿದ್ದ ಜಡೇಜಾ ರಾಜಾರೋಷವಾಗಿ ಆಕೆಯನ್ನು ಹೊತ್ತೊಯ್ದು ಮದುವೆ ಮಾಡಿಕೊಂಡ.

ಕೇವಲ ಎರಡೇ ವರ್ಷಕ್ಕೆ ಪೂರ್ಣಿಮಾ ವಿಧವೆಯಾಗಿದ್ದಳು!

ವಿಪರ್ಯಾಸವೆಂದರೆ ಮಚ್ಚನ ಹೆಂಡತಿಯ ತಮ್ಮ ಉಮೇಶನೇ ಜಡೇಜಾ ರವಿಯ ಕೊಲೆ ಕೇಸಿನಲ್ಲಿ ಪ್ರಮುಖ ಆರೋಪಿಯಾಗಿದ್ದ. ಇವತ್ತು ಕೆಎಲ್‌ಇ, ರಾಜಾಜಿನಗರದ ಸಾಯಿ, ಬಸವನಗುಡಿಯ ಬಿಎಂಎಸ್, ಲಕ್ಷ್ಮಿ ಅಮ್ಮಣ್ಣಿ ಎನ್‌ಎಂಕೆಆರ್‌ವಿಯಂಥ ಕಾಲೇಜುಗಳ ಮುಂದೆ ಹೇಗೆ ಪೋಕರಿಗಳು ಇಟ್ಟಾಡುತ್ತಾರೋ ಹಾಗೇ ಕಾಲೇಜು ಹುಡುಗಿಯರಲ್ಲೂ ವಿಕೃತಿಯೊಂದು ಹೆಡೆಯೆತ್ತಿದೆ. 'ಲವ್ ಮಾಡೋಕ್ಕೆ ರೌಡಿಯೇ ಆಗಿರಬೇಕು. ಒಂದಲ್ಲ ಡಬ್ಬಲ್ ಮರ್ಡರ್ ಮಾಡಿದ ರೌಡಿಯಾಗಿದ್ದರೆ ಆತನೇ ಹೀರೋ!'

ಇಂಥ ಮನಸ್ಥಿತಿಯ ಹುಡುಗಿಯರ ಹಿಂಡೊಂದು ಸದಾ ಬೆಂಗಳೂರು ಸೆಂಟ್ರಲ್ ಜೈಲಿನ ಮುಂದೆ ಠಳಾಯಿಸುತ್ತಿದ್ದದ್ದು, ಅದೂ ಸೈಲೆಂಟ್ ಸುನೀಲನ ಕಾರಣಕ್ಕೇ ಬರುತ್ತಿದ್ದದ್ದು, ಅವರೆಲ್ಲರೂ ಬೆಂಗಳೂರಿನ ಸಂಪ್ರದಾಯಸ್ಥ ಅನುಕೂಲಸ್ಥ ಮನೆತನದ ಹುಡುಗಿಯರೇ ಆಗಿದ್ದದ್ದು, ಈ ಪೈಕಿ ಒಟ್ಟೊಟ್ಟಿಗೇ ಮೂರ್‍ನಾಲ್ಕು ಮಂದಿ ಹುಡುಗಿಯರ ಜೊತೆ ಸುನೀಲನಿಗೆ ಸಲುಗೆಯಿದ್ದದ್ದು; ಇತ್ಯಾದಿಗಳೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಪೊಲೀಸ್ ಅಧಿಕಾರಿಯೊಬ್ಬರು ಅನಾಹುತಕಾರಿ

ಚಾಮರಾಜನಗರ: ಎಮ್ಮೆಲ್ಲೆ ಮಗಳನ್ನು ಪ್ರೀತಿಸಿದ್ದಕ್ಕೆ ಗೂಸಾ ತಿಂದ!

ಚಾಮರಾಜನಗರ ಜಿಲ್ಲೆಗೆ ಅಮರಿಕೊಂಡ ಶನಿಗಳು ಸದ್ಯಕ್ಕೆ ತೊಲಗುವಂತೆ ಕಾಣುತ್ತಿಲ್ಲ. ಈ ಎಲ್ಲ ಶನಿಗಳಿಗೆ ಚಾಮರಾಜನಗರ ಕ್ಷೇತ್ರದ ಶಾಸಕನಾಗಿರುವ ಪುಟ್ಟರಂಗಶೆಟ್ಟಿಯೇ ನೇತೃತ್ವ ವಹಿಸಿದ್ದಾನೆಂದ ಮೇಲೆ ಕ್ಷೇತ್ರದ ಜನರ ಪರಿಸ್ಥಿತಿ ಅದ್ಯಾವ ಮಟ್ಟಕ್ಕೆ ಹೋಗಿರಬೇಡ? ಪುಟ್ಟರಂಗಶೆಟ್ಟಿ ಶಾಸಕನಾಗಿ ಕ್ಷೇತ್ರಕ್ಕೆ ಏನು ಕೊಡುಗೆ ಕೊಟ್ಟನೋ ಬಿಟ್ಟನೋ ಗೊತ್ತಿಲ್ಲ. ಆದರೆ ತನ್ನ ಮಗ ಚಾಮರಾಜ್ ಎಂಬ ಗೂಂಡಾನನ್ನಂತೂ ಕೊಡುಗೆಯಾಗಿ ಕೊಟ್ಟಿದ್ದಾನೆ. ಶಾಸಕ ಅಪ್ಪ, ರೌಡಿ ಮಗ ಸೇರಿಕೊಂಡು ಚಾಮರಾಜನಗರದಲ್ಲಿ ಮಧ್ಯಯುಗೀನ ದಬ್ಬಾಳಿಕೆಯನ್ನು ಶುರುಹಚ್ಚಿಕೊಂಡಿದ್ದಾರೆ.



ಮೊನ್ನೆ ನಡೆದ ಒಂದು ಪುಟ್ಟ ಘಟನೆಯನ್ನೇ ನೋಡಿ. ಶಾಸಕ ಪುಟ್ಟರಂಗಶೆಟ್ಟಿಯ ಮಗಳು ಕುಸುಮ ಮತ್ತು ಕೊಳ್ಳೇಗಾಲದ ಆಟೋಚಾಲಕ ಪರಶಿವಮೂರ್ತಿ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದಾರೆ ಎಂಬ ಕಾರಣಕ್ಕೆ, ಆಟೋಚಾಲಕನನ್ನು ದನಕ್ಕೆ ಬಡಿಯುವಂತೆ ಬಡಿದು ಸಾವಿನಂಚಿಗೆ ತಂದು ನಿಲ್ಲಿಸಿದ್ದಾರೆ. ಈ ಬರ್ಬರ ಕೃತ್ಯವನ್ನು ಎಸಗಿದ ಮಹಾಶಯ ಬೇರಾರೂ ಅಲ್ಲ, ಶಾಸಕನ ಮಗ, ಆ ಹುಡುಗಿಯ ಅಣ್ಣ ಚಾಮರಾಜ್.


ನಡೆದಿದ್ದಿಷ್ಟು:

ಶಾಸಕ ಪುಟ್ಟರಂಗಶೆಟ್ಟಿಯ ಮಗಳು ಕುಸುಮ ಕೊಳ್ಳೇಗಾಲದ ಮಾನಸ ಕಾಲೇಜಿನಲ್ಲಿ ಅಂತಿಮ ವರ್ಷದ ಬಿಬಿಎಂ ಓದುತ್ತಿದ್ದಳು. ಆಕೆ ತನ್ನ ಸ್ವಂತ ಊರಾದ ಯಳಂದೂರಿನಿಂದ ಪ್ರತಿದಿನ ಕೊಳ್ಳೇಗಾಲದಲ್ಲಿರುವ ಕಾಲೇಜಿಗೆ ಬರುತ್ತಿದ್ದಳು. ಅದ್ಹೇಗೋ ಈ ನಡುವೆ ಕೊಳ್ಳೇಗಾಲದ ಆಟೋಚಾಲಕ ಪರಶಿವಮೂರ್ತಿಗೂ ಮತ್ತು ಕುಸುಮಾಳಿಗೂ ಪರಿಚಯವಾಗಿದೆ. ನಂತರ ಈ ಪರಿಚಯ ಸ್ನೇಹವಾಗಿಯೂ ಆಮೇಲೆ ಪ್ರೇಮವಾಗಿಯೂ ಮಾರ್ಪಟ್ಟಿದೆ.

ಈ ವಿಷಯ ಕಿವಿಯಿಂದ ಕಿವಿಗೆ ಹರಡಿ ಅಂತೂಇಂತೂ ಕುಸುಮಳ ಅಣ್ಣ ಚಾಮರಾಜ್ ಕಿವಿಗೂ ಬಿದ್ದಿದೆ. ಮೊದಲೇ ಅಪ್ಪನ ಅಧಿಕಾರದ ಮದದಲ್ಲಿ ಮೆರೆಯುತ್ತಿರುವ ಚಾಮರಾಜ್ 'ಎಮ್ಮೆಲ್ಲೆ ಮಗಳನ್ನೇ ಪ್ರೀತಿಸುವಷ್ಟು ಧೈರ್ಯ ಬಂತೇ ಆ ಆಟೋ ಡ್ರೈವರ್‌ಗೆ?' ಎಂದು ಹೂಂಕರಿಸುತ್ತಾ ರೌಡಿಸಂನಲ್ಲಿ ಎಕ್ಸ್‌ಪರ್ಟ್ ಆಗಿರುವ ತನ್ನ ಗೂಂಡಾಪಡೆಯನ್ನು ಟಾಟಾ ಸುಮೋಗೆ ಹತ್ತಿಸಿಕೊಂಡು ಸೀದಾ ಕೊಳ್ಳೇಗಾಲಕ್ಕೆ ಬಂದಿದ್ದಾನೆ. ಅದು ಆಗಸ್ಟ್ ತಿಂಗಳ 27ನೇ ತಾರೀಖು. ಕೊಳ್ಳೇಗಾಲದ ಸಂತೋಷ್ ಬೇಲ್‌ಪುರಿ ಅಂಡ್ ಚಾಟ್ಸ್ ಎದುರು ಪರಶಿವಮೂರ್ತಿಯನ್ನು ಅಟಕಾಯಿಸಿಕೊಂಡು, ಆತನ ಬಟ್ಟೆ ಬಿಚ್ಚಿ ಕಬ್ಬಿಣದ ರಾಡುಗಳಿಂದ ಮನಬಂದಂತೆ ಹಿಗ್ಗಾಮುಗ್ಗಾ ಬಡಿದು ಹಾಕಿದ್ದಾರೆ. ಹತ್ತಾರು ರೌಡಿಗಳ ಮಧ್ಯೆ ಏಕಾಂಗಿಯಾಗಿ ಒದೆತಿಂದು ಅರೆಪ್ರಜ್ಞಾವಸ್ಥೆ ತಲುಪಿದ ಆ ಹುಡುಗನ್ನು ಅಲ್ಲೇ ರಸ್ತೆಯಲ್ಲಿ ಬಿಸಾಡಿ ಹೊರಟುಹೋಗಿದ್ದಾರೆ.

ವಿಷಯ ಗೊತ್ತಾದ ತಕ್ಷಣ ಪರಶಿವಮೂರ್ತಿಯ ಸ್ನೇಹಿತರು ಆತನನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ನಂತರ ಸೀದಾ ಮಾಜಿ ಸಚಿವ ವಿ. ಶ್ರೀನಿವಾಸ ಪ್ರಸಾದ್‌ರ ಬಳಿ ಹೋಗಿ ಶಾಸಕ ಪುಟ್ಟರಂಗಶೆಟ್ಟಿ ಮತ್ತು ಮಗ ಚಾಮರಾಜನ ವಿರುದ್ಧ ಹರಿಹಾಯ್ದಿದ್ದಾರೆ. ಆದರೆ ಪ್ರಸಾದರು ಪುಟ್ಟರಂಗಶೆಟ್ಟಿಯನ್ನು ಕರೆಸಿ ಕೆಲ ಮುಖಂಡರ ಮಧ್ಯಸ್ಥಿಕೆಯಲ್ಲಿ ರಾಜಿ ಪಂಚಾಯತಿ ಮಾಡಿ ಯಾವ ಕಾರಣಕ್ಕೂ ಕಂಪ್ಲೇಂಟ್ ಕೊಡಕೂಡದೆಂದು ಸೂಚಿಸಿ ಸಾಗಿಹಾಕಿದ್ದಾರೆ.

ಗೂಂಡಾಗಳ ರಕ್ಷಣೆಗೆ ಪೊಲೀಸರು



ಮುತ್ತದೇವು

ಪರಶಿವಮೂರ್ತಿಯ ಸ್ನೇಹಿತರು ಯಾವ ಧಮಕಿಗೂ ಕಿವಿಗೊಡದೇ ನೇರವಾಗಿ ಪೊಲೀಸ್ ಠಾಣೆಗೆ ಹೋಗಿ ಕಂಪ್ಲೇಂಟ್ ಕೊಟ್ಟಿದ್ದಾರೆ. ಆದರೆ, ಮಾರಣಾಂತಿಕ ಹಲ್ಲೆ ನಡೆಸಿರುವುದು ಶಾಸಕನ ಮಗ. ಹಲ್ಲೆಗೊಳಗಾದವನು ಅವರ ಪ್ರಕಾರ ಯಃಕಶ್ಚಿತ್ ಒಬ್ಬ ಆಟೋ ಡ್ರೈವರ್. ಅಂದ ಮೇಲೆ ಪೊಲೀಸರು ಯಾರ ಪರ ವಹಿಸುತ್ತಾರೆಂದು ನೀವೇ ಯೋಚಿಸಬಹುದು.



ಚಾಮರಾಜು

ಪೆಟ್ಟುತಿಂದ ಪರಶಿವಮೂರ್ತಿ ಅತ್ತ ಆಸ್ಪತ್ರೆಯಲ್ಲಿ ಜೀವನ್ಮರಣದ ಹೋರಾಟ ನಡೆಸುತ್ತಿದ್ದರೂ ಪೊಲೀಸರು ಅತ್ತ ಸುಳಿಯಲಿಲ್ಲ. ಇದರಿಂದ ಮತ್ತೆ ಕ್ರೋಧಗೊಂಡ ಜನ ಪೊಲೀಸ್ ಠಾಣೆಯ ಎದುರೇ ಧರಣಿಗಿಳಿದಾಗ ಅಂತಿಮವಾಗಿ ಬೆದರಿದ ಪೊಲೀಸರು ಚಾಮರಾಜ್ ಮತ್ತವನ ಗ್ಯಾಂಗ್ ಮೇಲೆ ಒಂದೆರಡು ಪೆಟ್ಟಿ ಕೇಸ್ ದಾಖಲಿಸಿ ಕೈತೊಳೆದು ಕೊಂಡಿದ್ದಾರೆ.

ಈ ಮಧ್ಯೆ ಪುಟ್ಟರಂಗಶೆಟ್ಟಿ ಹಲ್ಲೆಗೊಳಗಾದ ಪರಶಿವಮೂರ್ತಿಯ ಮೇಲೂ ಒತ್ತಡ ತಂದು ಕೊಟ್ಟಿರುವ ಕಂಪ್ಲೇಂಟ್ ವಾಪಸ್ಸು ಪಡೆದುಕೊಳ್ಳುವಂತೆ ಬೆದರಿಸುತ್ತಿದ್ದಾರೆ. ಒಂದು ಲಕ್ಷ ರೂಪಾಯಿ ಕೊಟ್ಟು ಒಂದು ಆಟೋ ಕೊಂಡು ಕೊಡುತ್ತೇವೆ ಕಂಪ್ಲೇಂಟ್ ವಾಪಸ್ಸು ತೆಗೆದುಕೋ ಎಂದೂ ಜೋತು ಬಿದ್ದಿದ್ದಾರೆ.

ದುರಂತ ಎಂದರೆ ಜನಪ್ರತಿನಿಧಿಯೊಬ್ಬನ ಮಗ ಪರಶಿವಮೂರ್ತಿ ಎಂಬ ದಲಿತ ಯುವಕನಿಗೆ ಈ ರೀತಿ ನಡುಬೀದಿಯಲ್ಲಿ ಅರೆಬೆತ್ತಲೆ ಮಾಡಿ ಮನಸೋ ಇಚ್ಛೆ ಥಳಿಸಿ ಸಾವಿನ ದವಡೆಗೆ ನೂಕಿದ್ದರೂ ಯಾವ ದಲಿತ ನಾಯಕನೂ ಇದರ ಬಗ್ಗೆ ಮಾತನಾಡಿಲ್ಲ. ತಹಶೀಲ್ದಾರ್ ಕಚೇರಿಯೆದುರು, ಡಿಸಿ ಕಚೇರಿಯೆದುರು ಪೈರವಿ ಮಾಡುವುದರಲ್ಲೇ ಬಿಸಿಯಾಗಿರುವ ದಲಿತ ನಾಯಕರಿಗೆ ಇಂಥ ಒಳ್ಳೆ ಕೆಲಸ ಮಾಡಲು ಪಾಪ ಟೈಮಿಲ್ಲದೆ ಬಿಡಿ.

ಇದೇ ಮೊದಲಲ್ಲ!

ಪುಟ್ಟರಂಗಶೆಟ್ಟಿಯ ಮಕ್ಕಳ ಹಾವಳಿ ನಿನ್ನೆಮೊನ್ನೆಯದೇನಲ್ಲ. ಅಪ್ಪ ರಾಜಕೀಯದಲ್ಲಿ ಒಂದೊಂದೇ ಹೆಜ್ಜೆ ಬೆಳೆದಂತೆಲ್ಲಾ ಮಕ್ಕಳ ಗೂಂಡಾಗಿರಿಯೂ ಬೆಳೆಯುತ್ತಲೇ ಇದೆ. ಎಷ್ಟರಮಟ್ಟಿಗೆ ಎಂದರೆ ಮಾನವಂತ ಹುಡುಗಿಯರು ಚಾಮರಾಜನ ಕಾಟ ತಾಳದೇ ಮುಖ ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಚಾಮರಾಜನಗರದಲ್ಲಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮೊನ್ನೆ ಯಳಂದೂರಿನಲ್ಲಿ ಕ್ರೀಡಾಕೂಟದ ಸಮಯದಲ್ಲಿ ಇದೇ ಚಾಮರಾಜ ಹುಡುಗಿಯರನ್ನು ಚುಡಾಯಿಸಿ ಒದೆ ಇಕ್ಕಿಸಿಕೊಳ್ಳುವುದರಲ್ಲಿದ್ದ. ಅವತ್ತು ಇವನ ಕಿತಾಪತಿ ಪ್ರಶ್ನಿಸಿದ್ದ ಪೊಲೀಸ್ ಪೇದೆಗೆ ಅವನದೇ ಲಾಠಿ ಕಸಿದುಕೊಂಡು ಬಾರಿಸಿ ಪೊಲೀಸ್ ಠಾಣೆಗೆ ಹೋಗಿದ್ದ. ಆದರೆ ಈತ ಶಾಸಕನ ಮಗ ಎಂಬ ಒಂದೇ ಕಾರಣಕ್ಕೆ ಡ್ಯೂಟಿ ಮೇಲಿದ್ದ ಪೊಲೀಸ್ ಪೇದೆಗೆ ಬಡಿದರೂ ಅವನಿಗೆ ಇಲಾಖೆ ಏನೂ ಮಾಡಲಾಗಲಿಲ್ಲ.

ಚಾಮರಾಜನಗರಕ್ಕೆ ವಾಟಾಳ್ ನಾಗರಾಜ್ ಶಾಸಕನಾಗಿದ್ದಾಗ ಕ್ಷೇತ್ರ ಅಭಿವೃದ್ಧಿ ಕಾಣದಿದ್ದರೂ ಪರವಾಗಿರಲಿಲ್ಲ. ಆದರೆ ಇಂಥ ದೌರ್ಜನ್ಯವನ್ನಂತೂ ಕಂಡಿರಲಿಲ್ಲ. ಪುಟ್ಟರಂಗಶೆಟ್ಟಿ ಶಾಸಕನಾಗಿ ಇನ್ನೂ ಒಂದು ವರ್ಷವೂ ಆಗಿಲ್ಲ. ಆಗಲೇ ಅವನ ಮತ್ತವನ ಮಕ್ಕಳ ಗೂಂಡಾಗಿರಿ ಎಲ್ಲೇಮೀರಿದೆ. ಮುಂದಿನ ಚುನಾವಣೆ ತನಕ ಅಪ್ಪ-ಮಕ್ಕಳ ರೌಡಿಸಂ ಅನ್ನು ಸಹಿಸಿಕೊಳ್ಳಬೇಕಾದ ದೌರ್ಭಾಗ್ಯ ಚಾಮರಾಜನಗರದ ಜನರದ್ದು. ಪುಟ್ಟರಂಗಶೆಟ್ಟಿಯ ಬಗ್ಗೆ ಗೊತ್ತಿದ್ದೂ ಗೊತ್ತಿದ್ದೂ ಅವನನ್ನು ಶಾಸಕನನ್ನಾಗಿ ಆರಿಸಿದ ತಪ್ಪಿಗೆ ಪ್ರತಿಫಲ ಉಣ್ಣುತ್ತಿದ್ದಾರಷ್ಟೆ.

■ ಕೊಳ್ಳೇಗಾಲ ಮಾಳಿಗೆ

ಹತ್ಯೆಯೊಂದನ್ನು ಅತ್ಯಂತ ಚಾಣಾಕ್ಷತೆಯಿಂದ ತಡೆದಿದ್ದೇ ರೋಚಕ ಕತೆ.

ಸುನೀಲನ ಗ್ಯಾಂಗ್‌ನ ಹುಡುಗನೊಬ್ಬ ಪ್ರೀತಿಸುತ್ತಿದ್ದ ಕಾಲೇಜು ಹುಡುಗಿಗೆ ಇನ್ನಾರೋ ಹುಡುಗನ ಜೊತೆ ನಿಶ್ಚಿತಾರ್ಥವಾಗಿತ್ತು. ರೌಡಿ ಸಹವಾಸದಲ್ಲಿದ್ದ ಈಕೆ ಯಾವ ಮಟ್ಟಕ್ಕೆ ಪ್ಲಾನ್ ಮಾಡಿದ್ದಳೆಂದರೆ, ನಿಶ್ಚಿತಾರ್ಥವಾಗಿದ್ದ ಹುಡುಗನನ್ನು ತಾನು ಉಪಾಯವಾಗಿ ಲಾಲ್‌ಬಾಗ್‌ಗೆ ಕರೆತರುತ್ತೇನೆಂದೂ, ಅಲ್ಲಿ ಉಪಾಯವಾಗಿ ಆತನನ್ನು ಕೊಂದು ಬಿಡಿ ಎಂದು ತನ್ನ ಪ್ರಿಯಕರನಿಗೆ ಹುಚ್ಚಿಕೊಟ್ಟಿದ್ದಳು. ತನ್ನ ಬಳಿಯಿದ್ದ ಮೊಬೈಲ್‌ನಿಂದ ಲಾಲ್‌ಬಾಗ್‌ನಲ್ಲಿ ತಾನಿರುವ ಜಾಗದ ಮಾಹಿತಿ ಕೊಡುತ್ತಿದ್ದಳು. ಇನ್ನೇನು ಫೋರ್ಕ್ ಹಿಂದು ನುಗ್ಗಿ ಆತನನ್ನು ಕತ್ತರಿಸಬೇಕೆನ್ನುವಷ್ಟರಲ್ಲಿ ಫೋನ್ ಕದ್ದಾಲಿಸುತ್ತಿದ್ದ ಆ ಪೊಲೀಸ್ ಅಧಿಕಾರಿ ಎಂಟ್ರಿ ಕೊಟ್ಟರು.

ಅಲ್ಲಿಗೆ ಕೊಲೆಯೂ ತಪ್ಪಿತು. ಮದುವೆಯೂ ರದ್ದಾಯಿತು. ಅಚ್ಚರಿಯ ಸಂಗತಿಯೇನೆಂದರೆ ಸುನೀಲನ ಗ್ಯಾಂಗ್‌ನ ಬಹುತೇಕ ಹುಡುಗರೆಲ್ಲ ಪಟಾಯಿಸಿದ್ದು ಇಂಥ ಅನುಕೂಲಸ್ಥ ಮನೆತನದ ಕಾಲೇಜು ಹುಡುಗಿಯರನ್ನೇ!

ಬುದ್ಧಿ ಇನ್ನೂ ಬಲಿತಿರುವುದಿಲ್ಲ. ಅಪ್ಪ ಅಮ್ಮಂದಿರ ಬುದ್ಧಿ ಮಾತು ಇಷ್ಟವಾಗುವುದಿಲ್ಲ. ಕಾಲೇಜಿನ ಪರಿಸರಕ್ಕೂ, ಬರುತ್ತಿರುವ ಮಚ್ಚು ಲಾಂಗ್‌ಗಳ ಸಿನಿಮಾಗಳಿಗೂ ಮತ್ತು ಪಡ್ಡೆ ಹುಡುಗರ ಮನಸ್ಥಿತಿಗೂ ಅಂಥ ವ್ಯತ್ಯಾಸಗಳಿಲ್ಲ. ಕಾಲೇಜು ಕ್ಯಾಂಪಸ್ಸುಗಳ ವಾತಾವರಣವೇ ಹಾಗಿದೆ. ಅಲ್ಲಿ ಫ್ಯಾಷನ್ ಷೋ ಬಿಟ್ಟರೆ ಮಹತ್ವ ಪಡೆಯುವುದು ರೌಡಿಸಂ ಮಾತ್ರ. ಇಂಥ ಭ್ರಮೆಗೆ ಬಿದ್ದೇ ಹುಡುಗಿಯರು ರೌಡಿಗಳನ್ನು ರಿಯಲ್ ಲೈಫಿನ ಹೀರೋಗಳೆಂದು ಭಾವಿಸುತ್ತಾರೆ. ಆರಾಧಿಸುತ್ತಾರೆ. ಹೀಗೆ ಯಾರೆಲ್ಲ ಭ್ರಮೆಗೆ ಬಿದ್ದು ರೌಡಿಗಳ ಕೈ ಹಿಡಿದಿದ್ದಾರೋ ಅಂಥ ಯಾರ ಬದುಕು ಉದ್ಧಾರವಾಗಿದೆ? ಮದುವೆಯಾಗಿ ಒಂದೋ ಎರಡೋ ವರ್ಷಕ್ಕೇ ವಿಧವೆಯಾದ ಸೋಕಾಲ್ಡ್ ರೌಡಿಗಳ ಪತ್ನಿಯರು ಕಣ್ಣೀರಿಡುತ್ತಿರುವ ಚಿತ್ರವನ್ನು ಏಕೆವರು ಮರೆತು ಬಿಡುತ್ತಾರೆ?

ಇದೇನೇ ಇರಲಿ, ಸುನೀಲ ಮತ್ತು ಆತನ ಕೈಹಿಡಿದ ರಮ್ಯಳ ಬಾಳು ಬಂಗಾರವಾಗಲಿ. ಕನಿಷ್ಠ ಈ ಕಾರಣಕ್ಕಾದರೂ ಸುನೀಲ ಮಚ್ಚು ಕೆಳಗಿಟ್ಟು ಮನುಷ್ಯನಾಗಲಿ.

■ರಾ. ಸೋ.

ಡೆಡ್ಲಿ ಸೋಮನ ನಂತರ....

ಹೀಗೆ ರೌಡಿಗಳ ಹುಚ್ಚಿಗೆ ಬಿದ್ದು ಮೊದಲ ಬಾರಿ ಸುದ್ದಿಯಾದವಳು ಡೆಡ್ಲಿ ಸೋಮನ ಹೆಂಡತಿ ಜಯಶ್ರೀ. ಆಕೆ ಕೂಡ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದವಳೇ. ಸೋಮ ಪೊಲೀಸ್ ಎನ್‌ಕೌಂಟರ್‌ಗೆ ಬಲಿಯಾದ ಮೇಲೆ ಅದೇ ಸೋಮನ ಬಂಟ ರಾಜಶೇಖರ ಆಕೆಯ ಕೈಹಿಡಿದ. ಆಮಟ್ಟಿಗೆ ಜಯಶ್ರೀ ಪುಣ್ಯವಂತೆ!

ಇದೇ ರೀತಿ ಪೊಲೀಸ್ ಎನ್‌ಕೌಂಟರ್‌ನಲ್ಲಿ ಬಲಿಯಾದ ಶಿವಮೊಗ್ಗ ನಾಗನೂ ಕೂರ್ಗಿ ಹುಡುಗಿಯೊಬ್ಬಳನ್ನು ಮದುವೆಯಾಗಿದ್ದ. ಆತನ ಸ್ವೆಚ್ಛೆಗೆ ಬಲಿಯಾದವನು ಕೊರಂಗು ಶಿಷ್ಯ ದೀಪು. ಚಿತ್ರದುರ್ಗ ಸಮೀಪದ ಜವಗೊಂಡನಹಳ್ಳಿಯ ಡಾಬಾಕ್ಕೆ ನುಗ್ಗಿದ ಹೆಬ್ಬೆಟ್ಟು ಮಂಜನ ಗ್ಯಾಂಗ್ ಕೊರಂಗುವನ್ನು ಅರೆಜೀವ ಮಾಡುವುದಕ್ಕೂ ಆತನ ಬಂಟ ದೀಪುವನ್ನು ಗುಂಡಿಟ್ಟು ಮುಗಿಸಿತ್ತು. ಆದರೆ ಆ ಹೊತ್ತಿಗಾಗಲೇ ದೀಪು ಮಡಿಕೇರಿಯಲ್ಲಿದ್ದ ಆ ಕಾಲೇಜು ಹುಡುಗಿಯನ್ನು ಮದುವೆಯಾಗಿದ್ದ. ಬೆಂಗಳೂರಿನ ಲಕ್ಷ್ಮಿ ಅಮ್ಮಣ್ಣಿ ಕಾಲೇಜಿನಲ್ಲಿದ್ದಾಗಲೇ ಆಕೆಗೆ ದೀಪು ಗಂಟು ಬಿದ್ದಿದ್ದ.


ಮೆಂಟಲ್ ಪ್ರಕಾಶ

ತಿಮ್ಮನಹಳ್ಳಿ ಸೂರಿಯಿಂದ ಹಿಡಿದು ನಿನ್ನೆಮೊನ್ನೆಯಷ್ಟೇ ಚೆಲ್ವೇ ಹುಡುಗರಿಂದ ಕೊಲೆಯಾದ ಎಮ್ಮೆಚಂದ್ರನ ತನಕ ಮದುವೆಯಾಗಿದ್ದು ಇಂಥ ಕಾಲೇಜು ಹುಡುಗಿಯರನ್ನೇ. ಮುಸ್ಲಿಂ ಹುಡುಗಿಯೊಬ್ಬಳು ಮನೆ ಮಂದಿಯನ್ನೆಲ್ಲ ತೊರೆದು ಎಮ್ಮೆ ಚಂದ್ರನನ್ನು ಕೈಹಿಡಿದಳು. ಆತ ಕೊಲೆಯಾದ ಸುದ್ದಿ ಬರುವ ಹೊತ್ತಿಗೆ ಮದುವೆಯಾಗಿ ಎರಡು ತಿಂಗಳಾಗಿತ್ತು. ಮಗುವೂ ಇತ್ತು. ಇವತ್ತು ಆಕೆಯ ಗತಿ ಏನಾಗಿದೆಯೊ? ಹಾಗೇ ಮೆಂಟಲ್ ಪ್ರಕಾಶನ ಕೈಹಿಡಿದವಳೂ ಕಾಲೇಜು ಹುಡಿಗಿಯೇ. ರೌಡಿಯ ಆಯುಸ್ಸೇನಿದ್ದರೂ ಬದುಕಿರುವಷ್ಟೇ ಕಾಲ. ಕಾಲೇಜು ಹುಡುಗಿಯರಿಗಿದು ಅರ್ಥವಾಗಬೇಕಲ್ಲ?


ಗೋವಿಂದ ಕಾರಜೋಳ

ಫ್ಯಾಕ್ಟರಿನೇ ಕೆರೆಯ ನುಂಗಿತ್ತಾ ನೋಡವ್ವ ತಂಗಿ.....

ಒಂದೆಡೆ ಸರಕಾರ 'ಕೆರೆಗಳನ್ನು ಉಳಿಸಿ' ಅಂತ ಎರಡೂ ಬಾಯಿಂದ ಬಡಿದುಕೊಳ್ಳುತ್ತಿದ್ದರೆ, ಇನ್ನೊಂದೆಡೆ ಜಲಾನಯನ ಇಲಾಖೆಯು ಕೋಟ್ಯಂತರ ರೂಪಾಯಿಗಳನ್ನು ವೆಚ್ಚ ಮಾಡಿ ಯಾವುದೋ ಒಂದು ಕೆರೆಯ ಹೂಳೆತ್ತಿಸಿ ಅಥವಾ ಅದಕ್ಕೆ ನೀರು ಹರಿಸಿ ಅದನ್ನೇ ಸಾಧನೆ ಎಂಬಂತೆ ಫ್ಲೆಕ್ಸ್ ಹಾಕಿಸಿಕೊಂಡು ಪ್ರಚಾರ ಪಡೆಯುತ್ತದೆ.

ಆದರೆ ಇವೆರಡರ ಮಧ್ಯೆ ಕೆಲ ಅಧಿಕಾರಿಗಳು ಮತ್ತು ಉದ್ಯಮಿಗಳು ಕೈಜೋಡಿಸಿ ಇಡೀ ಕೆರೆಗಳನ್ನೇ ಗುಳುಂ ಮಾಡುತ್ತಿದ್ದಾರೆ. ಅದಕ್ಕೆ ಕೊಪ್ಪಳದ ಬಸಾಪುರ ಕೆರೆ ಲೇಟೆಸ್ಟ್ ಉದಾಹರಣೆ.

ಈಗಾಗಲೇ ಕೊಪ್ಪಳದ ರೈತರು ಹೈರಾಣಾಗಿದ್ದಾರೆ. ಅಕ್ಕಪಕ್ಕದಲ್ಲೇ ತುಂಗಭದ್ರಾ ಮತ್ತು ಕೃಷ್ಣಾ ನದಿಗಳಿದ್ದರೂ ತಮ್ಮ ಭೂಮಿಗಳಿಗೆ ನೀರಾವರಿ ಇಲ್ಲದೆ ರೈತರು ಬರಗಾಲಕ್ಕೀಡಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಈ ಜಿಲ್ಲೆಗೆ ಲಗ್ಗೆ ಹಾಕಿರುವ ಕಾರ್ಖಾನೆಗಳು ಸರಕಾರಿ ಯಂತ್ರಗಳನ್ನೇ ಬಳಸಿ ಬಡರೈತರನ್ನು ಹೆದರಿಸಿ ಅವರ ಜಮೀನುಗಳನ್ನು ಕಡಿಮೆ ಬೆಲೆಗೆ ದೋಚುತ್ತಿವೆ. ಅಂತಹವುಗಳಲ್ಲಿ ಬಳ್ಳಾರಿಯ ಗಣಿಕಳ್ಳ ಬಲ್ಡೋಟಾನ ಎಂಎಸ್‌ಪಿಎಲ್ ಕಂಪನಿಯೂ ಒಂದು. ಈಗಾಗಲೇ ಕೆಐಎಡಿಬಿ ಮೂಲಕ ರೈತರ 900 ಎಕರೆಯ ಜಮೀನನ್ನು ಕಡಿಮೆ ಬೆಲೆಗೆ ನುಂಗಿರುವ ಬಲ್ಡೋಟಾನ ಕಂಪನಿ ಇದೀಗ 44 ಎಕರೆಯಷ್ಟು ವಿಸ್ತಾರವಾದ ಬಸಾಪುರ ಕೆರೆಯನ್ನೇ ನುಂಗಿ ನೀರು ಕುಡಿದಿದೆ. ಈ ಕೆರೆಗೆಂದು ಬಲ್ಡೋಟಾ ಸರಕಾರಕ್ಕೆ ಕೊಟ್ಟಿರುವ ಹಣ ಕೇವಲ 34 ಲಕ್ಷ ರೂಪಾಯಿಯಾದರೆ, ಲಂಚ ಮಾತ್ರ ಬರೋಬ್ಬರಿ ಎರಡು ಕೋಟಿ ರೂಪಾಯಿ!

ಬಲ್ಡೋಟಾನ ಎಂಎಲ್‌ಪಿಎಲ್ ಕಂಪನಿ ನುಂಗಿರುವ ಸದರಿ ಬಸಾಪುರ ಕೆರೆ ಕೊಪ್ಪಳದ ಜಿಲ್ಲಾಧಿಕಾರಿ ಕಚೇರಿಯಿಂದ ಬರೀ ಮೂರು ಕಿ.ಮೀ. ದೂರದಲ್ಲಿದೆ. ಯಾವಾಗ ಬಲ್ಡೋಟಾ ಉಕ್ಕು ಕಾರ್ಖಾನೆ ತೆರೆಯಲು ಜಾಗೆ ಬೇಕೆಂದು ಅರ್ಜಿ ಹಾಕಿದನೋ ಆಗ ಈ ಹಿಂದೆ ಜಿಲ್ಲಾಧಿಕಾರಿಯಾಗಿದ್ದ ನವೀನ್ ರಾಜ್ ಸಿಂಗ್ ಮತ್ತು ಧಾರವಾಡದ ಕೆಐಎಡಿಬಿಯ ಖದೀಮ ಅಧಿಕಾರಿಗಳು ಜೊತೆಗೂಡಿ ಒಂದು ತಂತ್ರವನ್ನು ಹೂಡಿದರು. ಅದರ ಪ್ರಕಾರ ಬಸಾಪುರ ಕೆರೆ ಇರುವ ಸರ್ವೆ ನಂ. 143 ರ 44 ಎಕರೆಯ ಭೂಮಿಯಲ್ಲಿ (ಅಲ್ಲಿ ಕೆರೆ ಅಂತ ನಮೂದಿಸುವುದಿಲ್ಲ) ಹಿಂದೊಮ್ಮೆ ಕೆರೆ ಇದ್ದು, ಈಗ ಅದು ಹಾಳಾಗಿರುವುದರಿಂದ ನೀರಾವರಿ ಆಗುತ್ತಿಲ್ಲ ಎಂಬ ಕತೆಯನ್ನು ಕಟ್ಟಿದ್ದರು.

ಹಾಗೊಮ್ಮೆ ಈ ಕೆರೆ ಹಳೆಯದಾಗಿದ್ದರೆ, ಅದರಿಂದ ಈಗ ಉಪಯೋಗವಿಲ್ಲದಿದ್ದರೆ ಇದೇ ಕೆರೆಗೆ ಈ ಹಿಂದೆ ಜಿಲ್ಲಾ ಪಂಚಾಯತಿಯ ಇಂಜಿನಿಯರಿಂಗ್ ವಿಭಾಗದಿಂದ ಅನುದಾನ ಪಡೆದು ಕೆರೆ ರಿಪೇರಿ ಕೆಲಸ ಮಾಡಿಸಿದ್ದು ಯಾಕೆ? ಇರಲಿ.

ಈ ಖದೀಮರು ಈಗ ಮಾಡಿರುವುದೇನೆಂದರೆ 'ಅಂತರ್ಜಲ ಅಭಿವೃದ್ಧಿ ದೃಷ್ಟಿಯಿಂದ ಕೆರೆಯನ್ನು ಹಾಗೆಯೇ ಉಳಿಸಿಕೊಳ್ಳಬೇಕು, ನೀರನ್ನು ಸಂಗ್ರಹಿಸಬೇಕು' ಎಂಬ 'ಷರತ್ತು'ಗಳನ್ನು ವಿಧಿಸಿ, ಈ ಜಾಗ ಹೆದ್ದಾರಿಯ ಪಕ್ಕದಲ್ಲೇ ಇದ್ದರೂ ಪ್ರತಿ ಎಕರೆಗೆ ಬರೀ 54 ಸಾವಿರದಂತೆ ನಿಗದಿ ಮಾಡಿ ಒಟ್ಟು 34 ಲಕ್ಷಕ್ಕೆ ಈ ಕೆರೆಯನ್ನು ಎಂಎಸ್‌ಪಿಎಲ್‌ಗೆ 30 ವರ್ಷದ ಲೀಜ್ ಮೇಲೆ ನೀಡಿದ್ದಾರೆ!

ಹೌದು, ಕೆರೆಯನ್ನು ಕೆರೆಯಾಗಿಯೇ ಬಳಸಲು ಅದನ್ನು ಎಂಎಸ್‌ಪಿಎಲ್‌ಗೇ ಯಾಕೆ ಕೊಡಬೇಕು? ಅದನ್ನು ಮೆಂಟೇನ್ ಮಾಡಲು ಸರ್ಕಾರಕ್ಕೇನು ಧಾಡಿ? ನಾಳೆ ಎಂಎಸ್‌ಪಿಎಲ್ ಕೆರೆಯನ್ನು ಮುಚ್ಚಿ, ನೆಲಸಮತಟ್ಟುಗೊಳಿಸಿ ಅಲ್ಲೇ ಕಾರ್ಖಾನೆಯನ್ನು ಸ್ಥಾಪಿಸಿದರೆ? ಅಥವಾ ತನ್ನ ಕಾರ್ಖಾನೆಯಿಂದ ಹೊರಬೀಳುವ ತ್ಯಾಜ್ಯ ವಸ್ತುಗಳನ್ನು ಶೇಖರಿಸಲು ಕೆರೆಯನ್ನೇ ಉಪಯೋಗಿಸಿಕೊಂಡರೆ?

ಇಂತಹ ಪ್ರಶ್ನೆಗಳನ್ನು ಜನಪರ ಸಂಘಟನೆಗಳು ಎತ್ತಬಹುದೆಂಬ ಕಾರಣಕ್ಕೆ ಈ ಭ್ರಷ್ಟರು ಏನು ಮಾಡಿದ್ದಾರೆ ಗೊತ್ತ? 'ಕೆರೆಯನ್ನು 30 ವರ್ಷಗಳ ಲೀಸ್ ಮೇಲೆ ನೀಡಲಾಗಿದೆ. ಲೀಸ್ ಮುಗಿದ ನಂತರ ಅದನ್ನು ಮಾರಾಟ, ಅಡಮಾನ, ಗುತ್ತಿಗೆ, ವರ್ಗಾವಣೆ, ದಾನ ಯಾವುದೇ ರೀತಿಯ ಹಸ್ತಾಂತರವನ್ನು ಮಾಡುವ ಮುನ್ನ ರಾಜ್ಯ ಸರ್ಕಾರಕ್ಕೆ ತಿಳಿಸಬೇಕು. ಸರ್ಕಾರ ಜಮೀನು ವಾಪಸ್ಸು ಪಡೆದುಕೊಳ್ಳಲು ನಿರಾಕರಿಸಿದರೆ ಮಾತ್ರ ಯಾರಿಗಾದರೂ ಹಸ್ತಾಂತರಿಸಬಹುದಾಗಿದೆ" ಎಂಬ ಸಾಲನ್ನು ಸೇರಿಸಿದ್ದಾರೆ. ಯಾರಿಗೆ ಗೊತ್ತು, ಮೂವತ್ತು ವರ್ಷಗಳ ನಂತರ ವಿಧಾನಸೌಧವೂ ಖಾಸಗೀಕರಣಗೊಂಡಿರುತ್ತದೋ ಏನೋ?


ಈ ಪ್ರಕರಣದಲ್ಲಿ ಯಾವುದೇ ರೀತಿಯ ಸರ್ಕಾರಿ ಯೋಜನೆ ಇಲ್ಲ, ಸಾರ್ವಜನಿಕ ಉದ್ದೇಶವಂತೂ ಇಲ್ಲವೇ ಇಲ್ಲ, ಬದಲಾಗಿ ಇಲ್ಲಿರುವುದು ಅಧಿಕಾರಿಗಳ ಭ್ರಷ್ಟಾಚಾರ ಮತ್ತು ರೈತರ ವಂಚನೆ ಮಾತ್ರ. ಆದ್ದರಿಂದಲೇ ಡಿ.ಎಚ್. ಪುಜಾರ್, ಕೆ.ಬಿ. ಗೇನಾಳ್, ವಿಠಪ್ಪ ಗೋರಂಟ್ಲಿ, ಜೆ. ಭಾರದ್ವಾಜ್, ರಾಜು ಬಾಕಳೆ, ರಘು ಕಾಸನಕಂಡಿ ಸೇರಿದಂತೆ ಅನೇಕರು 'ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಸಮಿತಿ' ಎಂಬ ಸಂಘಟನೆಯನ್ನು ರಚಿಸಿಕೊಂಡು ಹೋರಾಟ ನಡೆಸುತ್ತಿದ್ದಾರೆ.

ಆದರೆ ಅವರೆಲ್ಲ ಎತ್ತಿರುವ ಪ್ರಶ್ನೆಗಳಿಗೆ ಜಿಲ್ಲಾ ಮಂತ್ರಿ ಗೋವಿಂದ ಕಾರಜೋಳ ಜಾರಿಕೆಯ ಉತ್ತರ ನೀಡಿದ್ದಾನೆ. ಮಾತ್ರವಲ್ಲ ಹದಿನೈದು ದಿನಗಳ ಹಿಂದೆ ಹೆಚ್ಚುಕಮ್ಮಿ ಕಾರ್ಖಾನೆ ಮಾಲೀಕ ಬಲ್ಡೋಟಾನ ನೀರಿಳಿಸುವ ರೀತಿಯಲ್ಲಿ ಅಬ್ಬರಿಸಿದ್ದ ಕಾರಜೋಳ ಈಗ ಠುಸ್ ಆಗಿದ್ದಾನೆ. ಅಷ್ಟೇ ಅಲ್ಲ, ಇತ್ತೀಚೆಗೆ ಕಾರ್ಖಾನೆಯ ವ್ಯಕ್ತಿಗಳೊಂದಿಗೆ ಸಭೆಗಳಲ್ಲೂ ಭಾಗವಹಿಸುತ್ತಿದ್ದಾನೆ. "ಸಿಂಗೂರಿನ ಟಾಟಾ ಕಂಪನಿ ಜಿಲ್ಲೆಗೆ ಬಂದರೆ ಸ್ವಾಗತ" ಅಂತಲೂ ಹೆದರಿಸಿದ್ದಾನೆ.


"ಕೆರೆ ಬೇಕೇ ಬೇಕು ಅನ್ನೋದಾದರೆ ಎಂಎಸ್‌ಪಿಎಲ್ ಕಂಪನಿಯೊಂದಿಗೆ ಮಾತಾಡಿ ವಾಪಸ್ಸು ತಗೊಳ್ಳಿ" ಎಂಬುದು ಹೋರಾಟಗಾರರಿಗೆ ಕಾರಜೋಳನ ಪುಗಸಟ್ಟೆ ಸಲಹೆಯಾಗಿದೆ.

ಈಗಿರೋದು ಹೋರಾಟವೊಂದೆ ದಾರಿ.

■ ವರದಿಗಾರ




ಕಮಂಗಿಯೊಬ್ಬ ಎಮ್ಮೆಲ್ಲೆಯಾದ


ಪುಟ್ಟರಂಗಣ್ಣ ಶೆಟ್ಟಿ

ಮೂಲತಃ ಉಪ್ಪಾರ ಜನಾಂಗದವರೇ ಡಾಮಿನೆಂಟ್ ಆಗಿರುವ ಯಳಂದೂರಿನ ಉಪ್ಪಿನ ಮೋಳೆ ಗ್ರಾಮದವನಾದ ಸಿ.ಪುಟ್ಟರಂಗಶೆಟ್ಟಿಗೆ ಯಾವ ಕಡೆಯಿಂದ ವಿಶ್ಲೇಷಿಸಿದರೂ ಎಮ್ಮೆಲ್ಲೆಯಾಗುವ ಲಕ್ಷಣಗಳಿಲ್ಲ. ಈತ ಬಿಎ ಪದವಿ ಮುಗಿಸಿ ಅಂಡಲೆಯುತ್ತಿದ್ದಾಗ ಈತನಲ್ಲಿ ಮಾಜಿ ಮಂತ್ರಿ ಬೆಂಕಿ ಮಹಾದೇವುಗೆ ಅದ್ಯಾವ ಗುಣ ಕಂಡಿತೋ ಗೊತ್ತಿಲ್ಲ, ಅವನನ್ನು ರಾಜಕೀಯಕ್ಕೆ ಕರೆತಂದರು. ಮೊದಲು ಮಂಡಲ ಪಂಚಾಯತಿಯಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕೊಟ್ಟದ್ದೇ ತಡ ಅದನ್ನು ಚೆನ್ನಾಗಿ ಉಪಯೋಗಿಸಿಕೊಂಡು ಗೆದ್ದು ರಾಜಕೀಯಕ್ಕೆ ಎಂಟ್ರಿ ಪಡೆದ.

ಅಲ್ಲಿಂದಾಚೆಗೆ ಆತ ಹಿಂತಿರುಗಿ ನೋಡಲೇ ಇಲ್ಲ. ನಂತರ ಜಿಲ್ಲಾ ಪಂಚಾಯತಿ ಸದಸ್ಯ, ಉಪಾಧ್ಯಕ್ಷ ಆಗಿ ಒಂದೆಡೆ ಚೆನ್ನಾಗಿ ಮೇಯುತ್ತಾ ಇನ್ನೊಂದೆಡೆ ಚೆನ್ನಾಗಿ ರೌಡಿಸಂ ಮಾಡುತ್ತಾ ರಾಜಕೀಯದಲ್ಲಿ ತಳವೂರಿಬಿಟ್ಟ.



ಶ್ರೀನಿವಾಸ್ ಪ್ರಸಾದ್

ಎಮ್ಮೆಲ್ಲೆ ಎಲೆಕ್ಷನ್‌ನಲ್ಲಿ ಚಾಮರಾಜನಗರ ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ಕೊಟ್ಟದ್ದೇ ತಡ ವಿ.ಶ್ರೀನಿವಾಸ್ ಪ್ರಸಾದ್‌ರ ಕೈಕಾಲು ಹಿಡಿದು ಅವರ ಬೆಂಬಲವನ್ನೂ ಗಿಟ್ಟಿಸಿಕೊಂಡು ತನ್ನ ರಾಜಕೀಯ ಗುರು ಬೆಂಕಿ ಮಹಾದೇವುಗೇ ಸೆಡ್ಡು ಹೊಡೆದು ನಿಂತುಬಿಟ್ಟ. ಬೆಂಕಿ ಮಹಾದೇವು ಅವರನ್ನು ಸೋಲಿಸುವುದಕ್ಕಾಗಿಯೇ ಪುಟ್ಟರಂಗಶೆಟ್ಟಿಗೆ ಬೆಂಬಲಿಸಿದ ಶ್ರೀನಿವಾಸ್ ಪ್ರಸಾದ್ ದೊಡ್ಡ ಮಟ್ಟದ ದಲಿತ ಓಟುಗಳನ್ನು ಪುಟ್ಟರಂಗಶೆಟ್ಟಿಯ ಕಡೆ ತಿರುಗಿಸಿಬಿಟ್ಟರು. ಇದೇ ಅವನಿಗೆ ಪ್ಲಸ್ ಪಾಯಿಂಟ್ ಆಗಿ ಚುನಾವಣೆಯಲ್ಲಿ ಗೆದ್ದುಬಿಟ್ಟ.


ಅಲ್ಲಿಗೆ ಮುಗಿಯಿತು. ಚಾಮರಾಜನಗರ ಗೂಂಡಾವೊಬ್ಬನ ವಶವಾಗಿಹೋಯಿತು. ಅಷ್ಟುಹೊತ್ತಿಗೆ ಬಲಿತಿದ್ದ ಅವನ ಮಗ ಚಾಮರಾಜ್ ಕೂಡ ಫೀಲ್ಡಿಗೆ ಇಳಿದು ಹೊಸದಾಗಿ ದಕ್ಕಿದ ಅಪೂರ್ವ ಅಧಿಕಾರವನ್ನು ಮುಸಿಸೋ ಇಚ್ಛೆ ಅನುಭವಿಸಲಾರಂಭಿಸಿಬಿಟ್ಟ.

ಅವತ್ತು ದಲಿತರು ಪುಟ್ಟರಂಗಶೆಟ್ಟಿಗೆ ಓಟು ಹಾಕದಿದ್ದರೆ ಇವತ್ತು ಆತ ಎಮ್ಮೆಲ್ಲೆಯಾಗುತ್ತಿರಲಿಲ್ಲ. ಆದರೆ, ಅದನ್ನೆಲ್ಲಾ ಮರೆತಿರುವ ಈತ ಇವತ್ತು ಅದೇ ದಲಿತರ ಮೇಲೆ ಮುಗಿಬಿದ್ದಿದ್ದಾನೆ. ಕೊಳ್ಳೇಗಾಲದ ಆಟೋ ಡ್ರೈವರ್ ಪರಶಿವಮೂರ್ತಿಯ ಮೇಲಿನ ಮಾರಣಾಂತಿಕ ಹಲ್ಲೆ ಇದಕ್ಕೊಂದು ಚಿಕ್ಕ ನಿದರ್ಶನವಷ್ಟೆ.

ಮಂಡ್ಯ ನಗರಸಭೆಯೂ ಹರಾಜು


ಮಂಜುನಾಥ್

ಮಂಡ್ಯ ನಗರಸಭೆಯ ಸದಸ್ಯರನ್ನು ಹರಾಜಿನಲ್ಲಿ ಕೊಂಡುಕೊಳ್ಳುತ್ತಿರುವುದು ಅದಕ್ಕೊಂದು ತಾಜಾ ಉದಾಹರಣೆಯಾಗಿದೆ. ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರಿ ಮಂತ್ರಿ/ಶಾಸಕರಾದ ಕಾಂಗ್ರೆಸ್, ಜೆಡಿಎಸ್ ಎಂಎಲ್‌ಎಗಳಿಗೆ ಈಗಾಗಲೇ ಜನರು ಕ್ಯಾಕರಿಸಿ ಉಗಿಯುತ್ತಿರುವುದನ್ನು ಗಣನೆಗೆ ತೆಗೆದುಕೊಳ್ಳದೆ ಹರಾಜಿಗೆ ಸಿದ್ಧರಾದ ಕೌನ್ಸಿಲರ್‌ಗಳು ಮಾತ್ರ ಮಂಡ್ಯದ ಮಾನವನ್ನು ರೆಡ್ಡಿಗಳ ಅದಿರು ಕಾಸಿಗೆ ಮಾರಿಬಿಡುತ್ತಿದ್ದಾರೆ.



ರಮೇಶ್

ಆಪರೇಷನ್ ಕಮಲ

ರೆಡ್ಡಿ ರಾಜಕಾರಣದ ತಂತ್ರವಾದ ಆಪರೇಷನ್ ಕಮಲ ವಿಧಾನಸೌಧವನ್ನೆಲ್ಲಾ ಆವರಿಸಿಕೊಂಡಾದ ಮೇಲೆ ಈಗ ಸ್ಥಳೀಯ ಸಂಸ್ಥೆಗಳನ್ನು ಕೊಂಡುಕೊಳ್ಳುವತ್ತ ನಿರ್ಲಜ್ಜೆಯಿಂದ ಸಾಗುತ್ತಿದೆ. ಮಂಡ್ಯ ನಗರಸಭೆಯ ಸದಸ್ಯರನ್ನು ಹರಾಜಿನಲ್ಲಿ ಕೊಂಡುಕೊಳ್ಳುತ್ತಿರುವುದು ಅದಕ್ಕೊಂದು ತಾಜಾ ಉದಾಹರಣೆಯಾಗಿದೆ. ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರಿ ಮಂತ್ರಿ/ಶಾಸಕರಾದ ಕಾಂಗ್ರೆಸ್, ಜೆಡಿಎಸ್ ಎಂಎಲ್‌ಎಗಳಿಗೆ ಈಗಾಗಲೇ ಜನರು ಕ್ಯಾಕರಿಸಿ ಉಗಿಯುತ್ತಿರುವುದನ್ನು ಗಣನೆಗೆ ತೆಗೆದುಕೊಳ್ಳದೆ ಹರಾಜಿಗೆ ಸಿದ್ಧರಾದ ಕೌನ್ಸಿಲರ್‌ಗಳು ಮಾತ್ರ ಮಂಡ್ಯದ ಮಾನವನ್ನು ರೆಡ್ಡಿಗಳ ಅದಿರು ಕಾಸಿಗೆ ಮಾರಿಬಿಡುತ್ತಿದ್ದಾರೆ.

ಕಲ್ಲಹಳ್ಳಿಯ ಜೆಡಿಎಸ್ ಕೌನ್ಸಿಲರ್ ನಾಗೇಂದ್ರ, ಇನ್ನೊಬ್ಬ ಕೌನ್ಸಿಲರ್ ಎಂ.ಎಲ್.ಮಂಜುನಾಥ್ ಮತ್ತು ರಿಯಲ್


ನಾಗಮ್ಮ


ಬೋರೇಗೌಡ

ಎಸ್ಟೇಟ್ ದಂಧೆಯ ಎಂ.ಎಲ್.ರಮೇಶ್ ಅಲಿಯಾಸ್ ರೈಲು ರಮೇಶರೆಂಬ ಅಡ್ನಾಡಿಗಳು ಸೇರಿಕೊಂಡು ಈ ಆಪರೇಷನ್ ಕಮಲವನ್ನು ಮಂಡ್ಯ ನಗರಸಭೆಯಲ್ಲಿ ನಡೆಸುತ್ತಿದ್ದಾರೆ. ಕೌನ್ಸಿಲರ್‌ಗಳಿಗೆ ರೆಡ್ಡಿಗಳ ಎಂಜಲು ಕಾಸನ್ನು ಕೊಡಿಸುತ್ತೇವೆಂದು ಬೆಂಗಳೂರು, ಬಳ್ಳಾರಿ, ತಿರುಪತಿ ಎಂದೆಲ್ಲಾ ಟೂರು ಮಾಡಿಸುತ್ತಾ ಮಂಡ್ಯ ನಗರಸಭೆಯನ್ನು ಬಕರಿಗಿಟ್ಟಿದ್ದಾರೆ.


ಕರುಣಾಕರರೆಡ್ಡಿಯ ಮಂಡ್ಯ ಟ್ರಿಪ್

ಬಿಜೆಪಿಯನ್ನು ಅಧಿಕಾರದಲ್ಲಿ ಸುಭದ್ರವಾಗಿಸುವ ಕಂಟ್ರಾಕ್ಟ್ ಪಡೆದುಕೊಂಡಿರುವ ರೆಡ್ಡಿ ಬ್ರದರ್ಸ್‌ಗಳಲ್ಲೊಬ್ಬರಾದ ಕರುಣಾಕರರೆಡ್ಡಿ ಮಂಡ್ಯಕ್ಕೆ ಬಂದಾಗ ಸ್ಥಳೀಯ ಬಿಜೆಪಿಗಳನ್ನು ಕರೆಸಿ ಮಂಡ್ಯದಲ್ಲಿ ಆಪರೇಷನ್ ಕಮಲ ಯಾವ ರೀತಿ ಮಾಡಬಹುದೆಂದು ಚರ್ಚಿಸಿದ್ದಾರೆ. ಅನ್ನ ಹಳಸಿತ್ತು, ನಾಯಿ ಹಸಿದಿತ್ತು ಎಂಬ ಗಾದೆಗೆ ತಕ್ಕಂತೆ ಹಸಿದಿರುವವರನ್ನು ಹುಡುಕಿ ತನ್ನಿ ಎಂದು ಆದೇಶಿಸಿದ್ದಾರೆ. ಅದಕ್ಕೆ ತಕ್ಕಂತೆ ಇದ್ದ ಕಲ್ಲಹಳ್ಳಿ ನಾಗೇಂದ್ರ ಮತ್ತು ಎಂ.ಎಲ್.ಮಂಜುನಾಥ್‌ರನ್ನು ಕರೆಸಿ 'ತಮಗೆ ತಲಾ 5 ಲಕ್ಷಗಳನ್ನು ಕೊಡುತ್ತೇವೆ. ನಿಮ್ಮ ಪಕ್ಷದ ಕೌನ್ಸಿಲರ್‌ಗಳನ್ನು ಕರೆದು ತನ್ನಿ' ಎಂದಿದ್ದಾರೆ.

ಹಾಗಂದದ್ದೇ ತಡ ರೆಡ್ಡಿಯ ಕಾಲಿಗೆ ಸಾಷ್ಟಾಂಗ ನಮಸ್ಕಾರ ಬಿದ್ದ ಇವರಿಬ್ಬರು ರೆಡಿಯಾಗಿಬಿಟ್ಟಿದ್ದಾರೆ. ಕೂಡಲೇ ಬೇರೆ ಬೇರೆ ಕೌನ್ಸಿಲರ್‌ಗಳಿಗೆ ಫೋನಾಯಿಸಿ ಸಭೆ ನಡೆಸಿದ್ದಾರೆ. ಕಾಂಗ್ರೆಸ್‌ನ ಹೊಸಳ್ಳಿ ಬೋರೇಗೌಡ, ಲೋಕೇಶ್, ಜೆಡಿಎಸ್‌ನ ಕಲ್ಯೆಅರಸಿ, ಪುಷ್ಪಲತಾ, ಶಂಕರೇಗೌಡ, ನಗರಸಭೆ ಉಪಾಧ್ಯಕ್ಷ ರಮೇಶ್, ಭೈರವ, ಅರುಣ್‌ಕುಮಾರ್, ಗೀತಾ ಜಯರಾಂ, ಪಕ್ಷೇತರ ಕೌನ್ಸಿಲರ್‌ಗಳಾದ ಚೆಲುವರಾಜ್, ಖುರ್ರಂಪಾಷರನ್ನು ಸೇರಿಸಿಕೊಂಡು ಸಭೆ ನಡೆಸಿದ್ದಾರೆ. ನಂತರ ತಮ್ಮ ಹರಾಜಿಗೆ ರೇಟ್ ಫಿಕ್ಸ್ ಮಾಡಿಕೊಂಡು ಗಣಿ ಧಣಿಗಳ ಕಾಲಿಗೆ ಒಪ್ಪಿಸಿ ಪುನೀತರಾಗಿದ್ದಾರೆ.

ಮಂಡ್ಯ ನಗರಸಭೆಯ ಒಟ್ಟು 35 ಸೀಟುಗಳಲ್ಲಿ ಜೆಡಿಎಸ್ 21 ಸೀಟು ಪಡೆದಿತ್ತು, ಆರು ಜನ ಪಕ್ಷೇತರರಲ್ಲಿ ಮೂವರು ಜೆಡಿಎಸ್ ಜೊತೆ ಸೇರಿದ್ದರು. ಕಾಂಗ್ರೆಸ್ ಆರು ಸೀಟುಗಳನ್ನೂ, ಬಿಜೆಪಿ ಎರಡು ಸೀಟುಗಳನ್ನೂ ಪಡೆದುಕೊಂಡಿದ್ದವು. ಕಾಂಗ್ರೆಸ್‌ನ ಕುಖ್ಯಾತ ರೌಡಿ ಜಡೇಜಾ ರವಿಯ ಕೊಲೆಯ ನಂತರ ಒಂದು ಸೀಟು ಕಡಿಮೆಯಾಗಿತ್ತು, ತಮಿಳು ಕಾಲೋನಿಯ ಪಕ್ಷೇತರ ಅಭ್ಯರ್ಥಿ ರಮೇಶನ ವಿರುದ್ಧ ನಿಂತಿದ್ದ ತಮ್ಮ ಜೆಡಿಎಸ್ ಕ್ಯಾಂಡಿಡೇಟಿಗೆ ಮಾಹಿತಿಯನ್ನೂ ನೀಡದ ಎಂ.ಶ್ರೀನಿವಾಸ್, ಆತನನ್ನು ಪಕ್ಷಕ್ಕೆ ಸೇರಿಸಿಕೊಂಡು ಉಪಾಧ್ಯಕ್ಷನಾಗಿ ಮಾಡಿದರು. ರಮೇಶ್ ಆಲಿಯಾಸ್ ಮೂಗ ರಮೇಶ್ ಉಪಾಧ್ಯಕ್ಷನಾಗಿ ಮತ್ತು ಕೆ.ಸಿ.ನಾಗಮ್ಮ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಆರು ತಿಂಗಳಾದರೂ ಮಂಡ್ಯದ ಅಭಿವೃದ್ಧಿಗೆ ಕಡಿದು ಗುಡ್ಡೆ ಹಾಕಿದ್ದು ಅಷ್ಟರಲ್ಲೇ ಇದೆ. ಈ ನಡುವೆ ಇದೇ ರಮೇಶ್ ಸೇರಿದಂತೆ ಹಲವಾರು ಕೌನ್ಸಿಲರ್‌ಗಳು ಬಳ್ಳಾರಿ ದಾರಿ ತುಳಿದಿದ್ದಾರೆ.

ಕಲ್ಲಹಳ್ಳಿ ನಾಗೇಂದ್ರ ಕಳೆದ ಚುನಾವಣೆಗೆ ಮುಂಚೆಯೇ ಜೆಡಿಎಸ್‌ನ ಶಾಸಕ ಎಂ.ಶ್ರೀನಿವಾಸ್ ಜೊತೆ ಮುನಿಸಿಕೊಂಡಾಗಿತ್ತು, ಹಣಕ್ಕಾಗಿ ಶಾಸಕರ ಬ್ಲ್ಯಾಕ್‌ಮೇಲ್ ಮಾಡಿದ ನಾಗೇಂದ್ರ, ಅದು ದಕ್ಕದೆ ಹೋದಾಗ ತಿರುಗಿಬಿದ್ದ ಎಂಬುದು ಜೆಡಿಎಸ್ ವಲಯದ ಆರೋಪ. ಇದೇ ನಾಗೇಂದ್ರ ಗ್ಯಾಂಗ್ ಕಟ್ಟಿಕೊಂಡು ಈಗ ರೆಡ್ಡಿಗಳ ಪಾದಕ್ಕೆ ಅಡ್ಡ ಬೀಳುತ್ತಿರುವುದು. ತಮ್ಮ ಜೊತೆ ಬರುವ ಸದಸ್ಯರಿಗೆ ತಲಾ 5 ಲಕ್ಷ ಕ್ಯಾಷ್ ಅಲ್ಲದೆ ಅವರ ವಾರ್ಡಿಗೆ ಸರ್ಕಾರದಿಂದ 50 ಲಕ್ಷ ಬಿಡುಗಡೆ, ಆ ಹಣದಲ್ಲೂ ಪರ್ಸೆಂಟೇಜ್ ಬರುತ್ತೆ ಎಂದು ಇವರು ಪುಂಗಿ ಊದಿದ್ದಾರೆ. ಇದನ್ನು ಕೇಳಿ 11 ಜನ ಕೌನ್ಸಿಲರ್‌ಗಳು ಬಳ್ಳಾರಿಗೆ ಹೋಗಿ ತಲಾ ಎರಡೆರಡು ಲಕ್ಷಗಳನ್ನು ಜೇಬಿಗಿಳಿಸಿಕೊಂಡು ಬಂದಿದ್ದಾರೆ. ಅಲ್ಲಿ ಕುಡಿದ ನಿಶೆ ಇಳಿಯದೆ ಹಾಗೇ ಬಂದುದರಿಂದ ನಗರಸಭೆಯ ಸಾಮಾನ್ಯ ಸಭೆಯಲ್ಲಿ ಬಾಯಿಗೆ ಬಂದಂತೆ ಕೂಗಾಡಿದ್ದಾರೆ. ನಗರಸಭೆ ಅಧ್ಯಕ್ಷೆ ನಾಗಮ್ಮರನ್ನು ಇಳಿಸಲು ಬೇಕಾದಷ್ಟು ಸಂಖ್ಯಾಬಲವಿಲ್ಲದ್ದರಿಂದ ಮೈಪರಚಿಕೊಂಡು ಸುಮ್ಮನಾಗಿದ್ದಾರೆ.


ಕರುಣಾಕರ ರೆಡ್ಡಿ

ಚೆಲುವರಾಯಸ್ವಾಮಿಯ ಕೌಂಟರ್ ಆಪರೇಷನ್


ಜಗಿಯಲು ಸಿದ್ಧವಾಗಿದ್ದ ಕೌನ್ಸಿಲರ್‌ಗಳನ್ನು ಸಮಾಧಾನ ಪಡಿಸಿ ಜೊತೆಯಲ್ಲಿ ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಮಾಜಿ ಸಚಿವ ಚೆಲುವರಾಯಸ್ವಾಮಿ ಸಭೆ ನಡೆಸಿದ್ದಾರೆ. ನಾಗೇಂದ್ರ ಮತ್ತಿನ್ನಿಬ್ಬರು ಬಿಟ್ಟರೆ ಮಿಕ್ಕ ಎಲ್ಲಾ ಸದಸ್ಯರು ಈ ಸಭೆಗೆ ಹಾಜರಾಗಿದ್ದಾರೆ. ನಾಗೇಂದ್ರನ ಜೊತೆ ಹೋದವರಿಗೆ ಸಭೆಯಲ್ಲಿದ್ದವರು ಚೆನ್ನಾಗಿ ಉಗಿದಿದ್ದಾರೆ. ಪಕ್ಷೇತರನಾಗಿ ಗೆದ್ದು ಬಂದು ಶಾಸಕ ಎಂ.ಶ್ರೀನಿವಾಸ್ ಕೃಪೆಯಿಂದಲೇ ಉಪಾಧ್ಯಕ್ಷನಾದ ರಮೇಶನನ್ನು ಎರಡು ಲಕ್ಷ ರೂಪಾಯಿ ಎಂಜಲು ಪಡೆದಿದ್ದು ಏಕೆ ಎಂದು ಕೇಳಿದಾಗ ಆತನ ಉತ್ತರ ಹೀಗಿತ್ತೆಂದು ಸಭೆಯಲ್ಲಿದ್ದವರು ಹೇಳುತ್ತಾರೆ: "ಸ್ವಾಮಿ ನಮ್ಮ ಜೀವಮಾನದಲ್ಲಿ ಇಷ್ಟು ದುಡ್ಡನ್ನು ನೋಡಲೇ ಇಲ್ಲಾ, ಸಂಪಾದಿಸಕ್ಕೂ ಆಗಲ್ಲಾ. ಈಗ ಈ ದುಡ್ಡಿನಲ್ಲಿ ಸಾಲ ತೀರಿಸಿಕೊಂಡಿದ್ದೇನೆ." ನಂತರ ಶಾಸಕರು ರಮೇಶನಿಗೆ ಎರಡು ಲಕ್ಷ ಕೊಟ್ಟು ರೆಡ್ಡಿ ಬ್ರದರ್ಸ್‌ಗೆ ಹಿಂತಿರುಗಿಸಲು ಹೇಳಿದ್ದಾರೆಂದು ಗುಸುಗುಸು ಇದೆ.

ಚೆಲುವರಾಯಸ್ವಾಮಿಯಂತೂ ಬಹಿರಂಗವಾಗಿಯೇ ನಾಚಿಕೆ ಬಿಟ್ಟು ಇನ್ನೂ ಒಂದು ಹೇಳಿಕೆ ನೀಡಿದ್ದಾರೆ. "ತೀರಾ ದುಡ್ಡಿನ ಕೊರತೆ ಇರುವವರಿಗೆ ರೆಡ್ಡಿಗಳು ಕೊಡುವಷ್ಟು ಅಲ್ಲದಿದ್ದರೂ ತಕ್ಕಮಟ್ಟಿಗೆ ನಮ್ಮ ಪಕ್ಷದಿಂದಲೇ ಸಹಾಯ ಮಾಡುತ್ತೇವೆ" ಎಂಬುದು ಚೆಲುವರಾಯಸ್ವಾಮಿಯ ಹೇಳಿಕೆ. ರಾಜಕಾರಣವೆಂದರೆ ಏನು ಎಂಬುದಕ್ಕೆ ಇನ್ನೂ ಹೊಲಸಾದ ಉದಾಹರಣೆಗಳು ಬೇಕಿಲ್ಲವೇನೋ?

ಕಾಂಗ್ರೆಸ್‌ನ ದುಸ್ಥಿತಿ

ಒಂದು ಕಾಲದಲ್ಲಿ ನಗರಸಭೆ ಎಂದರೆ ಕಾಂಗ್ರೆಸ್‌ನ ಮಾಜಿ ಸಚಿವ ಆತ್ಮಾನಂದ ಮತ್ತು ಅವರ ಚಿಕ್ಕಪ್ಪ ಕಂಟ್ರಾಕ್ಟರ್ ರಾಮಲಿಂಗೇಗೌಡರ ಮನೆಯ ಖಾಸಗಿ ಆಸ್ತಿಯೆಂದೇ ಆಗಿತ್ತು. ಆದರೆ ಇಂದು ಮಂಡ್ಯ ಕಾಂಗ್ರೆಸ್‌ನಲ್ಲಿ ಎಸ್.ಎಂ.ಕೃಷ್ಣ, ಅಂಬರೀಷ್, ಆತ್ಮಾನಂದ, ಕೆ.ಬಿ. ಚಂದ್ರಶೇಖರ್ ಬಣಗಳೆಂದು ಒಡೆದು ಹೋಗಿ ಆ ಪಕ್ಷಕ್ಕೆ ದಿಕ್ಕೇ ಇಲ್ಲದಂತಾಗಿದೆ. ತಮ್ಮ ಪಕ್ಷದಿಂದ ಹೊರಗೆ ಯಾರಾದರೂ ಹೋಗುತ್ತಾರೆಂದರೂ ಅವರನ್ನು ಕರೆದು ಮಾತನಾಡಿಸಲೂ ಯಾರೂ ಇಲ್ಲ.


ಕೆ.ಸಿ. ರಮೇಶ್


ನಾಗೇಂ

ಕಾಣೆಯಾದ ಅಬ್ಬಾಸ್ ಅಲಿ ಬೋರ, ಜೋಕರ್ ಆದ ಜಫ್ರುಲ್ಲಾ

ಮಂಡ್ಯ ನಗರಸಭೆಯ ಮಟ್ಟಿಗೆ ಇನ್ನೆರಡು ಶಕ್ತಿ ಕೇಂದ್ರಗಳೆಂದರೆ ಹಡಬೆ ದುಡ್ಡಿನ ಇಬ್ಬರು ಕುಳಗಳು. ಅದರಲ್ಲೂ ಜಫ್ರುಲ್ಲಾಖಾನ್ ಕಳೆದ ಸಾರಿ ತನ್ನದೇ ಒಂದು 'ಆಪರೇಷನ್' ನಡೆಸಿ ವಿಜಯಲಕ್ಷ್ಮಿ ರಘುನಂದನ್‌ರನ್ನು ಅಧ್ಯಕ್ಷೆಯನ್ನಾಗಿ ಮಾಡಿದ್ದ. ದುಬೈ ಕನ್ನಡ ಸಂಘದ ಸ್ವಯಂಘೋಷಿತ ಅಧ್ಯಕ್ಷನಾಗಿರುವ ಜಫ್ರುಲ್ಲಾ, ಲಕ್ಷಾಂತರ ಹಣ ಸುರಿಯುವುದರಲ್ಲಿ ಫೇಮಸ್ಸು. ತನ್ನ ಬಂಟ ಕೌನ್ಸಿಲರ್ ಅಫ್ರೋಜ್‌ಗೆ ಬಿಜೆಪಿಯನ್ನೇ ಬೆಂಬಲಿಸಲು ಸೂಚಿಸಿರುವುದು ಜಫ್ರುಲ್ಲಾಖಾನ್‌ನ ದಿವಾಳಿಕೋರತನಕ್ಕೆ ಸಾಕ್ಷಿಯಾಗಿದೆ. ಇರಾಕ್‌ನಲ್ಲಿ ತನ್ನ ಪೆಟ್ರೋಲ್ ಬಾವಿಗಳಿವೆ, ದುಬೈನಲ್ಲಿ ಸ್ಟಾರ್ ಹೋಟೆಲ್‌ಗಳಿವೆ ಎಂದು ಹೇಳಿಕೊಳ್ಳುವ ಜಫ್ರುಲ್ಲಾ ತಾನೇ ಬಿಜೆಪಿಗೆ ಬುಕ್ ಆಗಿರುವುದು ಯಾರಲ್ಲೂ ಅಚ್ಚರಿಮೂಡಿಸಿಲ್ಲ.

ಮಂಡ್ಯ ಯುವಜನರ ಕೈಗೆ ಲ್ಯಾಂಡ್ ಲ್ಯಾಬಿಯ ಹಣ, ಹೆಂಡ ಹಂಚುತ್ತಿದ್ದ ಅಬ್ಬಾಸ್ ಅಲಿ ಬೋಹ್ರಾ ಹೊಡೆತವನ್ನು ಮಂಡ್ಯ ಜನತೆ ಆಶ್ಚರ್ಯದಿಂದ ನೋಡಿತ್ತು. ಬಿಜೆಪಿಯ ಸದಸ್ಯನೂ ಆಗಿರದ ಆದರೆ ಎಂಎಲ್‌ಎ ಕ್ಯಾಂಡಿಡೇಟ್ ಆಗಿದ್ದ ಬೋಹ್ರಾ ಹಣಕ್ಕೆ ಕೈಚಾಚಿ ಪಕ್ಕಾ ಆರೆಸ್ಸೆಸ್ ಕೇಡರ್‌ಗಳೇ ಚಿತ್ತಾಗಿದ್ದು ಮಾತ್ರ ಮೋಜಿನ ಸಂಗತಿಯಾಗಿತ್ತು. ಬಿಜೆಪಿಯಿಂದ ಇಬ್ಬರು ಕೌನ್ಸಿಲರ್‌ಗಳನ್ನು ಗೆಲ್ಲಿಸಿಕೊಂಡು ಬಂದಿದ್ದ ಬೋಹ್ರಾಗೆ ಈ ಸಾರಿಯ ಎಂಎಲ್‌ಎ ಟಿಕೆಟ್ ಮಾತ್ರ ಸಿಗಲಿಲ್ಲ. ಸ್ವತಂತ್ರವಾಗಿ ಸ್ಪರ್ಧಿಸಿ ಠೇವಣಿಯನ್ನೂ ಕಳೆದುಕೊಂಡು ಮೂಲೆ ಸೇರಿದ ಬೋಹ್ರಾ ಈಗ ನಾಪತ್ತೆಯಾಗಿಬಿಟ್ಟಿದ್ದಾರೆ.

ಚೆಲುವರಾಯಸ್ವಾಮಿಯ ಸಮಾಧಾನದ ಮಾತುಗಳಿಗೆ ಸುಮ್ಮನಾಗದ ಕೌನ್ಸಿಲರ್‌ಗಳು ಮತ್ತೆ ಬಳ್ಳಾರಿಗೆ ಹೋಗಿ ಅಲ್ಲಿನ ಕಂಟ್ರಿಕ್ಲಬ್‌ನಲ್ಲಿ ಉಳಿದುಕೊಂಡು ಶನಿವಾರ ರಾತ್ರಿಯಷ್ಟೇ ಮಂಡ್ಯಕ್ಕೆ ವಾಪಸಾಗಿದ್ದಾರೆ. ಗಣೇಶನ ಹಬ್ಬದ ನಂತರ ಮುಂದುವರೆಯುವ ಆಪರೇಷನ್‌ನಲ್ಲಿ ರೆಡ್ಡಿಗಳು ಯಶಸ್ವಿಯಾಗುವುದು ಖಂಡಿತ ಎಂದು ರಾಜಕೀಯ ತಲೆಹಿಂಡುಕರು ಬೀಗುತ್ತಿದ್ದರೆ, ಜೆಡಿಎಸ್‌ನ ಸೋಮಾರಿಗಳು ಕೊನೆಗೂ ಮೈಕೊಡವಿ ಎದ್ದು ಪ್ರತಿಭಟನೆಗೆ ಸಜ್ಜಾಗುತ್ತಿದ್ದಾರೆ.

■ವರದಿಗಾರ

ಯಡ್ಡಿ ಮಗನಿಗೆ ಕೆ.ಆರ್.ಪೇಟೆ ಮತಕ್ಷೇತ್ರ?

ಮೂಲತಃ ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆಯವರಾದ ಯಡಿಯೂರಪ್ಪ ಶಿಕಾರಿಪುರಕ್ಕೆ ಹೋಗಿ ಚಡ್ಡಿ ತೊಟ್ಟು, ಲಾಠಿ ಬೀಸಿ ಇಂದು ಮುಖ್ಯ ಮಂತ್ರಿಯಾಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಗೊತ್ತಿಲ್ಲದಿರುವ ಸಂಗತಿಯೇನೆಂದರೆ ಮುಂದಿನ ಚುನಾವಣೆಯಲ್ಲಿ ತನ್ನ ಎರಡನೇ ಮಗ ವಿಜಯೇಂದ್ರನನ್ನು ಇಲ್ಲಿಂದ ಎಂಎಲ್‌ಎ ಮಾಡಲು ಯಡ್ಡಿ ತಾಲೀಮು ನಡೆಸುತ್ತಿರುವುದು..... ಹಾಗೆಂದು ಇಲ್ಲಿನ ಬಿಜೆಪಿ ವಲಯದಲ್ಲಿ ದಟ್ಟ ಸುದ್ದಿ ಹರಡಿದೆ.


ವಿಜಯೇಂದ್ರ

ತಮ್ಮ ಮೊದಲ ಮಗ ರಾಘವೇಂದ್ರನಿಗೆ ಹೇಗೂ ಶಿಕಾರಿಪುರವನ್ನು ವಹಿಸಿರುವ ಯಡಿಯೂರಪ್ಪ, ಸದಾ ತನ್ನ ಹಿಂದೆಮುಂದೆ ಓಡಾಡಿಕೊಂಡಿರುವ ಎರಡನೆಯ ಸುಪುತ್ರನಿಗೆ ಒಂದು ಕ್ಷೇತ್ರ ಕೊಡದಿದ್ದರೆ ಹೇಗೆ? ತಂದೆಯಾಗಿ ಬರೀ ಆಸ್ತಿ ಮಾಡಿದರೆ ಸಾಕೆ? ಮಗನಿಗೆ ಒಂದು ಮತ ಕ್ಷೇತ್ರವನ್ನು ದಯಪಾಲಿಸದಿದ್ದರೆ ಅದು ಪ್ರಜಾಪ್ರಭುತ್ವಕ್ಕೇ ತಾವು ಮಾಡುವ ಅವಮಾನವಲ್ಲವೇ? ಹೀಗೆಲ್ಲಾ ತರ್ಕಿಸಿರುವ ಯಡ್ಡಿ ತಮ್ಮ ಎರಡನೆ ಪುತ್ರರತ್ನನಿಗೆ ಆಯ್ಕೆ ಮಾಡಿರುವುದು ಕೆ.ಆರ್.ಪೇಟೆಯನ್ನು.

ಆದರೆ ಕ್ಷೇತ್ರವನ್ನು ಆಯ್ಕೆ ಮಾಡಿದರೆ ಸಾಕಾಗುವುದಿಲ್ಲವಲ್ಲಾ, ಆ ಕ್ಷೇತ್ರವನ್ನು ಚಡ್ಡಿಮಯ ಮಾಡಬೇಕು, ಅದಕ್ಕೆ ಗಲಭೆಗಳನ್ನು ನಡೆಸಬೇಕು, ಕೋಮು ದ್ವೇಷ ಹರಡಬೇಕು, ಅದಕ್ಕೆ ಕಾರಣರಾದವರನ್ನು ಕಾನೂನಿನ ಬಾಹುಗಳಿಂದ ರಕ್ಷಿಸಬೇಕು. ಆ ನಿಟ್ಟಿನಲ್ಲೇ ಸಂಘಪರಿವಾರದ ಮಂಗಗಳಿಗೆ ಕಂಡದ್ದಕ್ಕೆಲ್ಲಾ, ಕಾಣದಿದ್ದಕ್ಕೆಲ್ಲಾ ಗಲಭೆ ಮಾಡಿ, ನಾವು ಪೊಲೀಸರನ್ನು ನೋಡಿಕೊಳ್ಳುತ್ತೇವೆ ಎಂಬ ಭರವಸೆ ನೀಡಿದ್ದಾರಂತೆ.

ಚಡ್ಡಿಗಳಿಗೆ ಇಂತಹ ಮುಕ್ತ ಪರವಾನಗಿಗಿಂತ ಇನ್ನೇನು ಬೇಕು?



ಮಾದೇಶದ ನಿರ್ಮಾಪಕ ಪರಾರಿ?

ಶಿವಣ್ಣ ಅಭಿನಯದ ಛಪ್ಪರ್ ಡೈರೆಕ್ಟರ್ ರವಿಶ್ರೀವತ್ಸನ ವಿಚಿತ್ರ ಸೃಷ್ಟಿಯಾದ 'ಮಾದೇಶ' ಪ್ರೇಕ್ಷಕರೇ ಬಾರದೇ ನೊಣ ಹೊಡೆಯುತ್ತಿದ್ದರೆ, ಮತ್ತೊಂದೆಡೆ ಅದರ ಪ್ರೊಡ್ಯೂಸರ್ ಗೋವರ್ಧನ್‌ಮೂರ್ತಿ ಬೆಂಗಳೂರನ್ನೇ ಬಿಟ್ಟು ಪರಾರಿಯಾಗಿದ್ದಾನೆ. ತಲೆತಿರುಕ ಲ್ಯಾಂಡ್ ಡೀಲರ್ ಒಬ್ಬನಿಗೆ ಸಿನಿಮಾ ಶೋಕಿ ಮತ್ತು ರೌಡಿಜಮ್ಮಿನ ಶೋಕಿ ಒಟ್ಟೊಟ್ಟಿಗೆ ನೆತ್ತಿಗೇರಿದರೆ ಏನಾಗುತ್ತದೆ ಎಂಬುದಕ್ಕೆ ಗೋವರ್ಧನಮೂರ್ತಿಗಿಂತ ಉದಾಹರಣೆ ಬೇಕೆ?


ಬಿಡುಗಡೆಯಾದ ಒಂದೇ ವಾರಕ್ಕೆ, ವಾಂತಿಬೇಧಿಗೆ ಸಿಲುಕಿದಂತೆ ಸುಸ್ತುಬಿದ್ದ 'ಮಾದೇಶ' ಚಿತ್ರಕ್ಕೂ, ಅದರ ನಿರ್ಮಾಪಕ ಗೋವರ್ಧನಮೂರ್ತಿ ಎಂಬಾತ ಇದ್ದಕ್ಕಿದ್ದಂತೆ ನಾಪತ್ತೆಯಾಗಿದ್ದಕ್ಕೂ ಏನು ಸಂಬಂಧ?

ಇದು ಸದ್ಯ ಗಾಂಧಿನಗರದ ಸಂದಿಗೊಂದಿಯಲ್ಲೂ ...ಟ್ಯಾಡುತ್ತಿರುವ ಲೇಟೆಸ್ಟ್ ಪ್ರಶ್ನೆ. ಒಂದೆಡೆ ಶಿವಣ್ಣ ಅಭಿನಯದ ಛಪ್ಪರ್ ಡೈರೆಕ್ಟರ್ ರವಿಶ್ರೀವತ್ಸನ ವಿಚಿತ್ರ ಸೃಷ್ಟಿಯಾದ 'ಮಾದೇಶ' ಪ್ರೇಕ್ಷಕರೇ ಬಾರದೇ ನೊಣ ಹೊಡೆಯುತ್ತಿದ್ದರೆ, ಮತ್ತೊಂದೆಡೆ ಅದರ ಪ್ರೊಡ್ಯೂಸರ್ ಗೋವರ್ಧನ್‌ಮೂರ್ತಿ ಬೆಂಗಳೂರನ್ನೇ ಬಿಟ್ಟು ಪರಾರಿಯಾಗಿದ್ದಾನೆ. ತಲೆ ಕೆಟ್ಟವರೇನಾದರೂ ನಂಬಬಹುದಾದರೆ ಅದು ಐದು ಕೋಟಿ ಬಜೆಟ್ಟಿನ ಚಿತ್ರ! ಈ ಪೈಕಿ ಪಾತಕಿ ಸೈಲೆಂಟ್ ಸುನೀಲ ಮತ್ತು ಆತನ ರೈಟ್ ಹ್ಯಾಂಡ್ ಒಂಟೆಯ ಪಾಲೇ ಮೂರು ಕೋಟಿಯಂತೆ!

ಮಾದೇಶ ತೋಪಾಗುವುದಕ್ಕೂ ಅದರ ನಿರ್ಮಾಪಕ ಗೋವರ್ಧನಮೂರ್ತಿಯ ನಾಪತ್ತೆಗೂ ಸಂಬಂಧವಿದ್ದೇ ಇದೆ ಎಂಬುದು ಸದ್ಯ ಗಾಂಧಿನಗರದ ರೂಮರ್. ಮೇಲುನೋಟಕ್ಕಿದು ಸತ್ಯವಾಗೇ ಕಾಣುತ್ತಿದೆ. ಇಲ್ಲಿಗೆ ವರ್ಷದ ಹಿಂದೆ ಮಾದೇಶದ ಮುಹೂರ್ತದ ದಿನ ಚಿಕ್ಕನಕಣ್ಣು ರಾಜೇಂದ್ರನ ಹಂತಕೋತ್ತಮರ ಮಧ್ಯೆ ನಿಂತು ಪೋಜು ಕೊಟ್ಟು ನಾಪತ್ತೆಯಾದವನು ಗೋವರ್ಧನಮೂರ್ತಿ. ಆನಂತರದ 'ಮಾದೇಶ' ಚಿತ್ರಕ್ಕೆ ಸಂಬಂಧಪಟ್ಟಂತೆ ನಡೆದ ಪತ್ರಿಕಾಗೋಷ್ಠಿ, ಪಾರ್ಟಿ, ಟೀವಿ ಷೋ, ಕ್ಯಾಸೆಟ್ ಬಿಡುಗಡೆ ಇತ್ಯಾದಿ ಯಾವುದಕ್ಕೂ ಈತ ಕಾಲಿಟ್ಟಿಲ್ಲ. 'ಮಾದೇಶ' ತೆರೆಕಂಡ ಆಗಸ್ಟ್ 29 ರ ರಾತ್ರಿ ಮೆಜೆಸ್ಟಿಕ್‌ನ ಬೆಲ್ ಹೋಟೆಲಿನಲ್ಲಿ ಪತ್ರಕರ್ತರಿಗೆ ಕೊಟ್ಟ ಪಾರ್ಟಿಯೇ ಕೊನೆ. ಆನಂತರ ಆತನನ್ನು ಕಂಡವರಿಲ್ಲ. ಆವತ್ತು ಗೋವರ್ಧನಮೂರ್ತಿಯ ಅವತಾರ ಅದೆಷ್ಟು ವಿಚಿತ್ರವಾಗಿತ್ತೆಂದರೆ ಅಕ್ಕಪಕ್ಕ ಇಬ್ಬರು ಬಂದೂಕುಧಾರಿ ಬಾಡಿಗಾರ್ಡ್‌ಗಳು, ಸಾಲದೆಂಬಂತೆ ಒಂದು ಡಜನ್ ಪೋರ್ಕಿ ಬಂಟರನ್ನು ಜೊತೆ ಹಾಕಿಕೊಂಡೇ ಪಾರ್ಟಿಗೆ ಪ್ರತ್ಯಕ್ಷನಾಗಿದ್ದ. ನೆರೆದ ಪತ್ರಕರ್ತರ ಮುಂದೆ ಸಿಕ್ಕಾಪಟ್ಟೆ ವಿಸ್ಕಿ ಕುಡಿದು ಏನೇನೋ ಬಡಬಡಿಸಿದ.

ಯಾರೋ ಪತ್ರಕರ್ತರೊಬ್ಬರು 'ಈ ಥರ ರೌಡಿಗಳನ್ನು ಹಾಕ್ಕೊಂಡು ಪೋ ಕೊಡ್ತಿಯಲ್ಲಾ ನಿನಗೇನಯ್ಯಾ ಬಂದಿರೋದು?' ಅಂತ ಕೇಳಿದ್ದಕ್ಕೆ ಅವರ ಮೇಲೆ ಏರಿಹೋದ. ಬಂದಷ್ಟೇ ವೇಗವಾಗಿ ರೌಡಿ ಹಿಂಡಿನ ಸಮೇತ ನಾಪತ್ತೆಯಾದ ನರಪೇತಲ ಗೋವರ್ಧನಮೂರ್ತಿಯನ್ನು ಆನಂತರ ಯಾರೂ ಕಂಡಿಲ್ಲ. ಹಾಗೊಮ್ಮೆ 'ಮಾದೇಶ' ತೋಪಾಗಿದ್ದಕ್ಕೇ ಲುಕ್ಸಾನು ಭರಿಸಲಾಗದೇ ಗೋವರ್ಧನ ನಾಪತ್ತೆಯಾಗಿದ್ದರೆ ಆವತ್ತು ಪಾರ್ಟಿಗೆ ಬಂದಿದ್ದ ರೌಡಿ ಹಿಂಡು ಸುನೀಲನ ವಿರೋಧಿ ಪಡೆಯಾಗಿರಲೇಬೇಕು ಎಂಬುದು ಒಂದು ವಾದವಾದರೆ, ರೌಡಿ ಸುನೀಲನಿಗೆ ಕೊಡಬೇಕಿದ್ದ ಮೂರುಕೋಟಿ ಪಾಲನ್ನು ಮುಂಡಾಯಿಸಲಿಕ್ಕೇ ಆತ ತಲೆ ಮರೆಸಿಕೊಂಡಿದ್ದಾನೆಂಬುದು ಮತ್ತೊಂದು ವದಂತಿ. ಹಕೀಕತ್ತೇನೆಂದರೆ ಏಕಕಾಲಕ್ಕೆ ರಾಜ್ಯದ 82 ಥೇಟರುಗಳಲ್ಲಿ ತೆರೆಕಂಡ 'ಮಾದೇಶ' ಮೊದಲ ವಾರಕ್ಕೇ ಸರಿ ಸುಮಾರು ಒಂದೂವರೆ ಕೋಟಿಯ ಲಾಭ ಕಂಡಿದೆ. ಅದೂ ಥೇಟರ್ ಬಾಡಿಗೆ ಕಳೆದು ದಕ್ಕಿದ ಮೊತ್ತ. ಸ್ಯಾಟಿಲೈಟ್ ರೈಟ್ಸ್‌ಗೆಂದು ಉದಯ ಟಿವಿ ಕೊಟ್ಟ 80 ಲಕ್ಷವೂ ಸೇರಿದರೆ ಆಡಿಯೋ ಮತ್ತು ವೀಡಿಯೋ ಹಕ್ಕಿನಿಂದಲೇ ಒಂದು ಕೋಟಿ ಬಂದಿದೆ. ಅಲ್ಲಿಗೆ ಎರಡೂವರೆ ಕೋಟಿಯಷ್ಟೇ ಬಂದಂತಾಯ್ತು. ಆದರೆ ಖರ್ಚಾಗಿದ್ದು ಐದು ಕೋಟಿ!


ಎರಡನೇ ವಾರಕ್ಕೆ ಸುಸ್ತುಬಿದ್ದ 'ಮಾದೇಶ'ದ ಗ್ರಾಮಾಂತರ ಕಲೆಕ್ಷನ್ ಶೇ. 2.5 ಕ್ಕೆ ಇಳಿದರೆ ಬೆಂಗಳೂರಿನಲ್ಲಿದು 60 ಪರ್ಸೆಂಟಿನಷ್ಟಿದೆ. ಮತ್ತೆ ಏನೇ ಬಂದರೂ ಅದು ಥೇಟರುಗಳ ಬಾಡಿಗೆಗೇ ಸರಿ ಹೋಗುತ್ತದೆ. ಅಲ್ಲಿಗೆ ಎರಡೂವರೆ ಕೋಟಿಯ ಮೇಲೆ ನಯಾ ಪೈಸೆಯೂ ಹುಟ್ಟುವ ಲಕ್ಷಣಗಳಿಲ್ಲ ಎಂದಾಯ್ತು ತಾನೇ?



ಸುನೀಲ

ಇದೇ ತಲೆಬಿಸಿಯಲ್ಲಿ ಸೈಲೆಂಟ್ ಸುನೀಲನಿಗೆ ಕೊಡಬೇಕಿದ್ದ ದುಡ್ಡು ಕೊಡಲಾಗದೇ ಗೋವರ್ಧನ ಮೂರ್ತಿ ತಲೆಮರೆಸಿಕೊಂಡಿರಬಹುದೆ?


ಆದರೆ ಅಸಲೀ ಹಕೀಕತ್ತೇ ಬೇರೆಯಿದೆ. ಮೂಲತಃ ಕಮ್ಮನಹಳ್ಳಿಯ ಸಮೀಪದ ಹೆಣ್ಣೂರು ಮುಖ್ಯರಸ್ತೆಯ ಬಿಳೇಶಿವಾಲೆ ಗ್ರಾಮದ ಜಮೀನ್ದಾರ ಮುದ್ದಣ್ಣನ ಮಗನಾದ ಗೋವರ್ಧನಮೂರ್ತಿಗೆ ಮೂರು ಕೋಟಿಯಾಗಲಿ, ಐದು ಕೋಟಿಯಾಗಲಿ, ದೊಡ್ಡ ಮೊತ್ತವೇನಲ್ಲ. ಕಮ್ಮಿಯೆಂದರೂ ಐನೂರು ಕೋಟಿಯ ಕುಬೇರ. ತಂದೆಗೆ ಬಿಳೇಶಿವಾಲೆಯಲ್ಲಿ ಪಿತ್ರಾರ್ಜಿತವಾಗಿ ಬಂದಿದ್ದ ಇನ್ನೂರೈವತ್ತು ಎಕರೆ ಭೂಮಿಗೆ ಈಗ ಚಿನ್ನದ ಬೆಲೆ. ಅದನ್ನೇ ಹಂಚಿಕೊಂಡ ಮುದ್ದಣ್ಣನ ಐವರೂ ಮಕ್ಕಳಿಗೆ ತಲಾ ಐವತ್ತೆಕರೆಯಂತೆ ಪಾಲು ಬಂದಿದೆ. ಮುದ್ದಣ್ಣನ ಮಕ್ಕಳ ಪೈಕಿ ಹಿರೀಕನಾದ ಚನ್ನಕೇಶವ ಇವತ್ತಿಗೆ ಸಾವಿರ ಕೋಟಿಗಿದ್ದಾನೆ.



ರವಿಶ್ರೀವತ್ಸಾ

ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿದನಂತೆ ಎಂಬಂತೆ ರಿಯಲ್ ಎಸ್ಟೇಟ್ ದಂಧೆಯಲ್ಲಿ ಕುಬೇರನಾದ ಗೋವರ್ಧನಮೂರ್ತಿಗೆ ಪುಡಿರೌಡಿಗಳ ಜೊತೆ ಪೋಜು ಕೊಡುವ ಹುಚ್ಚಿದೆ. ಇದರ ಫಲವೇ ಗೆದ್ದಲಹಳ್ಳಿಯ ಆನಂದ್ ಎಂಬ ನೆಲಹಿಡುಕನಿಗೂ ಗೋವರ್ಧನಮೂರ್ತಿಗೂ ಶುರುವಾದ ಜಿದ್ದಾಜಿದ್ದಿ.

ಗೆದ್ದಲಹಳ್ಳಿಯಲ್ಲಿ ಬಿ.ಎಂ. ಎಂಟರ್‌ಪ್ರೈಸಸ್ ಎಂಬ ರಿಯಲ್ ಎಸ್ಟೇಟ್ ಅಡ್ಡೆ ನಡೆಸುವ ಆನಂದ್ ಕೂಡ ಮೂಲತಃ ಬಿಳಿಶಿವಾಲೆಯವನೆ. ತನ್ನನ್ನು ವಂಚಿಸಿದ ನಾಗೇಶ್ ಎಂಬಾತನ ಬೆನ್ನಿಗೆ ಗೋವರ್ಧನ ಮೂರ್ತಿ ನಿಂತಿದ್ದೇ ಆನಂದ್ ಹಠಕ್ಕೆ ಬಿದ್ದ, ಪದೇಪದೇ ಗೋವರ್ಧನನ ಮೇಲೆ ದಾಳಿ ನಡೆಸಿದ. ಯಾವತ್ತು ಗೋವರ್ಧನಮೂರ್ತಿಯ ಕಾರು ಆಕ್ಸಿಡೆಂಟಿಗೆ ಸಿಲುಕಿ ಜೊತೆಗಿದ್ದ ಮತ್ತೀಕೆರೆ ರವಿ ಎಂಬ ಶಿಷ್ಯ ಸತ್ತುಹೋದನೋ ಆಗಲೇ ತನ್ನ ಹತ್ಯೆಗೆ ಆನಂದ ಸ್ಕೆಚ್ಚು ಹಾಕುತ್ತಿದ್ದಾನೆಂಬ ಅನುಮಾನವೊಂದು ಗೋವರ್ಧನನನ್ನು ಕಾಡಿದೆ. ಅವತ್ತಿನಿಂದ ಜೊತೆಗೊಂದಷ್ಟು ಪೋರ್ಕಿ ಹುಡುಗರನ್ನು ಕಟ್ಟಿಕೊಂಡು ಸುತ್ತಲಾರಂಭಿಸಿದ. ಕ್ರಮೇಣ ಲಲ್ಲೇಶ್‌ರೆಡ್ಡಿ ಎಂಬ ಮತ್ತೊಬ್ಬ ರಿಯಲ್ ಎಸ್ಟೇಟ್ ಕುಳನನ್ನು ಜೊತೆಹಾಕಿಕೊಂಡ. ಇಬ್ಬರಿಗೂ ವಿಪರೀತ ಚಪಲ. ಬೇಕಾಬಿಟ್ಟ ದುಡ್ಡು ಬೇರೆ ಇತ್ತಲ್ಲ. ಬಹುಶಃ ಇಂಥ ಶೋಕಿಗೆ ಬಿದ್ದೇ ಗೋವರ್ಧನ ಮತ್ತು ಲಲ್ಲೇಶ್‌ರೆಡ್ಡಿ ಸಿನಿಮಾ ಪ್ರೊಡ್ಯೂಸರ್‌ಗಳ ಗೆಟಪ್ಪಿನಲ್ಲಿ ಗಾಂಧಿನಗರಕ್ಕೆ ಎಂಟ್ರಿ ಕೊಟ್ಟಿದ್ದಾರೆ.



ಛೋಟಾರಾಜನ್

ಇಂಥ ಶೋಕಿಲಾಲರ ತಲೆ ಬೋಳಿಸಲಿಕ್ಕೆಂದೇ ಗಾಂಧಿನಗರದ ಖದೀಮರು ಕಾದಿರುತ್ತಾರೆ. ಈ ಪೈಕಿ ಮೊದಲು ಇವರಿಬ್ಬರನ್ನೂ ಬುಟ್ಟಿಗೆ ಕೆಡವಿದ್ದು ಮದನ್ ಮಲ್ಲು. ತನ್ನ ಮಗ ಮಯೂರ್ ಪಟೇಲ್‌ನನ್ನೇ ಹೀರೋ ಮಾಡಿ ಸರಿಸುಮಾರು ಮೂರು ಕೋಟಿಯ ಬಜೆಟ್ಟಿನಲ್ಲಿ 'ಸ್ಟೂಡೆಂಟ್' ಎಂಬ ಡಬ್ಬಾ ಸಿನಿಮಾ ಸೃಷ್ಟಿಸಿ ಕೊಟ್ಟ ಮದನ್‌ಮಲ್ಲು ಸರಿಯಾಗೇ ಬೋಳಿಸಿದ್ದ. ಅಲ್ಲಿಗೆ ಲಲ್ಲೇಶ್‌ರೆಡ್ಡಿಗೂ ಗೋವರ್ಧನನಿಗೂ ದುಡ್ಡೂಕಾಸಿನ ಕಿತ್ತಾಟ ಬಂದು ಇಬ್ಬರೂ ಬೇರೆಯಾದದ್ದು ಒಂದಾದರೆ ಅದೇ ಹೊತ್ತಿಗೆ ಗೋವರ್ಧನ ದುಷ್ಮನ್ ಆನಂದನೂ ಕಾಟ ಎರಡನೇ ರೌಂಡ್ ಶುರು ಹಚ್ಚಿಕೊಂಡ.

ಅದೂ ಎಂಥಾ ಕಾಟವೆಂದರೆ 2007 ರ ಫೆಬ್ರವರಿಯಲ್ಲಿ ಗೋವರ್ಧನನಿಗೆ ಇದ್ದಕ್ಕಿದ್ದಂತೆ ದುಬೈನಿಂದ ಬೆದರಿಕೆ ಕರೆಗಳು ಶುರುವಾದವು. 'ಎರಡು ಕೋಟಿ ಕೊಡದೇ ಹೋದ್ರೆ ತೆರಿಕೋ ಖತಂ ಕರ್‌ದೂಂಗಾ' ಎಂದು ಪಕ್ಕಾ ಮುಂಬಯಿ ಅಂಡರ್‌ವರ್ಲ್ಡ್ ಭಾಷೆಯಲ್ಲಿ ಬರುತ್ತಿದ್ದ ಥ್ರೆಟ್‌ನ ಹಿಂದಿದ್ದವನು ಅದೇ ಹಳೇ ದುಷ್ಮನ್ ಆನಂದ.

ರಿಯಲ್ ಎಸ್ಟೇಟ್ ದಂಧೆಯಲ್ಲಿ ಆತನಿಗೆ ಮಂಗಳೂರಿನವನೊಬ್ಬ ಪಾಲುದಾರನಾಗಿದ್ದ. ಆತನ ಮೂಲಕ ಪರಿಚಿತನಾದವನು ಮಂಗಳೂರಿನ ಕಿನ್ನಿಗೋಳಿಯ ಅಲ್ತಾಫ್ ಅಲಿಯಾಸ್ ರಾಕೇಶ್. ಬೆಂಗಳೂರಿನ ರೆಸಿಡೆನ್ಸಿ ರಸ್ತೆಯಲ್ಲಿ ಟೈಮ್ಸ್ ಎಂಬ ಲೈವ್‌ಬ್ಯಾಂಡ್ ನಡೆಸಿಕೊಂಡಿದ್ದ ಅಲ್ತಾಫ್‌ನ ಪಾಲುದಾರನೇ ಮಂಗಳೂರಿನ ಅಖ್ತರ್ ಉರ್ಫ್ ಚೇತನ್. ಈತನ ಪೊಲೀಸ್ ಎನ್‌ಕೌಂಟರ್‌ನಲ್ಲಿ ಹತನಾದ ಮಂಗಳೂರಿನ ರೌಡಿ ಮುಲ್ಕಿ ರಫೀಕ್‌ನ ಅತ್ತೆಯ ಮಗ. ಇಲ್ಲಿಗೆ ನಾಲ್ಕೂವರೆ ವರ್ಷಗಳ ಹಿಂದೆ ಸುರತ್ಕಲ್‌ನ ಆರೆಸ್ಸೆಸ್ ಪಾತಕಿ ಮಹೇಶನನ್ನು ಕೊಂದು ಬೆಂಗಳೂರಿಗೆ ಪರಾರಿಯಾಗಿದ್ದ ಅಖ್ತರ್ ರಾಕೇಶ್ ಅಲಿಯಾಸ್ ಅಲ್ತಾಫ್ ಜೊತೆ ಸೇರಿ ಲೈವ್‌ಬ್ಯಾಂಡ್ ನಡೆಸುತ್ತಿದ್ದ.

ಈ ಇಬ್ಬರಿಗೂ ಟೈಮ್ಸ್ ಬ್ಯಾಂಡಿನ ಮ್ಯಾನೇಜರ್ ದೀಪು ಸುಬ್ಬಯ್ಯನ ಮೂಲಕ ಪರಿಚಿತನಾದವನು ಆನಂದ. ಆತನೇ ಗೋವರ್ಧನನಿಂದ ದುಡ್ಡು ಕೀಳುವ ಐಡಿಯಾ ಹೇಳಿಕೊಟ್ಟದ್ದು. ಆ ಹೊತ್ತಿಗಾಗಲೇ ದುಬೈಗೆ ಹೋಗಿಬಂದಿದ್ದ ಅಲ್ತಾಫ್ ಮತ್ತು ಅಖ್ತರ್ ದುಬೈನಿಂದ ಬರುವಾಗ ಅಲ್ಲಿನದೊಂದು ಸಿಮ್‌ಕಾರ್ಡ್ ತಂದು ಅದನ್ನೇ ದುಬೈನಿಂದ ಕರೆ ಮಾಡಿದಂತೆ ಬಳಸಿದ್ದಾರೆ. ಪದೇಪದೇ ಬೆದರಿಕೆ ಹಾಕಿ ಎರಡು ಕೋಟಿ ಕೊಡುವಂತೆ ಪೀಡಿಸಲಾರಂಭಿಸಿದ್ದಾರೆ.

ಇದೇ ಹೊತ್ತಿಗೆ ತಾನು ಮುತ್ತಪ್ಪ ರೈ ಸಂಬಂಧಿ ಎಂದೂ ತಾನೇ ದುಬೈ ಡಾನ್‌ಗಳ ಜೊತೆ ಮಾತಾಡಿ ದೀಲು ಕುದುರಿಸುತ್ತೇನೆಂದೂ ಮಂಗಳೂರು ಮೂಲದ ನಂದಕುಮಾರ್ ಎಂಬಾತ ಎಂಟ್ರಿಯಾಗಿದ್ದಾನೆ. ಇವರೆಲ್ಲ ಗೋವರ್ಧನನ ಮೊಬೈಲಿನಿಂದಲೇ ದುಬೈನ ನಂಬರಿಗೆ ಫೋನ್ ಮಾಡಿಸಿ ಅತ್ತಲಿಂದ ಛೋಟಾ ಶಕೀಲ್ ಕಡೆಯವನ ಜೊತೆ ಹಿಂದಿಯಲ್ಲಿ ಮಾತಾಡಿಸಿದ್ದಾರೆ. ವಾಸ್ತವವೇನೆಂದರೆ ಹಾಗೇ ಬೆಂಗಳೂರಿನಿಂದಲೇ ತಾನು ಛೋಟಾ ಶಕೀಲ್ ಕಡೆಯವನೆಂದು ಹಿಂದಿಯಲ್ಲಿ ಮಾತಾಡುತ್ತಿದ್ದವನು ಶಿವಾನಂದ ಸರ್ಕಲ್ ಬಳಿಯ ಸೀರಾಕ್ ಹೋಟೆಲಿನ ಮಾಲೀಕ ಜನಾರ್ದನರಾವ್ ಎಂಬಾತನ ಮಗ ಗಣೇಶ್!

ಒಂದೆಡೆ 'ಸ್ಟೂಡೆಂಟ್' ಚಿತ್ರ ತೋಪಾಗಿ ಮೂರು ಕೋಟಿ ಕಳಕೊಂಡ ತಲೆಬಿಸಿ, ಮತ್ತೊಂದೆಡೆ ದುಬೈ ಡಾನ್‌ಗಳ ಕಾಟಕ್ಕೆ ರೋಸತ್ತ ಗೋವರ್ಧನ 2007 ರ ಫೆಬ್ರವರಿಯಲ್ಲಿ ಈ ಬಗ್ಗೆ ಪೊಲೀಸರಿಗೆ ದೂರುಕೊಟ್ಟ. ಅವತ್ತು ಗೋಪಾಲ್ ಹೊಸೂರ್, ಸಿಸಿಬಿ ಇನ್ಸ್‌ಪೆಕ್ಟರ್‌ಗಳಾದ ರೇವಣ್ಣ, ನಂಜುಂಡೇಗೌಡರ ತಂಡ ವಸೂಲಿಗೆ ನಿಂತಿದ್ದ ಇಡೀ ತಂಡವನ್ನು ಹಿಡಿದು ಜೈಲಿಗೆ ಹಾಕಿತು. ಅಲ್ತಾಫ್ ಉರ್ಫ್ ರಾಕೇಶ್, ಅಖ್ತರ್ ಅಲಿಯಾಸ್ ಚೇತನ್, ಸೀರಾಕ್ ಮಾಲೀಕ ಗಣೇಶ್, ಬ್ಯಾಂಡ್ ಮ್ಯಾನೇಜರ್ ದೀಪು ಸುಬ್ಬಯ್ಯ, ರಿಯಲ್ ಎಸ್ಟೇಟ್ ಖದೀಮ ಸುಬ್ರಮಣಿ ಎಲ್ಲರೂ ಜೈಲುಪಾಲಾದರು.

ಅಲ್ಲಿಗೆ ತನ್ನ ತಾಪತ್ರಯ ಮುಗಿಯಿತೆಂದೇ ಲೆಕ್ಕ ಹಾಕಿದ ಗೋವರ್ಧನನಿಗೆ ಮತ್ತೆ ಥ್ರೆಟ್ ಶುರುವಾಗಿದ್ದು ಇಲ್ಲಿಗೆ ಆರು ತಿಂಗಳ ಹಿಂದೆ. ಈ ಬಾರಿ ಬರುತ್ತಿರುವುದು ದುಬೈನ ಅಸಲೀ ಪಾತಕಿಯ ಫೋನ್ ಕರೆ. ಆವನು ಛೋಟಾ ಶಕೀಲ್ ಕಡೆಯವನೆಂದು ಒಮ್ಮೆ ಹೇಳಿಕೊಂಡರೆ ಮತ್ತೊಮ್ಮೆ ಛೋಟಾ ರಾಜನ್‌ನ ರೈಟ್‌ಹ್ಯಾಂಡ್ ಎಂದು ಪರಿಚಯಿಸಿಕೊಂಡ ಪಾತಕಿ ಈ ಬಾರಿ ಐದು ಕೋಟಿ ಕೇಳುತ್ತಿದ್ದಾನೆ. ಕೊಡದೇ ಹೋದರೆ ನಿನ್ನನ್ನು ಖಂಡಿತಾ ಮುಗಿಸುತ್ತೇನೆ ಎನ್ನುತ್ತಿದ್ದಾನೆ. ಅದೂ ನವೆಂಬರ್ ತಿಂಗಳಲ್ಲಿ ನಡೆಯಲಿರುವ ನಿನ್ನ ಮದುವೆಗೆ ಮೊದಲೇ ನಿನ್ನನ್ನು ಕೊಂದು ಹಾಕುತ್ತೇನೆ ಎನ್ನುತ್ತಿದ್ದಾನೆ. ದುಬೈನಿಂದಲೇ ಕರೆ ಬರುತ್ತಿದೆ. 'ಮಾದೇಶ' ಚಿತ್ರದ ಮುಹೂರ್ತಕ್ಕೆಂದು ಸುನೀಲನ ಗ್ಯಾಂಗ್ ಕರೆಸಿದ್ದಕ್ಕೂ ದುಬೈ ಆಸಾಮಿ ಕಿಡಿಕಾರಿದ್ದಾನೆ. ಗೋವರ್ಧನನ ಅಣ್ಣ ಚನ್ನಕೇಶವನಿಗೂ ಬೆದರಿಕೆ ಹಾಕಿದ್ದಾನೆ. ಇಂಥದ್ದೇ ದಿನ, ಇಂಥಲ್ಲೇ ನೀನಿದ್ದೆ ಎಂಬ ಮಾಹಿತಿಯೂ ದುಬೈ ಆಸಾಮಿಗೆ ರವಾನೆಯಾಗುತ್ತಿದೆ. ಎಷ್ಟೇ ಸಿಮ್‌ಕಾರ್ಡ್ ಬದಲಿಸಿದರೂ ಹೊಸ ನಂಬರಿಗೇ ಥ್ರೆಟ್ ಕಾಲ್ ಬರುತ್ತಿದೆ.

ಇದರರ್ಥ ಈ ಬಾರಿ ದುಬೈ ಆಸಾಮಿಯಿಂದಲೇ ಗೋವರ್ಧನನಿಗೆ ಬೆದರಿಕೆ ಬಂದಿದೆ. ಮುಂಬರುವ ನವೆಂಬರ್ ತಿಂಗಳಿಗೆ ಆತನ ಮದುವೆಯೂ ಗೊತ್ತಾಗಿದೆ. ಮದುವೆಗೆ ಮೊದಲೇ ಮುಗಿಸುತ್ತೇನೆಂದು ದುಬೈ ಆಸಾಮಿ ಹೇಳಿದ್ದೇ ಬಹುಶಃ ಗೋವರ್ಧನನ ನಾಪತ್ತೆಗೆ ಮೂಲ ಕಾರಣ. ಕಮ್ಮನಹಳ್ಳಿಯ ತನ್ನ ರಿಯಲ್ ಎಸ್ಟೇಟ್ ಅಡ್ಡೆಯಿಂದ ಸದ್ಯ ಆತ ಹೊರಬೀಳುವ ಲಕ್ಷಣಗಳಿಲ್ಲ. ಒಂದೆಡೆ 'ಮಾದೇಶ' ತೋಪಾಗಿದೆ. ಮತ್ತೊಂದೆಡೆ ಕೊಟ್ಟ ದುಡ್ಡಿನ ವಸೂಲಿಗೆ ಸುನೀಲನ ಗ್ಯಾಂಗ್ ಕಾಟ. ಇನ್ನೊಂದೆಡೆ ದುಬೈ ಪಾತಕಿಗಳ ಧಮಕಿ. ತಲೆತಿರುಕ ಲ್ಯಾಂಡ್ ದೀಲರ್ ಒಬ್ಬನಿಗೆ ಸಿನಿಮಾ ಶೋಕಿ ಮತ್ತು ರೌಡಿಜಮ್ಮಿನ ಶೋಕಿ ಒಟ್ಟೊಟ್ಟಿಗೆ ನೆತ್ತಿಗೇರಿದರೆ ಏನಾಗುತ್ತದೆ ಎಂಬುದಕ್ಕೆ ಗೋವರ್ಧನಮೂರ್ತಿಗಿಂತ ಉದಾಹರಣೆ ಬೇಕೆ?


■ ರಾ. ಸೋಮನಾಥ್

ಕೆಪಿಸಿಸಿ ಅಧ್ಯಕ್ಷ ಸ್ಥಾನ


ಸಿದ್ಧು ವಿರುದ್ಧ ಗೌಡರು!

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಉದ್ಧಾರವಾಗುನಂತೆ ಕಾಣುತ್ತಿಲ್ಲ. ಕಳೆದ ಚುನಾವಣೆಯಲ್ಲಿ ಸೋತು ಸುಣ್ಣವಾಗಿರುವ ಕೆಲ ನಾಯಕರು ಅದರಿಂದ ಬುದ್ಧಿಕಲಿಯುವ ಬದಲಾಗಿ ಇತರರ ಕಾಲೆಳೆಯುವುದನ್ನೇ ತಮ್ಮ ವೃತ್ತಿಯಾಗಿಸಿಕೊಂಡಿದ್ದಾರೆ. ಅದು ಯಾವ ಮಟ್ಟಕ್ಕೆ ಹೋಗಿದೆ ಎಂದರೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಸಂಪೂರ್ಣ ನಾಶವಾಗುವವರೆಗೂ ಅವರೆಲ್ಲ ಸುಮ್ಮನಿರುವಂತೆ ಕಾಣಿಸುತ್ತಿಲ್ಲ.

ಚೆಡ್ಡಿ ನಾಯಕ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಯಾವ ಲಂಗು-ಲಗಾಮು ಇಲ್ಲದಂತೆ ಆಡಳಿತ ನಡೆಸುತ್ತಾ ಈಗ ನೂರು ದಿನಗಳನ್ನೂ ಪೂರೈಸಿದೆ. ದಿನಕ್ಕೊಂದು ಹುಚ್ಚು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾ ತಾನೆಷ್ಟು ಜನ ವಿರೋಧಿ ಎಂದು ಈಗಾಗಲೇ ಸಾಬೀತುಪಡಿಸಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಅವಮಾನಿಸುವಂತಹ ಕಾರ್ಯಗಳಲ್ಲಿ ತೊಡಗಿದೆ. ಈಗಂತೂ ಅಧಿಕಾರಿಗಳ ವರ್ಗಾವಣೆಯನ್ನು ದಂಧೆಯಾಗಿಸಿಕೊಂಡು ಕೋಟಿಗಟ್ಟಲೆ ಹಣ ಮಾಡುವುದರಲ್ಲಿ ನಿರತವಾಗಿದೆ. ಇಂತಹ ಸಂದರ್ಭದಲ್ಲಿ ಸಮರ್ಥ ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸಬೇಕಾಗಿದ್ದ ಕಾಂಗ್ರೆಸ್ ಪಕ್ಷವೇ ಸಮರ್ಥ ನಾಯಕರಿಲ್ಲದೆ ಒಡೆದ ಮನೆಯಾಗಿದೆ.



ಕಳೆದ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ಸೇರಿದಂತೆ ಪಕ್ಷದ ಸುಮಾರು 15 ಜನ ಪ್ರಮುಖ ನಾಯಕರು ಸೋತಿದ್ದರು. ಅವರೆಲ್ಲಾ ತಮ್ಮ ಸೋಲಿಗೆ ಕಾರಣವೇನೆಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕಿತ್ತು, ತಮ್ಮ ಕ್ಷೇತ್ರಗಳಲ್ಲಿ ಪಕ್ಷವನ್ನು ಪುನರ್ ಸಂಘಟಿಸುವುದರಲ್ಲಿ ತೊಡಗಬೇಕಿತ್ತು. ಅದನ್ನೆಲ್ಲ ಬಿಟ್ಟು ಈಗಲೂ ತಾವೇ ತಮ್ಮ ಪಕ್ಷದ ದೊಣ್ಣೆ ನಾಯಕರೆಂದು ಪಕ್ಷದ ಎಲ್ಲಾ ಚಟುವಟಿಕೆಗಳಲ್ಲಿ ಮೂಗು ತೂರಿಸುತ್ತಾ, ಮಾಧ್ಯಮಗಳಲ್ಲಿ ಹೀರೋಗಳಾಗುವ ಮೂರ್ಖ ಪ್ರಯತ್ನಗಳಲ್ಲಿ ತೊಡಗಿದ್ದಾರೆ. ಇವತ್ತು ಈ ದೊಣ್ಣೆ ಕರೆದರೆ ಬೆರಳೆಣಿಕೆಯಷ್ಟು ಮಂದಿಯೂ ಅವರ ಹಿಂದೆ ಬರುವುದಿಲ್ಲ ಎಂಬ ಸಾಮಾನ್ಯ ಜ್ಞಾನವೂ ಅವರಿಗೆ ಇದ್ದಂತಿಲ್ಲ.



ಚುನಾವಣೆಗಳು ಮುಗಿದನಂತರ ಆಗ ಪಕ್ಷದ ರಾಜ್ಯಾಧ್ಯಕ್ಷರಾಗಿದ್ದ ಮಲ್ಲಿಕಾರ್ಜುನ್ ಖರ್ಗೆ ಎಂಬ ದೊಡ್ಡ ದೊಣ್ಣೆ ನಾಯಕ 'ದೆಹಲಿ ಯಾತ್ರೆ' ಏರ್ಪಡಿಸಿದ್ದರು. ಆಗ ಅವರೊಂದಿಗೆ ಪಕ್ಷದಿಂದ ಆಯ್ಕೆಯಾಗಿದ್ದ ಶಾಸಕರಿಗಿಂತ 'ಸೋತ ಸರದಾರರೇ' ದೆಹಲಿಯಾತ್ರೆ ಕೈಗೊಂಡಿದ್ದರು ಎಂದರೆ ಪಕ್ಷ ಯಾವ ಸ್ಥಿತಿ ತಲುಪಿದೆ ಎಂದು ಅರ್ಥವಾಗುತ್ತದೆ.


ಈಗ ಕೆಪಿಸಿಸಿ ಅಧ್ಯಕ್ಷರ ಆಯ್ಕೆ ವಿಷಯದಲ್ಲಿಯೂ ತಾವೇ 'ದೊಡ್ಡ ನಾಯಕರು' ಎಂಬಂತೆ ಪೋಸು ಕೊಡುತ್ತಾ ದೆಹಲಿಯಾತ್ರೆ ಕೈಗೊಂಡ ಖರ್ಗೆ ಸಾಹೇಬರು ಹೈಕಮಾಂಡ್‌ನ ದಿಕ್ಕು ತಪ್ಪಿಸುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಅವರು ಹಾಗೆ ಮಾಡುವ ಮೂಲಕ ರಾಜ್ಯದಲ್ಲಿ ಬಿಜೆಪಿಯ ಬಲವರ್ಧನೆಗೆ ತಾವೇ ಪರೋಕ್ಷವಾಗಿ ಕಾರಣರಾಗುತ್ತಿದ್ದಾರೆ ಎಂಬುದನ್ನೇ ಮರೆತಿದ್ದಾರೆ.

ಡಿಕೆಶಿ ಕನಸಿಗೆ ಗೋರಿ ಕಟ್ಟಿದರು


ಅಂತೂ ಇಂತೂ ಪಕ್ಷದ ಸೋಲಿಗೆ ಹೊಣೆ ಹೊತ್ತು, ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಮಲ್ಲಿ ಕಾರ್ಜುನ ಖರ್ಗೆ ರಾಜೀನಾಮೆ ನೀಡಿದ್ದರು. ಆದರೆ ಅವರು ತೆರವುಗೊಳಿಸಿರುವ ಅಧ್ಯಕ್ಷ ಸ್ಥಾನಕ್ಕೆ ಹೊಸಬರನ್ನು ಆರಿಸಲು ಹೈಕಮಾಂಡ್ ಮುಂದಾದಾಗಲೆಲ್ಲಾ, ಅದರ ದಿಕ್ಕು ತಪ್ಪಿಸುವ ಕೆಲಸವನ್ನು ಈ ದೊಣ್ಣೆ ನಾಯಕರು ಮುಂದುವರೆಸಿದ್ದಾರೆ.

ಒಂದು ಹಂತದಲ್ಲಿ ಯುವ ನಾಯಕ ಡಿ.ಕೆ. ಶಿವಕುಮಾರ್ ಅಧ್ಯಕ್ಷರಾಗಿ ಆಯ್ಕೆಯಾಗುವುದು ಖಚಿತ ಎಂಬ ಸೂಚನೆ ಹೈಕಮಾಂಡ್‌ನಿಂದ ಹೊರಬಿದ್ದಿತ್ತು, ಶಿವಕುಮಾರ್ ಅವರು ಅದೆಷ್ಟೇ ನ್ಯೂನತೆಗಳನ್ನು ಹೊಂದಿದ್ದರೂ ಅವರು ಉತ್ಸಾಹಿ ಯುವಕ, ವಿರೋಧ ಪಕ್ಷಗಳನ್ನು ತರಾಟೆಗೆ ತೆಗೆದುಕೊಳ್ಳುವ ಧೈರ್ಯಶಾಲಿ, ಚುನಾವಣಾ ರಾಜಕೀಯದಲ್ಲಿ ಎಂತಹ ತಂತ್ರಗಳನ್ನು ಬಳಸಬೇಕೆಂದು ಅರ್ಥಮಾಡಿಕೊಂಡಿರುವ ಚಾಣಾಕ್ಷ. ಏನೇ ಆದರೂ, ಆಕ್ರಮಣಕಾರಿ ವ್ಯಕ್ತಿತ್ವದ ಡಿಕೆಶಿ ಪಕ್ಷದ ನೇತೃತ್ವ ವಹಿಸಿದಲ್ಲಿ ಬಿಜೆಪಿಯ ನಾಗಾಲೋಟಕ್ಕೆ ಕಡಿವಾಣ ಹಾಕುತ್ತಾರೆ. ಅದರಲ್ಲೂ ಕಾಂಗ್ರೆಸ್ ಈಗಿರುವ ಪರಿಸ್ಥಿತಿಯಲ್ಲಿ ಹಳೆ ತಲೆಗಳಿಗಿಂತ ಶಿವಕುಮಾರ್ ತರಹದ ಹೊಸ ತಲೆ ಮುಂದಾಳತ್ವ ವಹಿಸಿದರೆ ಪಕ್ಷ ಚುರುಕುಗೊಳ್ಳುತ್ತಿತ್ತು ಎಂಬುದು ಪಕ್ಷದ ಕಾರ್ಯಕರ್ತರ ಅನಿಸಿಕೆಯಾಗಿತ್ತು.

ಆದರೆ ತಮಗಿಂತ ಕಿರಿಯವರಾದ ಡಿಕೆಶಿ ಕಾಂಗ್ರೆಸ್ ಅಧ್ಯಕ್ಷನಾಗುವುದೆಂದರೇನು, ಆಕಸ್ಮಾತ್ ಆತ ಪಕ್ಷಕ್ಕೆ ಹೊಸ ಜೀವ ತುಂಬಿಸುವಲ್ಲಿ ಯಶಸ್ವಿಯಾದರೆ ತಮ್ಮ ಗತಿಯೇನು ಎಂದು ಭಯಭೀತರಾದ ಬಿಳಿ ತಲೆಗಳು ಸೋನಿಯಾ ಗಾಂಧಿಯವರ ಸುತ್ತಲಿರುವ ಕೆಲ ರಾಜ್ಯ ರಾಜಕಾರಣಿಗಳನ್ನು ಹಿಡಿದು ಶಿವಕುಮಾರ್ ಈ ಪಟ್ಟಕ್ಕೆ ಏರದಂತೆ ನೋಡಿಕೊಂಡರು. ಪಕ್ಷಕ್ಕಿಂತ ತಮ್ಮ ವೈಯಕ್ತಿಕ ಪ್ರತಿಷ್ಠೆಯೇ ಮುಖ್ಯವಾಗಿರುವ ಈ ನಾಯಕರು ಡಿಕೆಶಿಯ ಕನಸಿಗೆ ಗೋರಿ ಕಟ್ಟಿದರು. ಡಿಕೆಶಿಗೆ ಈ ಹುದ್ದೆ ತಪ್ಪಿಸಿದವರಲ್ಲಿ ಅವರ ರಾಜಕೀಯ ಗುರು, ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಕೂಡ ಸೇರಿದ್ದರು ಎಂಬುದು ಈಗ ಗುಟ್ಟಾಗಿಯೇನೂ ಉಳಿದಿಲ್ಲ.



ಶಿವಕುಮಾರ್ ಅವರ ಹಾದಿಗೆ ಹೈಟೆಕ್-ಲೋಟೆಕ್ ಲೀಡರ್‌ಗಳೆಲ್ಲ ಅಡ್ಡ ಬಂದ ನಂತರ ಆ ಹುದ್ದೆಗೆ ಕೇಳಿಬಂದಿದ್ದ ಹೆಸರುಗಳೆಲ್ಲವೂ ನಿರುಪಯೋಗಿ ನಾಯಕರದ್ದೇ. ಕಾಂಗ್ರೆಸ್ ಪಕ್ಷದವರಾಗಿದ್ದರೂ ಅರೆ ಚೆಡ್ಡಿಯಂತೆ ವರ್ತಿಸುವ ಡಿ.ಬಿ.ಚಂದ್ರೇಗೌಡ, ಎಲ್ಲೇ ಇದ್ದರೂ ತನಗೆಷ್ಟು ಲಾಭ ಎಂದೇ ನೋಡುವ ಆರ್.ವಿ.ದೇಶಪಾಂಡೆ, ಮುಂದೆ ಬಂದರೆ ಹಾಯದ ಹಿಂದೆ ಬಂದರೆ ಒದೆಯದ ಬಿ.ಎಲ್.ಶಂಕರ್, ದಲಿತ ಎಂಬ 'ಟ್ರಂಪ್‌ಕಾರ್ಡ್'ನ್ನು ಇಟ್ಟುಕೊಂಡು ಆಟವಾಡುವ ಜಿ. ಪರಮೇಶ್ವರ್ ಇಂಥವರ ಹೆಸರುಗಳೇ ಕಾಂಗ್ರೆಸ್ ಪಡಸಾಲೆಯಲ್ಲಿ ಕೇಳಿಬಂದಿದ್ದವು. ಅದರಲ್ಲೂ ದೇಶಪಾಂಡೆಯಂತೂ ತನ್ನ ಬೀಗರಾದ ಸಚಿವ ಪ್ರಫುಲ್ ಪಟೇಲ್‌ರ ಮೂಲಕ ಹೈಕಮಾಂಡ್ ತಮ್ಮತ್ತ ನೋಡುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದರು. ಆದರೆ ಅವರಿಗೆ ಜಾತಿ ಬಲವಿಲ್ಲ ಎಂಬ ಸಂಗತಿ ಹೈಕಮಾಂಡ್‌ಗೆ ಬಹು ಬೇಗನೆ ಅರ್ಥವಾಗಿ ರಾಜ್ಯ ಕಾಂಗ್ರೆಸ್ ಒಂದು ದೊಡ್ಡ ಅಪಾಯದಿಂದ ಬಚಾವಾಗಿತ್ತು.



ಸಿದ್ದು ರೀ-ಎಂಟ್ರಿ

ಹಿಂದುಳಿದ ವರ್ಗಗಳ ನಾಯಕ, ಸಾಕಷ್ಟು ಅನುಭವ ಮತ್ತು ಸಾಮರ್ಥ್ಯ ಹೊಂದಿರುವ, ಇವತ್ತಿಗೂ ಬಹಳಷ್ಟು ಜನರ ಬೆಂಬಲವನ್ನು ಹೊಂದಿರುವ ಸಿದ್ಧರಾಮಯ್ಯನವರು ಮನಸ್ಸು ಮಾಡಿದ್ದರೆ, ಚುನಾವಣೆಯಾಗುತ್ತಿದ್ದಂತೆಯೇ ಕೆಪಿಸಿಸಿ ಅಧ್ಯಕ್ಷರಾಗಿರಬಹುದಿತ್ತು, ಆದರೆ ಅದ್ಯಾಕೋ ಆಗ ಅವರು ಆ ಹುದ್ದೆ ಬೇಡ ಎಂದು ರೊಚ್ಚೆ ಹಿಡಿದಿದ್ದರಿಂದ ಹೈಕಮಾಂಡ್ ವಿಧಿ ಇಲ್ಲದೆ ಬೇರೆ ನಾಯಕರ ಹುಡುಗಾಟದಲ್ಲಿ ತೊಡಗಿತ್ತು.

ಆದರೆ ಆನಂತರ ಸಿದ್ಧರಾಮಯ್ಯ ತಮ್ಮ ಮನಸ್ಸನ್ನು

ಇದೇ 15 ರಂದು ಗೋಕರ್ಣದಲ್ಲಿ ರಾಮಚಂದ್ರಾಪುರ ಮಠದ ಪರವಾಗಿ ಬೃಹತ್ ರ್‍ಯಾಲಿಯೊಂದು ನಡೆಯಲಿದೆ. ಅವತ್ತಿನ ಕಾರ್ಯಕ್ರಮಕ್ಕೆ ಸರಿಸುಮಾರು ಒಂದು ಲಕ್ಷ ಜನರನ್ನು ಸೇರಿಸಲು ಆತನ ಬೆಂಬಲಿಗರು ಓಡಾಡುತ್ತಿದ್ದಾರೆ, ಒದ್ದಾಡುತ್ತಿದ್ದಾರೆ. ಆದರೆ ಅದೇ ದಿನ ರಾಘವೇಶ್ವರನ ವಿರುದ್ಧ ಪ್ರತಿಭಟಿಸಲು ಸ್ವರ್ಣವಲ್ಲಿ ಮಠದ ಮಹಾಸ್ವಾಮಿ ಸೇರಿದಂತೆ ಗೋಕರ್ಣದ ಜನ ಸಿದ್ಧತೆ ನಡೆಸುತ್ತಿದ್ದಾರೆ.

ಡಕಾಯಿತ ಸ್ವಾಮಿ v/s ಗೋಕರ್ಣ

ಸೆ.15ರಂದು ಯುದ್ಧ!



'ಗೋ' ಸ್ವಾಮಿ ರಾಘವೇಶ್ವರನ ಗೋಕರ್ಣ ಲೂಟಿಗೆ ಸ್ಥಳೀಯರಿಂದ ಭಾರಿ ವಿರೋಧ ವ್ಯಕ್ತವಾಗುತ್ತಿದೆ. ಬರೀ ಗೋಕರ್ಣ ಮಾತ್ರವಲ್ಲ, ಉತ್ತರ ಕನ್ನಡ ಜಿಲ್ಲೆಯ ಹಲವೆಡೆ ಈ ಡಕಾಯಿತ ಸ್ವಾಮೀಜಿ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿವೆ. ಈ ಬೆಳವಣಿಗೆಯಿಂದ ಬೆಚ್ಚಿ ಬಿದ್ದಿರುವ ಸ್ವಾಮೀಜಿ ಥೇಟ್ ರಾಜಕಾರಣಿಯಂತೆ ಧಮಕಿ ಹಾಕಿದ್ದಾನೆ. ತಾನೂ ತನ್ನ ಶಕ್ತಿ ಪ್ರದರ್ಶಿಸುತ್ತೇನೆಂದು ಹೇಳಿದ್ದಾನೆ. ಈ ಕಳ್ಳ ಸ್ವಾಮಿಯ ಬೆನ್ನಿಗೆ ಇಡೀ ಸಂಘಪರಿವಾರದ ಮಂಗಗಳು ನಿಂತಿದ್ದಾರೆ.

ಎಲ್ಲವೂ ಅಂದುಕೊಂಡಂತೆ ನಡೆದರೆ ಇದೇ 15 ರಂದು ಗೋಕರ್ಣದಲ್ಲಿ ರಾಮಚಂದ್ರಾಪುರ ಮಠದ ಪರವಾಗಿ ಬೃಹತ್ ರ್‍ಯಾಲಿಯೊಂದು ನಡೆಯಲಿದೆ. ಅವತ್ತಿನ ಕಾರ್ಯಕ್ರಮಕ್ಕೆ ಸರಿಸುಮಾರು ಒಂದು ಲಕ್ಷ ಜನರನ್ನು ಸೇರಿಸಲು ಆತನ ಬೆಂಬಲಿಗರು ಓಡಾಡುತ್ತಿದ್ದಾರೆ, ಒದ್ದಾಡುತ್ತಿದ್ದಾರೆ. ಸದ್ಯಕ್ಕೆ ಯಾರ ಕೈಗೂ ಸಿಗದಂತೆ ಬೆಂಗಳೂರಿನಲ್ಲಿ ಕುಳಿತಿರುವ ರಾಘವೇಶ್ವರ ಸ್ವಾಮಿ ಅಂದು ಹೆಲಿಕಾಪ್ಟರ್‌ನಲ್ಲಿ ಗೋಕರ್ಣಕ್ಕೆ ಹಾರಿ ಬಂದು ರ್‍ಯಾಲಿಯಲ್ಲಿ ಭಾಗವಹಿಸಲಿದ್ದಾನೆ. ಇದೊಂದು ಥೇಟ್ ರಾಜಕೀಯ ರ್‍ಯಾಲಿಯಂತೆ ನಡೆಯುವುದರ ಬಗ್ಗೆ ಈಗ ಯಾವ ಅನುಮಾನಗಳೂ ಉಳಿದಿಲ್ಲ, ಯಾಕೆಂದರೆ ಅಂದು ಕಾವಿ ತೊಟ್ಟಿರುವ ಈ 'ಗೋ'ಸ್ವಾಮಿಯ ಅಸಲಿ ಮುಖವಾದ ಪುಡಿ ರಾಜಕಾರಣಿಯ ದೌಲತ್ತು ಅನಾವರಣಗೊಳ್ಳಲಿದೆ.

ವಿರೋಧಿಗಳಿಗೆ ಅವಕಾಶವಿಲ್ಲ

ವಾಸ್ತವವಾಗಿ ಇದೇ 15ರಂದು ಇದೇ ರಾಘವೇಶ್ವರ ಸ್ವಾಮಿಯ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಲು ಸ್ಥಳೀಯರು ನಿರ್ಧರಿಸಿದ್ದರು. ಅದಕ್ಕೆ ಸಕಲ ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿದ್ದರು. ಹವ್ಯಕರ ಇನ್ನೋರ್ವ ಸ್ವಾಮೀಜಿಗಳಾದ ಸ್ವರ್ಣವಲ್ಲಿ ಮಠದ ಶ್ರೀಮದ್ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮೀಜಿ ಸೇರಿದಂತೆ ಅನೇಕ ಸ್ವಾಮೀಜಿಗಳು ಈ ಪ್ರತಿಭಟನೆಯಲ್ಲಿ ಭಾಗವಹಿಸಲು ಒಪ್ಪಿಕೊಂಡಿದ್ದರು. ಆದರೆ ಈ ಪ್ರತಿಭಟನೆ ನಡೆಯದಂತೆ ರಾಘವೇಶ್ವರ ತಂತ್ರ ರೂಪಿಸಿದ.

ಪೊಲೀಸರಿಗೆ ಸ್ವಾಮೀಜಿಯ ಫೋನು!

ರಾಘವೇಶ್ವರನ ವಿರುದ್ಧದ ಪ್ರತಿಭಟನೆಗೆ ಅನುಮತಿ ನೀಡುವಂತೆ ಸ್ಥಳೀಯ ಸಂಘಟನೆಯ ಆಯೋಜಕರು ಪೊಲೀಸರಿಗೆ ಅರ್ಜಿಯನ್ನು ಸಲ್ಲಿಸಿದ್ದರು. ಆದರೆ ಅಂದೇ ಬೆಂಗಳೂರಿನಿಂದ ನೇರವಾಗಿ ಸ್ಥಳೀಯ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಫೋನ್ ಮಾಡಿದ ರಾಘವೇಶ್ವರ "ಅವರ ರ್‍ಯಾಲಿಗೆ ಅವಕಾಶ ನೀಡಕೂಡದು. ಅವತ್ತೇ ನನ್ನ ಪರವಾಗಿ ರ್‍ಯಾಲಿ ನಡೆಯಲಿದೆ, ಅದಕ್ಕೆ ಮಾತ್ರ ಅನುಮತಿ ನೀಡಬೇಕು" ಎಂದು ಧಮಕಿ ಹಾಕಿದ.

ಆಗ ಪೊಲೀಸರು "ನಿಮ್ಮ ವಿರುದ್ಧದ ಪ್ರತಿಭಟನೆಕಾರರು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದಾರೆ" ಎಂದು ವಿವರಿಸಿದರೆ, "ಅವರಿಗಿಂತ ಮುಂಚೆಯೇ ನಾವು ಅರ್ಜಿ ಸಲ್ಲಿಸಿದ್ದೆವು ಎಂಬಂತೆ ದಾಖಲೆ ಸಿದ್ಧಪಡಿಸಿಕೊಳ್ಳಿ" ಎಂಬ ಐಡಿಯಾವನ್ನೂ ಈತನೇ ನೀಡಿದ್ದಾನೆ.

ಆಗ ವಿಧಿ ಇಲ್ಲದೆ ಪೊಲೀಸರು ಪ್ರತಿಭಟನಾಕಾರರನ್ನು ಕರೆಸಿ ಅವರಿಗೆ 'ಗಿಳಿ ಮಾತು' ಹೇಳಿ ವಾಪಸ್ಸು ಕಳುಹಿಸಿದ್ದಾರೆ. ಆದರೂ ರಾಘವೇಶ್ವರನ ವಿರುದ್ಧ ಪ್ರತಿಭಟನೆ ಆಯೋಜಿಸಿರುವ ಸ್ಥಳೀಯರು ಏನೇ ಆಗಲಿ ಅಂದೇ ತಾವೂ ಕೂಡ ಪ್ರತಿಭಟನೆ ನಡೆಸೇ ತೀರುತ್ತೇವೆ ಎಂಬ ನಿರ್ಧಾರಕ್ಕೆ ಬಂದಿದ್ದಾರೆ.

ದಿಕ್ಕು ತಪ್ಪಿಸುತ್ತಿರುವ ಸ್ವಾಮೀಜಿ

ಸರ್ಕಾರ ಈ ದೇವಸ್ಥಾನವನ್ನು ತನ್ನ ಮಠಕ್ಕೆ ಹಸ್ತಾಂತರಿಸಿರುವುದನ್ನು ಥೇಟ್ ರಾಜಕೀಯ ಪುಢಾರಿಯಂತೆ ಸಮರ್ಥಿಸಿಕೊಳ್ಳುತ್ತಿರುವ ರಾಘವೇಶ್ವರ ಇದಕ್ಕೊಂದು ಟಿವಿ ಚಾನಲ್‌ಗಳನ್ನೂ ಬಳಸಿಕೊಳ್ಳುತ್ತಿದ್ದಾನೆ. ಹೇಗಿದ್ದರೂ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದೆ, ಅದಕ್ಕೆ ತಕ್ಕಂತೆ ಆತನ ಹಿಂ(ಬಾಲ)ಕ ಮಹೇಶ್ ಜೋಶಿ ಎಂಬ ಬ್ರೇಮಿನ್ ಬೆಂಗಳೂರು ದೂರದರ್ಶನದ ನಿರ್ದೇಶಕನಾಗಿದ್ದಾನೆ. ಹಿಂದೊಮ್ಮೆ ರಾಘವೇಶ್ವರ ಗೋ ಸಮ್ಮೇಳನ ಎಂಬ ಡೋಂಗಿ ಕಾರ್ಯಕ್ರಮವನ್ನು ಏರ್ಪಡಿಸಿದ್ದಾಗ ಅದು ಜಗತ್ತಿನ ಬಹು ದೊಡ್ಡ ಸಂಗತಿ ಎಂಬಂತೆ ಈ ಮಹೇಶ್ ಜೋಶಿ ಅದನ್ನು ನಿರಂತರವಾಗಿ ಚಂದನ ಚಾನೆಲ್‌ನಲ್ಲಿ ಪ್ರಸಾರ ಮಾಡಿದ್ದ.

ಈಗಲೂ ಚಂದನ ಚಾನಲ್‌ನಲ್ಲಿ ರಾಘವೇಶ್ವರನ ಫೋನ್‌ಇನ್ ಕಾರ್ಯಕ್ರಮ ಪ್ರಸಾರವಾಗಿದೆ. ಧಾರ್ಮಿಕತೆಯ ಪ್ರಕಾರ ಯಾವತ್ತೂ ಪೀಠದಲ್ಲಿಯೇ ಕೂತಿರಬೇಕಾದ ಈ ಸ್ವಾಮೀಜಿ ಗೋಕರ್ಣದ ಹುಂಡಿಗಳ ಲ್ಲಿದ್ದ ಸುಮಾರು ಒಂದೂ ಮುಕ್ಕಾಲು ಕೋಟಿಯಷ್ಟು ಹಣ ಮತ್ತು ಚಿನ್ನವನ್ನು ಅಪ್ಪಟ ದರೋಡೆಕೋರನಂತೆ ಲೂಟಿ ಹೊಡೆದು ಅದನ್ನು ತನ್ನ ಮಠಕ್ಕೆ ತೆಗೆದುಕೊಂಡು ಹೋಗಿದ್ದನ್ನು ಸಮರ್ಥಿಸಿಕೊಳ್ಳಲು ಟಿವಿ ಚಾನಲ್‌ಗಳ ಸ್ಟುಡಿಯೋಗಳಿಗೆ ಹಾಜರಾಗಿ, ರಾಜಕಾರಣಿಯಂತೆ ಜನ ಕೇಳುವ ಪ್ರಶ್ನೆಗಳಿಗೆ ಉತ್ತರಿಸಿದ್ದಾನೆ. ಇದನ್ನು ಕಂಡು ಬೇರೆ ಜಾತಿಯವರಿರಲಿ, ಈತನ ಜಾತಿಯವರಾದ ಹವ್ಯಕರೇ ವಾಕರಿಕೆ ಅನುಭವಿಸಿದ್ದಾರೆ!

ತನ್ನನ್ನು ಗೋಕರ್ಣ ಮಂಡಲಾಧೀಶ್ವರ ಎಂದು ಕರೆಯುವುದರಿಂದ ಗೋಕರ್ಣ ತಮ್ಮ ಮಠಕ್ಕೇ ಸೇರಿದ್ದು ಎಂಬ ಹೊಸ ವಾದವನ್ನು ಈಗ ಈ ಕಳ್ಳ ಸ್ವಾಮಿ ನೀಡುತ್ತಿದ್ದಾನೆ. ವಾಸ್ತವವಾಗಿ ಗೋಕರ್ಣ ಮಂಡಲಾಧೀಶ್ವರ ಎಂದು ಕರೆಯುವುದು ಕೇವಲ ರಾಘವೇಶ್ವರ

ಬದಲಾಯಿಸುವಂತೆ ಅವರ ಬೆಂಬಲಿಗರು ಅವರ ಮನವೊಲಿಸುವಲ್ಲಿ ಯಶಸ್ವಿಯಾದರು. ಇದು ಕಾಂಗ್ರೆಸ್‌ನ ಕಿಡಿಗೇಡಿಗಳಿಗೆ ಗೊತ್ತಾದಾಗ ಮತ್ತೊಂದು ತಕರಾರನ್ನು ಎತ್ತಿದರು. ಅದೇನೆಂದರೆ 'ಸಿದ್ಧರಾಮಯ್ಯ ಇತ್ತೀಚೆಗೆ ತಾನೆ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ಆದ್ದರಿಂದ ಅವರನ್ನು ಅಧ್ಯಕ್ಷರನ್ನಾಗಿಸಿದರೆ ಅವರೊಂದಿಗೆ ಮೂಲ ಕಾಂಗ್ರೆಸ್ಸಿನವರಾದ ಯಾರಾದರೊಬ್ಬರನ್ನು ವರ್ಕಿಂಗ್ ಪ್ರೆಸಿಡೆಂಟ್ ಮಾಡಬೇಕು' ಎಂಬ ತರ್ಕ. ಆದರೆ ಅದಕ್ಕೆ ಸಿದ್ದು ಸುತಾರಾಮ್ ಒಪ್ಪಲಿಲ್ಲ, ಹಾಗೆ ತನ್ನೊಂದಿಗೆ ಮತ್ತೊರ್ವ ನಾಯಕ ಕಾರ್ಯಾಧ್ಯಕ್ಷನಾದರೆ ತನ್ನ ಮಾತು ಕಾಂಗ್ರೆಸ್‌ನಲ್ಲಿ ನಡೆಯದಂತೆ ತಡೆಯಲಾಗುತ್ತದೆ ಎಂಬುದು ಸಿದ್ದು ಅವರ ಅಭಿಪ್ರಾಯವಾಗಿತ್ತು, ಆದರೆ ಅವರ ಬೆಂಬಲಿಗರು ಮತ್ತು ಸಿದ್ದು ಮೇಲೆ ಒತ್ತಡ ತಂದರು. 'ಈಗ ಪಕ್ಷದಲ್ಲಿ ಮೂಲೆಗುಂಪಾದರೆ ಮುಂದೆ ಕಾಂಗ್ರೆಸ್‌ನಲ್ಲಿ ಮುಂಚೂಣಿಗೆ ಬರಲು ಸಾಧ್ಯವೇ ಇಲ್ಲ' ಎಂದು ಅವರ ಆಪ್ತರು ಮನವರಿಕೆ ಮಾಡಿಕೊಟ್ಟದ್ದರಿಂದ ಸಿದ್ದು ತಮ್ಮ ನಿಲುವನ್ನು ಬದಲಾಯಿಸಿದರು.

ಇದು ಹೈಕಮಾಂಡ್‌ಗೂ ಖುಷಿಯ ವಿಷಯವೇ ಆಗಿತ್ತು. ಏಕೆಂದರೆ ಎಲ್ಲರಿಗಿಂತಲೂ ಸಿದ್ಧರಾಮಯ್ಯನವರೇ ಆ ಹುದ್ದೆಗೆ ಸೂಕ್ತ ಎಂಬುದು ಅದರ ನಿಲುವಾಗಿತ್ತು. ಹೀಗಾಗಿ ಮೊನ್ನೆ ಸಿದ್ಧರಾಮಯ್ಯನವರನ್ನು ದೆಹಲಿಗೆ ಕರೆಸಿಕೊಂಡ ಸೋನಿಯಾ ಮೇಡಂ ಅವರೊಂದಿಗೆ ಮಾತುಕತೆ ನಡೆಸಿದರು.

ಇನ್ನೇನು ಸಿದ್ದು ಹೆಸರು ಪ್ರಕಟವಾಗುತ್ತದೆ ಎನ್ನುವಾಗ ತರ್ಲೆ ಮಾಡುವುದನ್ನೇ ಉದ್ಯೋಗವಾಗಿಸಿಕೊಂಡಿರುವ ಕೆಲ ಕಾಂಗ್ರೆಸ್ ನಾಯಕರು ಮತ್ತೆ ಹೈಕಮಾಂಡಿನ ಕಿವಿ ಹಿಂಡುವ ಕೆಲಸ ಮಾಡಲು ಹೊರಟಿದ್ದಾರೆ.

ಇದು ಗೌಡರ ತಂತ್ರ

ಸೋತ ಮೇಲೆ ಇದುವರೆಗೂ ಸುಮ್ಮನಿದ್ದ ಧರ್ಮಸಿಂಗ್ ಈಗ ಇದ್ದಕ್ಕಿದ್ದ ಹಾಗೆ ಎದ್ದು ಅಧ್ಯಕ್ಷ ಆಯ್ಕೆಯ ರಾಜಕೀಯ ಅಖಾಡಕ್ಕಿಳಿದಿದ್ದಾರೆ. ಅವರ ಹಿಂದೆ ಅವರ ಆಪ್ತ ರಾಜಕಾರಣಿ ಮಾಜಿ ಪ್ರಧಾನಿ ದೇವೇಗೌಡ ಇದ್ದಾರೆ ಎಂಬ ಗುಸುಗುಸು ಈಗ ಪಕ್ಷದಲ್ಲಿ ಹರಡಿದೆ.

ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗುತ್ತಾರೆ ಎಂಬ ಸುದ್ದಿ ಹರಡುತ್ತಿದ್ದಂತೆಯೇ ಗೌಡರು 'ಏಕಾಂಗಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸುತ್ತೇವೆ' ಎಂದು ಘೋಷಿಸುವ ಮೂಲಕ ಹೈಕಮಾಂಡ್ ಮೇಲೆ ಪರೋಕ್ಷವಾಗಿ ಒತ್ತಡ ಹೇರಿದ್ದರು. ತಮಗೆ ಡಿಕೆಶಿಯೊಂದಿಗೆ ಹೊಂದಾಣಿಕೆ ಸಾಧ್ಯವಿಲ್ಲ ಎಂಬುದೇ ಈ ಹೇಳಿಕೆಯ ಅರ್ಥವಾಗಿತ್ತು, ಮುಂದೆ ಶಿವಕುಮಾರ್ ಅವರ ಹೆಸರನ್ನು ಕಾಂಗ್ರೆಸ್ ಹೈಕಮಾಂಡ್ ಕೈಬಿಟ್ಟದ್ದು ಗೊತ್ತಾಗುತ್ತಿದ್ದಂತೆಯೇ ಗೌಡರೂ ಸುಮ್ಮನಾಗಿದ್ದರು. ಆದರೀಗ ಸಿದ್ಧರಾಮಯ್ಯ ಅಧ್ಯಕ್ಷರಾಗುವುದು ಖಚಿತ ಎಂದು ಗೊತ್ತಾಗುತ್ತಿದ್ದಂತೆಯೇ ಗೌಡರು ಧರ್ಮಸಿಂಗ್‌ರನ್ನು ಎತ್ತಿಕಟ್ಟಿ, ಸಿದ್ದು ವಿರುದ್ಧ ಹೋರಾಟಕ್ಕೆ ಬಿಟ್ಟಿದ್ದಾರೆ ಎಂಬ ಸುದ್ದಿ ಕೇಳಿಬಂದಿದೆ. ಗೌಡರ ರಾಜಕೀಯ ಗೊತ್ತಿರುವವರಿಗೆ ಇದರಲ್ಲೇನೂ ಅಚ್ಚರಿಯಿಲ್ಲ.

ದೇವೇಗೌಡರ ವಿರೋಧದ ನಡುವೆಯೂ ಸಿದ್ಧರಾಮಯ್ಯನವರು ಕಾಂಗ್ರೆಸ್‌ನ ರಾಜ್ಯಾಧ್ಯಕ್ಷರಾದಲ್ಲಿ ರಾಜ್ಯದಲ್ಲಿನ ಜೆಡಿಎಸ್–ಕಾಂಗ್ರೆಸ್ ಹೊಂದಾಣಿಕೆಯ ರಾಜಕಾರಣಕ್ಕೆ ತೆರೆ ಬಿದ್ದಂತೆ. ಈ ಬಾಗಿಲನ್ನು ಸಂಪೂರ್ಣವಾಗಿ ಮುಚ್ಚಲು ದೇವೇಗೌಡರಿಗೂ ಇಷ್ಟವಿಲ್ಲ, ಕಾಂಗ್ರೆಸ್‌ಗೂ ಧೈರ್ಯವಿಲ್ಲ.

ಹೀಗಾಗಿ ಗೌಡರೊಂದಿಗೆ ವ್ಯವಹರಿಸಬಲ್ಲ, ಪಕ್ಷವನ್ನು ಸಮರ್ಥವಾಗಿ ಕಟ್ಟಲಾಗದ ದುರ್ಬಲರೊಬ್ಬರು ಕೆಪಿಸಿಸಿ ಅಧ್ಯಕ್ಷರಾದಲ್ಲಿ ಆಶ್ಚರ್ಯವೇನೂ ಇಲ್ಲ.

■ ವರದಿಗಾರ

ಸ್ವಾಮೀಜಿಗಳನ್ನು ಮಾತ್ರವಲ್ಲ, ಗೋಕರ್ಣದಲ್ಲಿಯೇ ಇರುವ ಕೊಂಕಣಿ ಮಠದ ಜೀವೋತ್ತಮ ಪರ್ತಗಾಳಿ ಮಠ) ಶ್ರೀಗಳನ್ನೂ ಗೋಕರ್ಣ ಮಂಡಲಾಧೀಶ್ವರ ಎಂದು ಕರೆಯಲಾಗುತ್ತದೆ. ಹಾಗಾದರೆ ಆ ಸ್ವಾಮೀಜಿ ಕೂಡ ಮಹಾಬಲೇಶ್ವರ ದೇವಸ್ಥಾನದ ಮೇಲೆ ತಮ್ಮ ಹಕ್ಕು ಸಾಧಿಸಬಹುದೇ? ಮಾತ್ರವಲ್ಲ ಅವರು ಕೂಡ ರಾಘವೇಶ್ವರನ ರಾಮಚಂದ್ರಾಪುರ ಮಠವನ್ನೇ ತಮ್ಮ ವಶಕ್ಕೆ ಕೊಡಿ ಎಂದು ಕೇಳಬಹುದೇ? ಇಂತಹ ಪ್ರಶ್ನೆಗಳಿಗೆ ರಾಘವೇಶ್ವರ ಉತ್ತರ ನೀಡುತ್ತಾನೆಯೇ?!

ಜನರೆದುರಿಗೆ ಮಾತ್ರ ಖಾವಿ ತೊಟ್ಟು ಸ್ವಾಮೀಜಿಯಂತೆ ವರ್ತಿಸುವ ರಾಘವೇಶ್ವರ ಅಂತರಾಳದಲ್ಲಿ ಓರ್ವ ಪಕ್ಕಾ ರಾಜಕೀಯ ಪುಢಾರಿ. ಇವತ್ತು ಇಂತಹ ಮಠಕ್ಕೆ ಎಂತೆಂತಹ ರಾಜಕೀಯ ನಾಯಕರು ಬರುತ್ತಿದ್ದಾರೆ ಎಂಬುದನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಸ್ವತಃ ರಾಘವೇಶ್ವರನೂ ಇತ್ತೀಚೆಗೆ ತನ್ನ ಧಾರ್ಮಿಕ ಆಚರಣೆಗಳನ್ನು ನಿರ್ಲಕ್ಷಿಸಿ ಪುಢಾರಿ ರಾಜಕಾರಣಿಯಂತೆ ತಂತ್ರಗಳನ್ನು ರೂಪಿಸುತ್ತಾ, ಸದಾ ಸೆಲ್‌ಫೋನ್‌ನಲ್ಲಿ ಮಾತನಾಡುತ್ತಾ ಕಾಲ ಕಳೆಯುತ್ತಿರುತ್ತಾನೆ ಎಂದು ನೋಡಿದವರು ಮಾತನಾಡಿಕೊಳ್ಳುತ್ತಿದ್ದಾರೆ.

ಒಡೆದ ಹವ್ಯಕ ಸಮಾಜ

ಜನಸಂಖ್ಯೆಯಲ್ಲಿ ಕಡಿಮೆ ಇದ್ದರೂ ರಾಜ್ಯದ ಪ್ರಭಾವಶಾಲಿ ಸಮುದಾಯಗಳಲ್ಲಿ ಹವ್ಯಕರ ಸಮಾಜವೂ ಒಂದು. ಈ ಸಮಾಜಕ್ಕೆ ಕೇವಲ ರಾಘವೇಶ್ವರ ಸ್ವಾಮೀಜಿ ಮಾತ್ರ ಧರ್ಮಗುರುಗಳಲ್ಲ, ಸ್ವರ್ಣವಲ್ಲಿ ಮಠ ಕೂಡ ಈ ಸಮಾಜಕ್ಕೇ ಸೇರಿದ್ದು.

ರಾಘವೇಶ್ವರ ಸ್ವಾಮೀಜಿ ಪ್ರಚಾರದ ಹುಚ್ಚಿನಿಂದ, ಹಣದ ಆಸೆಯಿಂದ ಏನೇನೋ ಎಂತಹದ್ದೋ ಕಾರ್ಯಕ್ರಮಗಳನ್ನು ಹಾಕಿಕೊಂಡಾಗ, ಹವ್ಯಕ ಸಮಾಜವನ್ನು ಸಂಘಟಿಸುವ ನೆಪದಲ್ಲಿ ಪ್ರತಿ ಊರಿನಲ್ಲಿ ಮುಖ್ಯಾಳರನ್ನು ನೇಮಿಸಿಕೊಂಡಾಗ ಅನೇಕ ಹವ್ಯಕರು ಈತನ ವಿರುದ್ಧ ತಿರುಗಿಬಿದ್ದಿದ್ದರು. ಈಗ ರಾಘವೇಶ್ವರ ಹುಟ್ಟುಹಾಕಿರುವ ಗೋಕರ್ಣ ವಿವಾದಿಂದಾಗಿ ಇಡೀ ಸಮಾಜ ಎರಡು ಹೋಳಾಗಿದೆ.

ಸ್ವರ್ಣವಲ್ಲಿ ಸ್ವಾಮೀಜಿಗಳು ಸರ್ಕಾರದ ಈ ಕ್ರಮವನ್ನು ಬಹಿರಂಗವಾಗಿಯೇ ವಿರೋಧಿಸಿದ್ದಾರೆ. ಅವರನ್ನು ಬೆಂಬಲಿಸುವ ಉತ್ತರ ಕನ್ನಡ ಜಿಲ್ಲೆಯ ಹೆಚ್ಚಿನ ಹವ್ಯಕರು ರಾಘವೇಶ್ವರನ ವಿರುದ್ಧ ತಿರುಗಿ ಬಿದ್ದಿದ್ದಾರೆ. ಯಾವುದೇ ಕಾರಣಕ್ಕೂ ಈತ ತಮ್ಮ ಸಮುದಾಯದ ಧಾರ್ಮಿಕ ಪ್ರತಿನಿಧಿ ಅಲ್ಲ ಎಂದು ಸಾರುತ್ತಿದ್ದಾರೆ. ಇನ್ನು ರಾಘವೇಶ್ವರನನ್ನು ಸಮರ್ಥಿಸುತ್ತಿರುವವರು ಬಿಜೆಪಿ ಸಂಘಟನೆಗಳಲ್ಲಿರುವವರು ಮತ್ತು ಸಾಗರ ಹಾಗೂ ಹೊಸನಗರ ಸುತ್ತಮುತ್ತಲಿನ ಪ್ರದೇಶಗಳಲ್ಲಿರುವ ಕೆಲ ಹವ್ಯಕರು ಮಾತ್ರ.

ಅವರಲ್ಲಿ ಅದೆಷ್ಟು ಜನ ರಾಘವೇಶ್ವರನ ಪರವಾಗಿ ಸೆಪ್ಟೆಂಬರ್ 15 ರಂದು ಗೋಕರ್ಣದಲ್ಲಿ ಹಾಜರಾಗುತ್ತಾರೆ ಎಂಬುದನ್ನು ನೋಡಬೇಕಿದೆ. ಆದರೆ ಒಂದಂತೂ ನಿಜ, ರಾಘವೇಶ್ವರನಿಂದಾಗಿ ಆತ ಮತ್ತಾತನ ಹಿಂಬಾಲಕರಾದ ಬೆಗ್ಗಿಗಳು ಉದ್ಧಾರವಾಗುತ್ತಾರೆಯೇ ಹೊರತು, ಹವ್ಯಕ ಬ್ರಾಹ್ಮಣರಲ್ಲ, ಹಿಂದೂ ಧರ್ಮದವರಂತೂ ಅಲ್ಲವೇ ಅಲ್ಲ, ಇನ್ನು ಗೋವುಗಳಂತೂ ಲೆಕ್ಕಕ್ಕೂ ಇಲ್ಲ!

■ ವರದಿಗಾರ

ಸಿಡಿಯೂರು ಎದ್ದಲಿಂಗೇಶ್ವರನಿಗೆ ನೂರು ದಿನವಂತೆ!

ಥೂತ್ತೇರಿ

ಯಾಹೂ

ಎಡೆಯೂರು ಸಿದ್ಧಲಿಂಗೇಶ್ವರ ಸಿನಿಮಾವನ್ನು ತ್ರಿಭುವನ್ ಥಿಯೇಟರಿನಲ್ಲಿ ನೂರು ದಿನ ಓಡಿಸಿದಂತಿರುವ ಎಡೂರಪ್ಪನ ನೂರು ದಿನ ಕುರಿತು ನೂರಾರು ಪ್ರಶ್ನೆ ಕೇಳಬೇಕೆನಿಸಿತಲ್ಲಾ. ಸಿಡಿಯೂರು ಎದ್ದಲಿಂಗನಂತೆ ಅಮೆರಿಕಕ್ಕೂ, ಶಿಕಾರಿಪುರಕ್ಕೂ ಓಡಾಡುತ್ತಿರುವ ಎಡೂರಪ್ಪನನ್ನು ಹಿಡಿಯುವುದೇ ಕಷ್ಟವಾಗಿ ಕಡೆಗೆ ಫೋನ್ ಮಾಡಿದರೆ ಸಿಕ್ಕೇಬಿಟ್ಟರು.

ರಿಂಗ್ ಟೋನ್: "ನೀನಿದ್ದರೇನು ಹತ್ತಿರ, ಎಷ್ಟೊಂದು ನಡುವೆ ಅಂತರ, ಈ ಅಗಲಿಕೆ ಇನ್ನೇತಕೆ, ನೀ ನನ್ನ ಅರಿತ ನಂತರ..."

"ಹಲೋ ಸಾರ್, ನಮಸ್ಕಾರ, ನಾನು ಯಾಹೂ ಸಾರ್."

"ನಮಸ್ಕಾರ ಯಾಹೂ ಅವರೆ, ಏನ್ಹೇಳಿ?"

"ನೂರು ದಿನ ತುಂಬಿಸಿದ್ದಕ್ಕೆ ಅಭಿನಂದನೆ ಸಾರ್."


"ಥ್ಯಾಂಕ್ಯೂ, ತಮ್ಮೆಲ್ಲರ ಸಹಕಾರದಿಂದ ನೂರು ದಿನ ಹೋದದ್ದೇ ಗೊತ್ತಾಗಲಿಲ್ಲ."

"ಅಕ್ಕ ಸಮಾವೇಶಕ್ಕೋಗಿದ್ರಲ್ಲಾ, ಚೆನ್ನಾಗಿತ್ತ ಸಾರ್?"

"ಅಕ್ಕನ್ನ ವರ್ಣನೆ ಮಾಡೋಕ್ಕೆ ನನಗೆ ಪದಗಳೇ ಸಿಗ್ತಾಯಿಲ್ಲ ಯಾಹೂ."

"ಅಷ್ಟೊಂದು ಚೆನ್ನಾಗಿತ್ತ ಸಾರ್?"

"ಹೌದು. ಒಬ್ಬ ಹೆಣ್ಣುಮಗಳು ತಲೆ ಮೇಲೆ ಬಿಂದಿಗೆ ಇಟ್ಟುಕೊಂಡು, ಅದರ ಮೇಲೆ ಚೊಂಬಿಟ್ಟುಗೊಂಡು, ಡ್ಯಾನ್ಸ್ ಮಾಡಿಕೊಂಡು ಬಂದು ನನ್ನ ತಲೆ ಮೇಲೆ ಮೈಸೂರು ಜರಿ ಪೇಟ ಇಟ್ಟು ಅಂದ್ರೆ ನಮ್ಮವರು ಎಷ್ಟು ಪ್ರತಿಭಾವಂತ್ರು ನೋಡಿ."



"ಸದ್ಯ ತಲೆ ಮೇಲೆ ಚೊಂಬಿಡಲಿಲ್ಲ ವಲ್ಲ, ಹೇಳಿ ಸಾರ್."

"ನನಗೆ ಅಮೆರಿಕಾದಲ್ಲಿದ್ದೀನಿ ಅಂತ ಅನ್ನಿಸಲೇಯಿಲ್ಲ ಕಂಡ್ರಿ. ಎಲ್ಲಿ ನೋಡಿದ್ರೂ ನಮ್ಮವರೆ ಕಾಣ್ತಿದ್ರು. ಸಿ. ಅಶ್ವತ್ಥ್ ನೋಡಿದ ಕೂಡ್ಲೆ ನಾನು ಬಸವನಗುಡಿಲಿದ್ದೀನಿ ಅನ್ನುಸ್ತು."

"ನನಿಗಂತೂ ಅವನನ್ನ ನೋಡಿದ ಕೂಡ್ಲೆ ಹೊಲ್ದತ್ರ ಇದ್ದಿನಿ ಅನ್ನುತ್ತೆ."

"ಯಾಕ್ರಿ ಅಂಗಂತಿರಿ?"

"ಹೌದು ಸಾರ್. ಅಶ್ವತ್ಥ್ ಬಾಯಿ ಬಿಟ್ರೆ ನಮ್ಮ ಕಡೆ ಹೊಲ ಮೆಯ್ತಾಯಿರೋ ದನಗಳನ್ನ ಕೂಗಿ ಓಡಿಸಿದಂತ ದನಿ ಕೇಳುತ್ತೆ ಸಾರ್. ಅಶ್ವತ್ಥ್ ಅಮೃತ ಮಹಲ್ ದನ ಕಾಯಕ್ಕೆ ಯೋಗ್ಯ ಸಾರ್."

"ಅಷ್ಟು ಚೆನ್ನಾಗಿ ಆಡೋರು ಇವತ್ಯಾರಿದ್ದಾರೆ ನಮ್ಮ ಕರ್ನಾಟಕದಲ್ಲಿ?"

"ನಿಜ ಸಾರ್. ತಮ್ಮ ಆಸ್ಥಾನಕ್ಕೆ ಹೇಳಿಮಾಡಿಸಿದ ಕಲಾವಿದ. ಅವನ ಇತ್ತೀಚಿನ ರಾಗ, ದನಿ ಕೇಳಿ ಕರ್ನಾಟಕದ ಗಾರ್ಧಬಗಳೆಲ್ಲಾ ಮೌನವಾಗಿವೆ! ಸಾರಿ ಸಾರ್, ನಾನು ವಿಷಯನೆ ಬಿಟ್ಟು ಗಾರ್ದಭನ ವಿಷಯಕ್ಕೆ ಹೋದೆ. ತಮ್ಮ ನೂರು ದಿನದ ಸಾಧನೆ ಹೇಳಿ ಸಾರ್?"

"ಅದನ್ನ ನೀವೇ ಹೇಳಬೇಕು. ನಾನು ಒಂದು ವಾರ ಇರಲಿಲ್ಲ."

"ಸರಿ ಸಾರ್, ಅದಕ್ಕೆ ಮೂರು ದಿನ ಸೇರಿಸಿ ಹತ್ತು ದಿನ ತೆಗಿಯನ. ಇನ್ನ ತೊಂಬತ್ತು ದಿನದ ಸಾಧನೆ ಹೇಳಿ ಸಾರ್?"

"ಬಜೆಟ್ ಮಂಡನೆಯಾಗಿದೆ, ಜಾರಿ ಕೂಡ ಆಗ್ತಾಯಿದೆ."

"ರೈತರಿಗೆ ಇನ್ನು ಉಚಿತ ವಿದ್ಯುತ್ ಸಿಕ್ಕಿಲ್ಲ ಸಾರ್?"

"ಉಚಿತ ವಿದ್ಯುತ್ ಕೊಟ್ಟೇ ಕೊಡ್ತಿವಿ. ಆದ್ರೆ ರೈತರು ಹಳೆ ಬಾಕಿ ಕಟ್ಟಬೇಕು."

"ಹಳೆ ಬಾಕಿಯ ಉಚಿತ ವಿದ್ಯುತ್‌ಗೆ ಸೇರಸಕ್ಕೆ ಬರಲ್ವ ಸಾರ್?"

"ಆಗಲ್ಲ, ಉಚಿತನೆ ಬೇರೆ, ಶುಲ್ಕನೆ ಬೇರೆ."

"ಆಪರೇಷನ್ ಕಮಲ ಎಲ್ಲಿಗೆ ಬತ್ತು ಸಾರ್?"

"ಅದು ತಾತ್ಕಾಲಿಕವಾಗಿ ನಿಂತಿದೆ. ಆ ಬಗ್ಗೆ ಯಾರಿಗೂ ಸಣ್ಣದಾಗಿ ಮಾತಾಡೋ ಹಕ್ಕಿಲ್ಲ. ಜನತೆ ನನಗೆ ಸರಿಯಾದ ಮೆಜಾರಿಟಿ ಕೊಟ್ಟಿದ್ರೆ ನಾನ್ಯಾಕೆ ಇಂತ ಕ್ಲಸ ಮಾಡಕ್ಕೆ ಕೈಹಾಕ್ತಿದ್ದೆ? ಯಾರೆ ಆಗ್ಲಿ ಮಾತಾಡೊ ಮುನ್ನ ಯೋಚನೆ ಮಾಡಬೇಕು ಕಂಡ್ರಿ."

"ಅಲ್ಲ ಸಾರ್, ಕೆಟ್ಟ ಕ್ಲಸ ಮಾಡ್ತ ಒಳ್ಳೆ ಹೆಸರು ಬರಬೇಕು ಅಂದ್ರೆ ಹ್ಯಾಂಗೆ? ಬೆಳ್ಳುಳ್ಳಿ ಬುರುಡಿಗೆ ಹೊಡದರಲ್ಲ, ಇದರಿಂದ ಒಳ್ಳೆ ಹೆಸರು ಬರುತ್ತ ನಿಮಗೆ?"

"ರಿ, ನಾನೆಲ್ಲಿ ಹೊಡೆಯಕ್ಕೋಗಿದ್ದೆರಿ?"

"ಮತ್ತೆ ಹಣೆಗೆ ಬ್ಯಾಂಡೇಜ್ ಹಾಯ್ಕೊಂಡಿದಾರಲ್ಲ ಸಾರ್?"

"ಅದೇನೊ ನನಿಗೊತ್ತಿಲ್ಲ, ಪಕ್ಷಕ್ಕಾಗಿ ತ್ಯಾಗ ಮಾಡಿದ್ರು. ಆ ತ್ಯಾಗಕ್ಕೆ ಪ್ರತಿಫಲವಾಗಿ ಅವರಿಗೆ ಏನ್ನಾದ್ರು ಕೊಡ್ತಿವಿ."

"ನೂರು ದಿನದಲ್ಲಿ ಮಾಡಿರೊ ಒಳ್ಳೆ ಸಾಧನೆಯಿದ್ರೆ ಹೇಳಿ ಸಾರ್?"

"ಕಾರ್ಯಭಾರದ ಒತ್ತಡದಿಂದ ಎಲ್ಲಾ ಸಾಧನೆ ಮರತೋಗುತ್ತೆ ಕಂಡ್ರಿ. ನನ್ನ ಸರ್ಕಾರದಲ್ಲಿ ನಿಂತಿದ್ದ ಕೆಲಸ ಪ್ರಾರಂಭ ಆಗಿವೆ. ಒಳ ಚರಂಡಿ ಕೆಲ್ಸ ನೆಡೀತಾಯಿದೆ, ಹಳೆ ಚರಂಡಿ ರಿಪೇರಿ ಆಗ್ತಾಯಿದೆ, ಬಸ್ ನಿಲ್ದಾಣದ ಕೆಲಸ ಮುಂದುವರಿತಾಯಿವೆ, ಇನ್ನು ತುಂಬಾ ಸಾಧನೆಗಳಿವೆ."

"ಅಧಿಕಾರಿಗಳ ವರ್ಗಾವಣೆಗೂ ಒಂದು ದಾಖಲೆ ಆಗ್ತಾಯಿದೆಯಲ್ಲಾ ಸಾರ್."

"ಅದೂ ರಾಜ್ಯಪಾಲ್ರ ಆಡಳಿತ ಇದ್ದಾಗ ಕಾಂಗ್ರೆಸ್‌ನವ್ರು ಅಧಿಕಾರಿಗಳ ವರ್ಗ ಮಾಡ್ಸಿದ್ರು. ಈಗ ನಮ್ಮವರು ಬಂದು ತಮಗೆ ಬೇಕಾದ ಅಧಿಕಾರಿಗಳನ್ನು ವರ್ಗ ಮಾಡಿಸಿಕೊಳ್ತಾಯಿದಾರೆ ಅಷ್ಟೆ."

"ಅದ್ರು ಭಾರಿ ಲಂಚ ಕೊಡಬೇಕಾಗಿದೆ ಸಾರ್?"

"ಮತ್ತೆ ವರ್ಗಾವಣೆ ಅಂದ್ರೆ ಸುಮ್ಮನೆನಾ? ಕಾಂಗ್ರೆಸವರಿಗೆ ಕೊಟ್ಟಿಲ್ಲವಾ ಇವುರು?"

"ಅದು ಸರಿ ಸಾರ್. ಒಂದು ಲಕ್ಷ ಕೇಳೊ ಜಾಗಕ್ಕೆ ನಾಲ್ಕು ಲಕ್ಷ ಕೇಳ್ತರಲ್ಲಾ ಸಾರ್?"

"ಯಾರ್ರಿ ಅಷ್ಟೊಂದು ಕೇಳ್ತಾಯಿರೋರು?"

"ನಿಮ್ಮ ಮಕ್ಳೆ ಕೇಳ್ತಾ ಅವುರಲ್ಲ ಸಾರ್?"

"ನಮ್ಮ ಮಕ್ಕಳು ಅಷ್ಟೊಂದು ಕೇಳಲ್ಲ ಕಂಡ್ರಿ. ಅವುರ ಹೆಸರಲ್ಲಿ ಬೇರೆ ಯಾರೋ ಕೇಳ್ತಾಯಿರಬಹುದು."

"ಇಲ್ಲ ಸಾರ್. ನಾವು ಪತ್ತೆಹಚ್ಚಿದ್ದಿವಿ. ಹೆಚ್ಚಿಗೆ ಮಾತ್ನೆ ಆಡಲ್ಲ, ಇಷ್ಟಾದ್ರೆ ನೋಡಿ ಅಂತರೆ. ನಿಮ್ಮ ಮಕ್ಕಳಿಗೆ ಹೋಲ್ಸಿದ್ರೆ ದೇವೇಗೌಡನ ಮಕ್ಳೆ ಪರವಾಗಿಲ್ಲ ಸಾರ್. ರೇವಣ್ಣನ ಹೆಂಡ್ರಿ, ಕುಮಾರಸ್ವಾಮಿ ಹೆಂಡ್ರಿ ಗೇಳಿದ್ರೆ ನಮ್ಮ ಕೆಲಸ ಆಗವು. ಇಷ್ಟಾದ್ರು ನಿಮ್ಮ ಸರ್ಕಾರಕ್ಕೆ ಒಳ್ಳೆ ಹೆಸರು ತರ್ತಾಯಿರೋರು ಅಂದ್ರೆ ಶೋಭಾ ಕರಂದ್ಲಾಜೆ ಸಾರ್."

"ಹೌದು ಕಂಡ್ರಿ. ಪಾಪ ಆಕೆನ ಕಂಡ್ರೆ ನಮ್ಮ ಪಾರ್ಟಿಯವರಿಗೇ ಹೊಟ್ಟೆಕಿಚ್ಚು, ಅಪಪ್ರಚಾರ ಮಾಡ್ತರೆ. ತೊಂದ್ರೆ ಕೊಡ್ತರೆ. ನೀನು ಸುಮ್ಮನೆ ಕೆಲಸ ಮಾಡ್ತ ಹೋಗು, ತಲೆ ಕೆಡಿಸಿಕೊಬೇಡ ಅಂತ ಅವಳಿಗೆ ಹೇಳಿದ್ದೀನಿ."

"ಒಳ್ಳೆ ಮಾತೇಳಿದ್ದಿರಿ ಸಾರ್. ಅದ್ಕೆ ಏನೊ ಈಚೆಗೆ ಶೋಬಕ್ಕ ಯಾವ ಮಾತಿಗೂ ತಲೆ ಕೆಡಿಸಿಕೊಳ್ತಯಿಲ್ಲ."

"ತಲೆ ಕೆಡಿಸಿಕೊಂಡ್ರೆ ಕೆಲ್ಸ ಮಾಡಕ್ಕಾಗುತ್ತೇನ್ರಿ?"

"ಇಲ್ಲ ಸಾರ್. ಮನಸ್ಸು ಕೆಡಿಸಿಕೊಂಡ್ರೆ ಮಾತ್ರ ಅನ್ನಕಂಡ ಕ್ಲಸ ಮಾಡಬವುದು. ಇತ್ತೀಚೆಗೆ ನೀವು ಕೊಲ್ಲೂರಲ್ಲಿ ಯಾಗ ಮಾಡಿದ್ರಿ. ಆಮೇಲೆ ನೀವೂ ಶೋಬಕ್ಕ ರೈಲಲ್ಲಿ ಬಂದ್ರಿ. ನೀವು ಜನಗಳ ಮಾತಿಗೇನಾದ್ರು ಕಿವಿಕೊಟ್ಟಿದ್ರೆ ಬೇರೆಬೇರೆ ಕಾರಲ್ಲಿ ಬಂದು ಬೆಂಗಳೂರು ತಲುಪಬೇಕಾಗಿತ್ತು, ಆದ್ರೆ ರೈಲಲಿ ಬಂದ್ರಿ. ಒಳ್ಳೆ ಪ್ರಯಾಣ ಅಲ್ಲವಾ ಸಾರ್?"

"ಆ ಭಾಗದ ರಸ್ತೆ ನೋಡಿದ್ರೆ ಯಾರಾದ್ರು ಕಾರಲ್ಲಿ ಬರಕ್ಕಾಗುತ್ತೇನ್ರಿ? ಅದ್ಕೆ ರೈಲಲ್ಲಿ ಬಂದೊ, ತಪ್ಪೇನು?"

"ರೈಲಿರದೆ ಹೋಗಕ್ಕೆ ಬರಕ್ಕಲವಾ ಸಾರ್. ಅದರಲ್ಲೂ ಅನುಕೂಲ ಎಷ್ಟು ಚೆನ್ನಾಗಿದೆ. ಆ ಕಾಲದ ಮಹಾರಾಜರೆಲ್ಲಾ ರೈಲಲ್ಲೇ ಅಲ್ಲವಾ ಪ್ರಯಾಣ ಮಾಡ್ತಯಿದ್ದಿದ್ದು. ಅಷ್ಟು ದೂರ ಬೇಡಿ ನಮ್ಮ ಜಯಚಾಮರಾಜೇಂದ್ರ ಒಡೆಯರ್ ರೈಲಲ್ಲೇ ಪ್ರಯಾಣ ಮಾಡ್ತಿಯಿದ್ರು. ಅವುರ ಜೊತೆ ಮೇಲುಕೋಟೆ ಕಡೆ ಸುಂದರಿ ಇರ್ತಾಯಿದ್ದಂತೆ. ಮಹರಾಜರು ಅಂದಮೇಲೆ ಅವೆಲ್ಲಾ ಸವಲತ್ತು ಇರತವಲ್ಲವಾ ಸಾರ್?"

"ಯಾಹು ಅವುರೆ ಇನ್ನೊಮ್ಮೆ ಸಿಕ್ಕಿ ಮಾತಾಡೋಣ."

"ಇನ್ನೊಂದು ವಿಷಯ ಸಾರ್?"

"ಸಾರಿ."

"ಥೂತ್ತೇರಿ!!!"

■

ಮತ್ತೆ ಲವ್ವು!

ನರ್ಸ್ ರೇಣುಕನೂ ಷೀವ್‌ಲೆಸ್ ಸುಂದರಿ ಜಯಲಕ್ಷ್ಮಿಯೂ ಮತ್ತೆ ಜೊತೆಗೂಡಿದ್ದಾರೆ!

ಇಲ್ಲಿಗೆ ಒಂದು ವರ್ಷದ ಹಿಂದಿನ ತನಕವೂ ಒಬ್ಬರನ್ನೊಬ್ಬರು ಬೈಯುತ್ತಾ ಸಿಕ್ಕರೆ ಹೊಟ್ಟೆಬಗೆದು ರಕ್ತವನ್ನೇ ಕುಡಿಯುವವರಂತೆ ಆರ್ಭಟಿಸುತ್ತಾ ಇದ್ದ ಇವರಿಬ್ಬರೂ ಅದ್ಯಾವ ಮಾಯದಲ್ಲೋ ಈಗ ರಾಜಿ ಮಾಡಿಕೊಂಡುಬಿಟ್ಟಿದ್ದಾರೆ.

ನರ್ಸ್ ರೇಣುಕನು ಮೂರು ಕೋಟಿ ದಂಡ ತೆತ್ತು ಈ ಡೀಲು ಕುದುರಿಸಿಕೊಂಡಿದ್ದಾನೆಂಬ ರೂಮರ್ ಈಗ ಕೇಳಿಬರುತ್ತಿದೆ. ಈ ರಾಜಿ ಕಬೂಲಿ ಯಡ್ಡಿಗೋಸ್ಕರ ನಡೆಯಿತೆಂಬುದೇ ಮುಖ್ಯವಾದ ವಿಚಾರ.

ಅಂದಹಾಗೆ ಜಯಲಕ್ಷ್ಮಿ ಈಗ ಬೆಂಗಳೂರಲ್ಲಿ ಇಲ್ಲ, ಕರ್ನಾಟಕದಲ್ಲೂ ಕಾಣುತ್ತಿಲ್ಲ.

ಬೆಂಗಳೂರಿನ ಚಂದ್ರಾಲೇಔಟ್ ಪೊಲೀಸ್ ಸ್ಟೇಷನ್ನಿನಲ್ಲೊಂದು ರೇಣುಕನ ವಿರುದ್ಧ ಕಂಪ್ಲೇಂಟು, ರಾಜ್ಯ ಮಹಿಳಾ ಆಯೋಗದಲ್ಲಿ ಇನ್ನೊಂದು ದೂರುಗಳು ವಿಚಾರಣೆ ಬಾಕಿ ಇರುವಾಗಲೇ ಜಯಲಕ್ಷ್ಮಿ ಎಲ್ಲಿ ನಾಪತ್ತೆಯಾದಳೆಂದು ಹುಡುಕುತ್ತಾ ಹೊರಟರೆ ಅವಳ ಜಾಡು ಸಿಕ್ಕಿದ್ದು ದೂರದ ಇಂಗ್ಲೆಂಡಿನಲ್ಲಿ.



ಅಲ್ಲಿ ನರ್ಸ್‌ಗಳ ಉದ್ಯೋಗದ placement ಸಂಸ್ಥೆಯೊಂದನ್ನು ಶುರು ಮಾಡಿದ್ದಾಳಂತೆ ಜಯಲಕ್ಷ್ಮಿ. ಜೊತೆಗೆ ಮಲೇಷಿಯಾದಲ್ಲೊಂದು ಸಾಫ್ಟ್‌ವೇರ್ ಕಂಪನಿ ಚಾಲೂ ಮಾಡಿ ಜುಂ ಅಂತ ಓಡಾಡಿಕೊಂಡಿದ್ದಾಳೆಂತಲೂ ಕೇಳಿಬಂದಿದೆ. ಈ ನಡುವೆ ಅಂದರೆ ರೇಣುಕಾ-ಜಯಲಕ್ಷ್ಮಿ ಜಗಳ ಶುರುವಾದ 2007 ರ ಏಪ್ರಿಲ್ ತಿಂಗಳಿಂದ ಈಗ್ಗೆ ಮೂರ್ನಾಲ್ಕು ತಿಂಗಳ ಹಿಂದಿನ ರಾಜಿವರೆಗೂ ಈ ಕೇಸಿಗೆ ಸಂಬಂಧಿಸಿದಂತೆ ಒಂದೆರಡು ಇಂಟರೆಸ್ಟಿಂಗಾದ ಘಟನಾವಳಿಗಳು ನಡೆದಿವೆ.

ಬೆಂಗಳೂರಿನ ವೈದ್ಯ ವೆಂಕಟ್ ಹಾಗೂ ರಾಜ್ಯ ಬಿಜೆಪಿ ಸ್ಲಂ ಮೋರ್ಚಾ ಮುಖಂಡ ಕೋಲಾರದ ಸುರೇಂದ್ರ ಗೌಡನ ಹೆಸರು ಜಯಲಕ್ಷ್ಮಿ ಜೊತೆ ಕೆಲಕಾಲ ಕೇಳಿಬಂದಿತ್ತು. ಈ ವೆಂಕಟ್ ಈಗ ಇಂಗ್ಲೆಂಡಿನಲ್ಲಿದ್ದಾನೆ. ಜಯಲಕ್ಷ್ಮಿಯ ನರ್ಸಿಂಗ್ ಬ್ಯುಸಿನೆಸ್‌ನ ಹೊಸ ಪಾರ್ಟನರ್ ಇವನು. ಇನ್ನುಳಿದಂತೆ ಯುವ ಹಿಂದೂ ನಾಯಕ ಸುರೇಂದ್ರ ಗೌಡನು ಒಂದಷ್ಟು ಲಕ್ಷ ಲಾಸು ಮಾಡಿಕೊಂಡು ಈಗ ದ್ರಾಬೆ ಮುಖ ಹೊತ್ತು ತಿರುಗುತ್ತಿದ್ದಾನೆ.

ಅತೀ ಮುಖ್ಯವಾಗಿ ರಾಜ್ಯ ಮಹಿಳಾ ಆಯೋಗಕ್ಕೆ ಜಯಲಕ್ಷ್ಮಿ ಕೊಟ್ಟಿದ್ದ ದೂರಿನ ಫೈಲ್ ನಾಪತ್ತೆಯಾಗಿದೆ. ಚಂದ್ರಲೇಔಟ್ ಪೊಲೀಸರು ಜಯಲಕ್ಷ್ಮಿಗೆ ಕೋರ್ಟ್ ವಾರೆಂಟ್ ನೀಡಲು ತಲಾಶ್ ನಡೆಸಿದ್ದಾರೆ. ಆದರೆ ಜಯಲಕ್ಷ್ಮಿ ಈಗ ನಾಪತ್ತೆ!

ಯಡ್ಡಿ ರಕ್ಷಣೆಗೆ 3 ಕೋಟಿ ಡೀಲ್

ಯಡ್ಡಿಗೇನು ಲಾಭ ಅಂತೀರಾ

ನರ್ಸ್ ರೇಣುಕನು ಬಿಜೆಪಿಯ ಕೆಲವು ಕಚ್ಚೇಹರುಕ ಗೆಣೇಕಾರರೊಂದಿಗೆ 'ಜಯಲಕ್ಷ್ಮಿ ಕೇಸು ಸೆಟ್ಲಾಯಿತು ಗುರು. ಎರಡೂವರೆ ಕೋಟಿಗೆ' ಅಂತ ಹೇಳಿಕೊಂಡು ತಿರುಗುತ್ತಿದ್ದಾನೆನ್ನುವ ಸುದ್ದಿ ಕೆಲಕಾಲದಿಂದ ಕೇಳಿಬರುತ್ತಿತ್ತು. ಈ ರಾಜಿ ಸ್ವತಃ ರೇಣುಕನಿಗಿಂತ, ಬೇರಿನ್ನಾರಿಗಿಂತ ಸಾಕ್ಷಾತ್ ಯಡಿಯೂರಪ್ಪನವರಿಗೆ ಆಗಲೇಬೇಕಿತ್ತೆನ್ನುವುದೇ ಸ್ವಾರಸ್ಯಕರ ವಿಚಾರ. ಅದರ ಹಿನ್ನೆಲೆ ಹೀಗಿದೆ.

2007 ರ ಏಪ್ರಿಲ್ 12 ನೇ ತಾರೀಖು ಜಯಲಕ್ಷ್ಮಿ ಬೆಂಗಳೂರಿನ ಚಂದ್ರಾಲೇಔಟ್ ಪೊಲೀಸರಿಗೆ ಒಂದು ಕಂಪ್ಲೇಂಟ್ ಕೊಟ್ಟಿದ್ದಳು.

ಅದರಲ್ಲಿ...



ಹೊನ್ನಾಳಿಯ ಬಿಜೆಪಿ ಶಾಸಕ ರೇಣುಕಾಚಾರ್ಯ ಎಂಬುವನು ತನಗೆ ರಿವಾಲ್ವರ್ ತೋರಿಸಿ ಬೆದರಿಸಿ ಮದುವೆಯಾಗುವಂತೆ ಒತ್ತಾಯಿಸುತ್ತಿದ್ದಾನೆಂತಲೂ, ಜೊತೆಗೆ ತನ್ನ ಗ್ರೀನ್ ಸಿಟಿ ನರ್ಸಿಂಗ್ ಕಾಲೇಜಿನ ಡೈರೆಕ್ಟರ್ ಹುದ್ದೆ ಕೊಡಿಸುವಂತೆ ಕೇಳಿದನೆಂದೂ ದೂರು ಪ್ರಕರಣ ದಾಖಲಿಸಿದ್ದಳು. ಬಹಳ ಮುಖ್ಯವಾಗಿ ಆ ಕಂಪ್ಲೇಂಟಿನಲ್ಲಿ "ಉಪ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಶೋಭಾ ಕರಂದ್ಲಾಜೆಯನ್ನು ಎರಡನೇ ಮದುವೆ ಮಾಡಿಕೊಂಡು ಸಮಾಜವನ್ನು ಎದುರಿಸುತ್ತಿದ್ದಾರೆ. ಹಾಗಿರುವಾಗ ನಾನು ನಿನ್ನನ್ನು ಎರಡನೇ ಮದುವೆ ಮಾಡಿಕೊಂಡರೇನು ತಪ್ಪು" ಅಂತ ಕೇಳಿದ್ದನೆಂತಲೂ ಜಯಲಕ್ಷ್ಮಿ ದಾಖಲಿಸಿದ್ದಳು.

ರೇಣುಕನು ಅಷ್ಟರಲ್ಲಿ ಸುಮಾ ಎಂಬಾಕೆಯನ್ನು ಮದುವೆಯಾಗಿದ್ದನೆನ್ನುವುದು ನಿಮಗೆ ನೆನಪಿರಬಹುದು.

ಅದು ಬೇರೆ ವಿಚಾರ ಬಿಡಿ.

ಆದರೆ ಯಾವಾಗ ಜಯಲಕ್ಷ್ಮಿಯ ದೂರು ಕೈ ಸೇರಿತೋ ಸರ್ಕಲ್ ಇನ್ಸ್‌ಪೆಕ್ಟರ್ ಓಂಕಾರಯ್ಯ ಏಪ್ರಿಲ್ 16 ರಂದೇ ಜಯಲಕ್ಷ್ಮಿಗೆ ಒಂದು ಪತ್ರ ಬರೆದು 20 ಪ್ರಶ್ನೆಗಳನ್ನು ಹಾಕಿ ಲಿಖಿತ ಉತ್ತರ ನೀಡುವಂತೆ ಕೇಳಿದ್ದರು.

ಆ ಪ್ರಶ್ನೆಗಳಲ್ಲಿ ಜಯಲಕ್ಷ್ಮಿ-ರೇಣುಕನ ಕೆಲ ವಿಚಾರಗಳಿದ್ದವಾದರೂ ಪ್ರಶ್ನೆ ಸಂಖ್ಯೆ 11 ಹಾಗೂ 14 ಗಮನಾರ್ಹವಾಗಿದ್ದವು.

ಅವು ಯಡಿಯೂರಪ್ಪ ಮತ್ತವರ ಗೆಣೆಗಾರ್ತಿ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೆದಕಿ ಕೇಳುವ ಉಮೇದಿನಲ್ಲಿದ್ದವು. ಆಗ ಜೆಡಿಎಸ್‌ನ ಕುಮಾರಸ್ವಾಮಿ ಮುಖ್ಯಮಂತ್ರಿಯಿದ್ದ ಕಾರಣ ಯಡ್ಡಿಗೆ ಕಿರುಕುಳ ಕೊಡಲು ಪೊಲೀಸರನ್ನು ಬಳಸಿಕೊಂಡಿರುವ ಸಾಧ್ಯತೆಯಿತ್ತು ಬಿಡಿ. ಆದರೆ ಏನಾದರಾಗಲಿ ಜಯಲಕ್ಷ್ಮಿ ಮಾತ್ರ ತನ್ನ ಲಿಖಿತ ಉತ್ತರದಲ್ಲಿ 'ಯಡ್ಡಿ-ಶೋಭಾರ ಎರಡನೇ ಮದುವೆ ಬಗ್ಗೆ ತನಗೆ ರೇಣುಕಾಚಾರ್ಯ ತಿಳಿಸಿದನೆಂದು' ನೇರವಾಗಿ ಹೇಳಿಬಿಟ್ಟಿದ್ದಳು.

ಅವತ್ತು ರೇಣುಕನ ವಿರುದ್ಧ ಪೊಲೀಸರು ರಿಜಿಸ್ಟರ್ ಮಾಡಿಕೊಂಡಿದ್ದ ಕೇಸು ಸಣ್ಣಪುಟ್ಟ ಪ್ರಮಾಣದ್ದಲ್ಲ. ಬೆದರಿಸಿ ಹಣ ವಸೂಲಿ (ಸೆಕ್ಷನ್ 387), ಶಾಂತಿಭಂಗ (504), ಕ್ರಿಮಿನಲ್ ಬೆದರಿಕೆ (506), ಮಹಿಳೆಯರ ಘನತೆಗೆ ಕುಂದು (509)... ಹೀಗೆ ನಾಲ್ಕು ಘನಘೋರ ಐಪಿಸಿ ಸೆಕ್ಷನ್‌ಗಳಡಿ ರೇಣುಕನ ವಿರುದ್ಧ ಕೇಸು ಜಡಿಯಲಾಗಿತ್ತು.

ಬಹಳ ಮುಖ್ಯವಾಗಿ ಯಡ್ಡಿ-ಶೋಭಾರ ಹೆಸರುಗಳೂ ಈ ಕೇಸಿನಲ್ಲಿ ಸೇರಿಕೊಂಡು ಚೆಡ್ಡಿ ಪಟಾಲಂಗೆ ತಲೆನೋವಾಗಿತ್ತು.

ಈ ಕೇಸು ಈಗ ಕೋರ್ಟಿನಲ್ಲಿದೆ. ಆದರೆ ಜಯಲಕ್ಷ್ಮಿ ಕೋರ್ಟಿಗೆ ಹೋಗುತ್ತಿಲ್ಲ. ಆದರಿಂದ ಕೋರ್ಟು ಈಗ ಆಕೆಗೆ ಹಾಜರಾಗುವಂತೆ ವಾರೆಂಟ್ ಹೊರಡಿಸಿದೆ. ಚಂದ್ರಾಲೇಔಟ್ ಪೊಲೀಸರು ವಾರೆಂಟ್ ಜಾರಿ ಮಾಡಲು ಎಲ್ಲೆಲ್ಲಿ ಹುಡುಕಿದರೂ ಜಯಲಕ್ಷ್ಮಿ ಸಿಗುತ್ತಿಲ್ಲ. ಯಡ್ಡಿ ಮಾನ ರಕ್ಷಣೆಗಾಗಿ ರೇಣುಕನ ಜೊತೆ ರಾಜಿ ಮಾಡಿಕೊಂಡಿರುವ ಜಯಲಕ್ಷ್ಮಿಗೇ ಈಗ ಕೇಸು ಬೇಡವಾಗಿದೆ.



ರಾಜಿಗಾಗಿ ಜಯಲಕ್ಷ್ಮಿ ಕೈ ಸೇರಿರುವ ಕೋಟಿಗಟ್ಟಲೆ ಹಣ ಎಲ್ಲಿಂದ ಬಂದಿರಬಹುದೆಂಬುದು ನಿಮ್ಮ ಊಹೆಗೆ ಬಿಟ್ಟ ವಿಚಾರ.

ಮಹಿಳಾ ಆಯೋಗದಲ್ಲಿದ್ದ ಫೈಲು ನಾಪತ್ತೆ

ಈ ರಾಜಿಯ ಮುಂದುವರೆದ ಕತೆಯೇ ರಾಜ್ಯ ಮಹಿಳಾ ಆಯೋಗದಲ್ಲಿದ್ದ ಜಯಲಕ್ಷ್ಮಿ-ರೇಣುಕಾಚಾರಿ ಫೈಲ್ ನಾಪತ್ತೆ ಪ್ರಕರಣ.

ಬಿಜೆಪಿಯ ಪ್ರಮೀಳಾ ನೇಸರ್ಗಿ ಮಹಿಳಾ ಆಯೋಗದ ಅಧ್ಯಕ್ಷರಾಗಿದ್ದಾಗಲೇ ಜಯಲಕ್ಷ್ಮಿ ಒಂದು ದೂರು ನೀಡಿ ರೇಣುಕಾಚಾರಿಯನ್ನು ಕಟಕಟೆಯಲ್ಲಿ ನಿಲ್ಲುವಂತೆ ಮಾಡಿದ್ದಳು. ಆ ದೂರಿನನ್ವಯ ಆಯೋಗವು 2007 ರ ಜೂನ್-ಜುಲೈ ತಿಂಗಳಲ್ಲಿ ಒಂದೆರಡು ಬಾರಿ ವಿಚಾರಣೆ ನಡೆಸಿತ್ತು. ರೇಣುಕನು ತನ್ನ ಪತ್ನಿ ಸುಮಾ ಜೊತೆ ವಿಚಾರಣೆಗೂ ಹಾಜರಾಗಿದ್ದ. ಈ ಕೇಸಿನ ಸಾಕ್ಷಿಗಳಾಗಿ ವಾಸುದೇವರಾವ್, ಬುಲಕಿ, ಸಂತೋಷ್ ವಾಸಂತಿ, ಬಿ.ವಿ. ಸುಧಾ, ಶಿವಕುಮಾರ್ (ಈಗ ಜಯಲಕ್ಷ್ಮಿಯ ಗ್ರೀನ್‌ಸಿಟಿ ನರ್ಸಿಂಗ್ ಕಾಲೇಜಿನ ಪಾರ್ಟ್‌ನರ್) ಹಾಗೂ ರವಿ ಪ್ರಕಾಶ್ (ಈತ ಜಯಲಕ್ಷ್ಮಿಯ ಮೊದಲನೇ ಪತಿ ಎಂಬ ದಾಖಲೆ ಇದೆ) ಹೇಳಿಕೆ ನೀಡಬೇಕಿತ್ತು.

ಆದರೆ ಪ್ರಕರಣದ ತೀರ್ಪು ಬರುವ ಮೊದಲೇ 2007 ರ ಅಕ್ಟೋಬರ್‌ನಲ್ಲಿ ಪ್ರಮೀಳಾ ನೇಸರ್ಗಿ ಆಯೋಗದ ಅಧ್ಯಕ್ಷಗಿರಿಯಿಂದ ಹೊರಹಾಕಲ್ಪಟ್ಟರು.

ಇದೆಲ್ಲಾ ಮುಗಿದ ಆರೆಂಟು ತಿಂಗಳ ನಂತರ ಅಂದರೆ 2008 ರ ಆಗಸ್ಟ್‌ನಲ್ಲಿ ಗೊತ್ತಾಗಿದ್ದೇನೆಂದರೆ......

ಮಹಿಳಾ ಆಯೋಗದ ಕಚೇರಿಯಲ್ಲಿದ್ದ ಜಯಲಕ್ಷ್ಮಿ-ರೇಣುಕಾ ಪ್ರಕರಣದ ಇಡೀ ಫೈಲು ಕಣ್ಮರೆಯಾಗಿದೆ ಎಂದು.

ಇದೊಂದೇ ಅಲ್ಲ ನೇಸರ್ಗಿ ಅಧ್ಯಕ್ಷರಾಗಿದ್ದಾಗ ಬಂದಿದ್ದ 1118 ದೂರುಗಳ ಪೈಕಿ 890 ದೂರುಗಳೇ ನಾಪತ್ತೆಯಾಗಿ ಹೋಗಿವೆ.

ಇಲ್ಲಿ ಸ್ಪಷ್ಟವಾಗುವ ಒಂದು ವಿಚಾರ ಏನೆಂದರೆ ಯಾರೋ ಉದ್ದೇಶಪೂರ್ವಕವಾಗಿ ರೇಣುಕನ ಫೈಲ್ ನಾಪತ್ತೆ ಮಾಡಿದ್ದಾರೆ. ಆದರೆ ಇವರದೊಂದೇ ಫೈಲ್ ಕದ್ದರೆ ಅನುಮಾನ ಬರುತ್ತದೆಂದು ಅಲ್ಲಿದ್ದ ಬೇರೆ ದೂರುಗಳನ್ನು ಕಳವು ಮಾಡಿಸಲಾಗಿದೆ.



ದುಡ್ಡು ತಗೊಂಡ ಮೇಲೆ ಜಗಳ ಯಾಕೆ ಎಂದು ರಾಜಿಯಾದವರ ಕೈವಾಡ ಇದರಲ್ಲಿ ಇರಲಿಕ್ಕೇ ಬೇಕಲ್ಲವೆ?

ಮಹಿಳಾ ಇಲಾಖೆಯ ಅಧಿಕಾರಿಗಳು ಫೈಲ್ ಕಳುವಿನ ಬಗ್ಗೆ ತನಿಖೆ ಮಾಡುತ್ತಿದ್ದಾರಾದರೂ ಸದ್ಯಕ್ಕಂತೂ ನರ್ಸ್ ರೇಣುಕನ ಕೇಸು ಇಲ್ಲಿ ವಿಚಾರಣೆಗೆ ಬರುವ ಸಾಧ್ಯತೆ ಕಾಣುತ್ತಿಲ್ಲ.

ಹೀಗೆ ಚಂದ್ರಲೇಔಟ್ ಸ್ಟೇಷನ್ನಿನಲ್ಲಿ ರೇಣುಕಾಚಾರಿ ಮತ್ತು ಯಡ್ಡಿಗಿದ್ದ ಆಪತ್ತು ನಿವಾರಿಸಿ ಅದೇ ವೇಳೆ ಮಹಿಳಾ ಆಯೋಗದಲ್ಲಿದ್ದ ಫೈಲು ಕಣ್ಮರೆ ಮಾಡಿಸಿ ಬಿಜೆಪಿಗಳು ಆನಂದತುಂದಿಲರಾಗಿದ್ದಾರೆ.

ಯಾರ ಹಿಡಿತಕ್ಕೂ ಸಿಗದಂತೆ ಆರ್ಭಟಿಸುತ್ತಿದ್ದ ಜಯಲಕ್ಷ್ಮಿ ಪೂರಾ ಸೈಲೆಂಟಾಗಿ ಹೋಗಿದ್ದಾಳೆ.

■ ವರದಿಗಾರ

ಡಾ. ವೆಂಕಟ್ ಎಂಬ ಜಾಣನೂ ಸುರೇಂದ್ರ ಗೌಡನೆಂಬ ಅವಿವೇಕಿಯೂ

ಮೂಲತಃ ಬೆಂಗಳೂರಿನವನಾದ ಡಾಕ್ಟರ್ ವೆಂಕಟ್ ಈಗ ಇಂಗ್ಲೆಂಡ್‌ನಲ್ಲಿ ಕೆಲಸ ಮಾಡಿಕೊಂಡಿದ್ದಾನೆ. ಮದುವೆಯಾಗಿದೆ, ಮಕ್ಕಳೊಂದಿಗನೂ ಹೌದು.

ಜಯಲಕ್ಷ್ಮಿ ಶುರು ಮಾಡಿರುವ ನರ್ಸಿಂಗ್ ಪ್ಲೇಸ್‌ಮೆಂಟ್ ಸಂಸ್ಥೆ ವೆಂಕಟ್ ಕೊಟ್ಟಿರುವ ಐಡಿಯಾ. ಈಗ ಯೂರೋಪಿಯನ್ ದೇಶಗಳಲ್ಲಿ ತರಬೇತಾದ ನರ್ಸ್‌ಗಳಿಗೆ ವಿಪರೀತ ಡಿಮ್ಯಾಂಡ್ ಇದೆ. ಆ ಅವಕಾಶ ಬಳಸಿಕೊಂಡು ಇಲ್ಲಿ ನರ್ಸಿಂಗ್ ಕೋರ್ಸ್ ಮಾಡಿಕೊಂಡಿರುವ ಹುಡುಗಿಯರಿಗೆ ಯೂರೋಪ್ ದೇಶಗಳಲ್ಲಿ ಕೆಲಸ ಕೊಡಿಸಲು ಜಯಲಕ್ಷ್ಮಿ ಹೊರಟಿದ್ದಾಳೆ.

ಇದರ ಜೊತೆಯಲ್ಲೇ ಮಲೇಷಿಯಾದಲ್ಲೊಂದು ಸಾಫ್ಟ್‌ವೇರ್ ಕಂಪನಿಯನ್ನು ತೇಲಿಬಿಟ್ಟಿದ್ದಾಳಂತೆ ಜಯಲಕ್ಷ್ಮಿ.

ಆಕೆಗೆ ಈ ದಾರಿ ತೋರಿಸಿದ್ದು ರಾಜ್ಯ ಬಿಜೆಪಿ ಸ್ಲಂ ಮೋರ್ಚಾದ ಲೀಡರ್ ಸುರೇಂದ್ರ ಗೌಡ ಅಂತಲೂ ಸುದ್ದಿ ಇದೆ.

ಮೂಲತಃ ಕೋಲಾರದವನಾದ ಸುರೇಂದ್ರ ಗೌಡ ಜಯಲಕ್ಷ್ಮಿ ಗೆಳೆತನ ಮಾಡಿಕೊಂಡು ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದ್ದ. ಕೋಲಾರದ ತುಮಕಿಯ ದೇವರಾಜ ಅರಸ್ ಮೆಡಿಕಲ್ ಕಾಲೇಜಿನ ಪಕ್ಕದಲ್ಲೇ ಅವನದೊಂದು ಫಾರಂ ಹೌಸ್ ಇದೆ. ಜಯಲಕ್ಷ್ಮಿ ಅಲ್ಲಿಗೆ ಅನೇಕ ಬಾರಿ ಹೋಗಿ ಬಂದಿರುವುದನ್ನು ಕೆಲ ಬಿಜೆಪಿ ಯುವ ಮೋರ್ಚಾದವರೇ ಗಮನಿಸಿ ರೇಣುಕನಿಗೆ ಮಾಹಿತಿ ಕೊಟ್ಟಿದ್ದರು.

ರೇಣುಕನಿಗೆ ಇದನ್ನೆಲ್ಲಾ ನೋಡಿ ಸಿಟ್ಟು ಬಂದಿತ್ತಾದರೂ ಆದಾಗಲೇ ಕೇಸುಗಳಿದ್ದ ಕಾರಣ ಸುಮ್ಮನಾಗಿಬಿಟ್ಟಿದ್ದ. ಆದರೆ ಸುರೇಂದ್ರ ಗೌಡನ ಮೇಲೆ ಬೇರೆ ರೀತಿ ಸೇಡು ತೀರಿಸಿಕೊಂಡ. ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಬೆಂಗಳೂರಿನ ಜಯಮಹಲ್, ಮಲ್ಲೇಶ್ವರ ಹಾಗೂ ಮುಳಬಾಗಿಲಿನಿಂದ ಸುರೇಂದ್ರ ಗೌಡ ಬಿಜೆಪಿ ಟಿಕೆಟ್ ಕೇಳಿದ್ದ. ಆದರೆ ರೇಣುಕ ಯಡ್ಡಿಯ ಕಿವಿಕಚ್ಚಿ 'ಜಯಲಕ್ಷ್ಮಿಗೆ ಇವನದೇ ಸಪೋರ್ಟು' ಎಂದು ಚಾಡಿ ಹೇಳಿ ಟಿಕೆಟ್ ತಪ್ಪಿಸಿಬಿಟ್ಟ.

ಮಜಾ ಏನೆಂದರೆ ಈ ಇಬ್ಬರೂ ಈಗ ಜಯಲಕ್ಷ್ಮಿ ಜೊತೆ ಸೌಹಾರ್ದಯುತವಾಗೇ ಇರುವುದು.

ಯಾರ್‍ಯಾರಿಂದ ಬಂತು ದುಡ್ಡು?

ಈ ಜಯಲಕ್ಷ್ಮಿ ಎಂಥ ವ್ಯವಹಾರಸ್ಥೆ ಮತ್ತು ಜಾಣೆ ಎನ್ನಲು ಆಕೆಯ ಕೈ ಮೇಲೆ ನಡೆದಿರುವ ಹಣಕಾಸು ವ್ಯವಹಾರಗಳೇ ಸಾಕ್ಷಿ. ಈಗ ರೇಣುಕನ ಕೇಸಿನಲ್ಲಿ ಜಯಲಕ್ಷ್ಮಿ ಪೊಲೀಸರಿಗೆ ನೀಡಿರುವ ಲಿಖಿತ ಹೇಳಿಕೆಯಂತೆ ಹಿಂದೂ ವೀರ ಮುಖ್ಯಮಂತ್ರಿ ಯಡ್ಡಿಯೂರಪ್ಪ ಹಾಗೂ ಶೋಭಾ ವಿಚಾರ ಕೋರ್ಟಿನಲ್ಲಿ ಬರದಂತೆ ನೋಡಿಕೊಳ್ಳಲು ಬಿಜೆಪಿಗಳೇ ಕೊಟ್ಟಿರುವ ಹಣ ಮೂರು ಕೋಟಿ ರೂಪಾಯಿಗಳು.

ಉಳಿದಂತೆ ಕುಮಾರಸ್ವಾಮಿ ಸಿಎಂ ಆಗಿದ್ದಾಗ ನೈಸ್ ಕಂಪನಿಯ ಅಶೋಕ್ ಖೇಣಿ ಭಿನ್ನಮತೀಯ ಚಟುವಟಿಕೆ ನಡೆಸಲು ರೇಣುಕನಿಗೆ ಒಂದಷ್ಟು ಕೋಟಿ ಹಣ ಪಂಪ್ ಮಾಡಿದ್ದ. ಅದರಂತೆ ನಗರದ ಖಾಸಗಿ ಹೋಟೆಲ್‌ನಲ್ಲಿ ರೇಣುಕನು ಹದಿನೈದು ಬಿಜೆಪಿ ಶಾಸಕರನ್ನು ಕಲೆ ಹಾಕಿ ಮೀಟಿಂಗ್ ಕೂಡ ನಡೆಸಿದ್ದ. ಖೇಣಿ ಕೊಟ್ಟಿದ್ದ ಆ ಹಣ ಆಗ ಚಂದ್ರಾಲೇಔಟ್‌ನಲ್ಲಿದ್ದ ನರ್ಸ್ ಜಯಲಕ್ಷ್ಮಿ ಮನೆ ಸೇರಿತ್ತು.



ಅದಾದನಂತರ ರಾಜಪ್ಪ ಎಂಬುವರಿಗೆ ಸೇರಿದ್ದ ಪಿನಾಕಲ್ ಸ್ಕೂಲ್ ಆಫ್ ನರ್ಸಿಂಗ್ ಸೈನ್ಸ್ ಕಾಲೇಜನ್ನು ಖರೀದಿಸಲು ಜಯಲಕ್ಷ್ಮಿ ಹೊರಟಾಗ ರೇಣುಕಾಚಾರ್ಯ ಅನಿಲ್ ಲಾಡ್ ಮೂಲಕ 6 ಲಕ್ಷ ಕೊಡಿಸಿದ್ದ. (ಚೆಕ್ ನಂ. OWC 721870). ಸಿಟಿ ಮಾರ್ಕೆಟ್ಟಿನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯ ಅಕೌಂಟ್ ನಂಬರ್ 54018114394 ಗೆ ಜಮೆಯಾದ ಆ ಹಣದ ಬಗ್ಗೆ ನಂತರ ಗಲಾಟೆಗಳಾಗಿ ಸಿಸಿಬಿಯ ಡೀಲ್ ಮಾಸ್ಟರ್ ನಾರಾಯಣಗೌಡನಿಂದ ಬಗೆಹರಿದಿತ್ತು.

ಇವೆಲ್ಲಕ್ಕೂ ಹೋಲಿಸಿದರೆ ಯಡ್ಡಿ ಬಳಗದಿಂದ ಈಗ ಜಯಲಕ್ಷ್ಮಿಗೆ ಪಾವತಿಯಾಗಿರುವ ಮೂರು ಕೋಟಿ ಹಣವೇ ದೊಡ್ಡ ಜಾಕ್‌ಪಾಟ್.

ರಾಜ್ಯ ಮಹಿಳಾ ಆಯೋಗದಲ್ಲಿದ್ದ ಫೈಲ್ ಅನ್ನು ಚೆಡ್ಡಿಗಳು ಅದು ಹೇಗೋ ನಾಪತ್ತೆ ಮಾಡಿಸಿಬಿಟ್ಟಿದ್ದಾರೆ. ಆದರೆ ಚಂದ್ರಲೇಔಟ್ ಪೊಲೀಸ್ ಸ್ಟೇಷನ್ನಿನಲ್ಲಿ ರಿಜಿಸ್ಟರ್ ಆಗಿರುವ ಹಾಲಿ ಕೋರ್ಟಿನಲ್ಲಿರುವ ಕೇಸನ್ನು ಯಾವಾಗ ಹೇಗೆ ಕೊನೆಗಾಣಿಸುವರೋ ಕಾದು ನೋಡಬೇಕಿದೆ.

ಯಡಿಯೂರು ದೇವಸ್ಥಾನ ಲಿಂಗಾಯತರಿಗೆ ಯಡ್ಡಿ ಮೋಸ!



ರಾಜ್ಯದ ಲಿಂಗಾಯತರೆಲ್ಲ ಸಾಲಿದ್ದಾಗಿ ಬೆಂಬಲಿಸಿ ತಮ್ಮ ಸಮುದಾಯದ ಯಡ್ಡಿಯನ್ನು ರಾಜ್ಯದ ಮುಖ್ಯಮಂತ್ರಿ ಪೀಠದಲ್ಲಿ ಕೂರಿಸಿರುವುದು ಈಗ ಇತಿಹಾಸ. ಆದರೆ ಅಧಿಕಾರಕ್ಕೇರಿದ ಕ್ಷಣದಿಂದಲೇ ರಾಜ್ಯದ ಜನತೆಯನ್ನು, ಅದರಲ್ಲೂ ತನ್ನನ್ನು ಈ ಹುದ್ದೆಗೇರಿಸಿದ ತನ್ನ ಸಮುದಾಯವನ್ನೂ ಮರೆತು ಬ್ರಾಹ್ಮಣಶಾಹಿಗಳ ಸೇವಕನಂತೆ ವರ್ತಿಸುತ್ತಿರುವ ಯಡ್ಡಿಯ ವಿರುದ್ಧ ಇದೀಗ ಲಿಂಗಾಯತ ಸಮುದಾಯವೇ ಈಗ ಕೆಂಡಕಾರುತ್ತಿದೆ. ವೈದಿಕ-ಬ್ರಾಹ್ಮಣಶಾಹಿ ಮಠಮಾನ್ಯಗಳಿಗೆ ಸಾರ್ವಜನಿಕ ದುಡ್ಡನ್ನೂ, ಸಂಪತ್ತನ್ನೂ ಧಾರೆಯೆರೆಯುತ್ತಿರುವ ಹಾಗೂ ಇಡೀ ಲಿಂಗಾಯತ ಸಮುದಾಯವನ್ನು ಬ್ರಾಹ್ಮಣರ ಅಡಿಯಾಳಾಗುವಂತೆ ಮಾಡಲು ಹೊರಟಿರುವ ಯಡ್ಡಿಯ ವಿರುದ್ಧ ಲಿಂಗಾಯತ ಸಮುದಾಯ ಬಂಡೇಳುವ ಲಕ್ಷಣಗಳು ಕಾಣುತ್ತಿವೆ.

ಖುದ್ದು ಲಿಂಗಾಯತನಾಗಿರುವ ಯಡ್ಡಿ ಸಮ್ಮಿಶ್ರ ಸರ್ಕಾರವಿದ್ದಾಗ ಶ್ರೀರಾಮಚಂದ್ರಾಪುರ ಮಠದ ಸಗಣಿಗಳ್ಳ ಗೋಸ್ವಾಮಿಗೆ ಎರಡು ಕೋಟಿ ರೂಪಾಯಿ ಸಾರ್ವಜನಿಕ ದುಡ್ಡನ್ನು ಚೆಲ್ಲಿದಾಗ ಹೋಗಲಿ ಬಿಡಿ ಅಂತ ಜನ ಸುಮ್ಮನಾಗಿದ್ದರು. ಆದರೆ ಅಷ್ಟಕ್ಕೇ ಸುಮ್ಮನಾಗದೇ ಆತ ಮುಖ್ಯಮಂತ್ರಿಯಾದ ಮೇಲೆ ನೂರಾರು ಕೋಟಿ ಬೆಲೆ ಬಾಳುವ ಅಮೃತಮಹಲ್ ರಾಸು ಅಭಿವೃದ್ಧಿ ಕೇಂದ್ರವನ್ನು, ನಂತರದಲ್ಲಿ ಗೋಕರ್ಣ ದೇವಸ್ಥಾನವನ್ನು ಸಗಣಿಗಳ್ಳ ರಾಘವೇಶ್ವರನ ಜೋಳಿಗೆಗೆ ಹಾಕಿದ್ದು ರಾಜ್ಯದ ಲಿಂಗಾಯತರನ್ನು ಕೆರಳಿಸಿದೆ. ಇದೇ ಸಮಯದಲ್ಲಿ ಮೈಸೂರಿನ ಶ್ರೀಕಂಠದತ್ತ ಒಡೆಯರು ಕೆಲವು ದೇವಸ್ಥಾನಗಳನ್ನು ತಮಗೆ ವಹಿಸಿಕೊಡಬೇಕೆಂದು ಹಕ್ಕು ಪ್ರತಿಪಾದಿಸಿದರೆ ಅತ್ತ ಗದುಗಿನ ತೋಂಟದಾರ್ಯ ಶ್ರೀಗಳು ಯಡಿಯೂರು ಸಿದ್ದಲಿಂಗೇಶ್ವರ ಕ್ಷೇತ್ರವು ಒಂದು ದೇವಸ್ಥಾನವೇ ಅಲ್ಲ, ಅದು ತೋಂಟದಾರ್ಯ ಪರಂಪರೆಯ ಮಠ, ಅದನ್ನು ತಮಗೆ ಒಪ್ಪಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಗೋಕರ್ಣ ದೇವಸ್ಥಾನವನ್ನು, ಅಮೃತಮಹಲ್ ತಳಿ ಅಭಿವೃದ್ಧಿ ಕೇಂದ್ರವನ್ನು ಸ್ವಾಮಿಯ ಜೋಳಿಗೆಗೆ ಹಾಕಲು ಕಿಂಚಿತ್ತೂ ಹಿಂದುಮುಂದು ನೋಡದ ಯಡ್ಡಿ ಯಡಿಯೂರು ಸಿದ್ದಲಿಂಗೇಶ್ವರ ಮಠವನ್ನು ತೋಂಟದಾರ್ಯ ಮಠಕ್ಕೆ ಒಪ್ಪಿಸುವುದಕ್ಕೆ ಮಾತ್ರ ಸುತಾರಾಂ ಒಪ್ಪುತ್ತಿಲ್ಲ. ಅದಕ್ಕೆ ತೋಂಟದಾರ್ಯರು ಬ್ರಾಹ್ಮಣರಲ್ಲದಿರುವುದು ಒಂದು ಕಾರಣವಿರಬಹುದೇ? ಇದು ಲಿಂಗಾಯತರನ್ನು ಕೆರಳಿಸುತ್ತಿರುವ ಇನ್ನೊಂದು ವಿಷಯ.

ಹಾಗೆ ನೋಡಿದರೆ ಯಡ್ಡಿಯ ಮನೆ ದೇವರಾಗಿರುವ ಯಡಿಯೂರು ಸಿದ್ದಲಿಂಗೇಶ್ವರ ಕ್ಷೇತ್ರವು ಗದುಗಿನ ತೋಂಟದಾರ್ಯ ಮಠಕ್ಕೆ ಸೇರಿದ್ದು ಎಂಬ ಹಕ್ಕು ಪ್ರತಿಪಾದನೆಯನ್ನು ಶ್ರೀಗಳು ನಿನ್ನೆಮೊನ್ನೆ ಇಟ್ಟಿದ್ದಲ್ಲ. ಗೋಕರ್ಣ ದೇವಸ್ಥಾನವನ್ನು ಸಗಣಿಗಳ್ಳ ಸ್ವಾಮಿಗೆ ಕೊಟ್ಟ ಮೇಲೆ ಹೊಟ್ಟೆಕಿಚ್ಚು ಪಟ್ಟುಕೊಂಡು 'ನಮಗೂ ಒಂದು ದೇವಸ್ಥಾನ ಕೊಡಿ' ಎಂದು ಕೇಳಿದ್ದಂತೂ ಅಲ್ಲವೇ ಅಲ್ಲ. ಈ ಹಿಂದೆ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗಲೇ ತೋಂಟದಾರ್ಯರು ಯಡಿಯೂರು ಮಠವನ್ನು ತೋಂಟದಾರ್ಯ ಮಠಕ್ಕೆ ಹಸ್ತಾಂತರಿಸಬೇಕೆಂದು ದಾಖಲೆ ಪತ್ರ ಸಮೇತವಾಗಿ ಹೋರಾಟ ಆರಂಭಿಸಿದ್ದರು. ಆಮೇಲೆ ಅದು ಧರ್ಮಸಿಂಗ್, ಕುಮಾರಸ್ವಾಮಿ ಬೆಂಚ್ ದಾಟಿ ಈಗ ಅದೇ ಯಡಿಯೂರು ಸಿದ್ದಲಿಂಗೇಶ್ವರನ ಹೆಸರಿನಲ್ಲಿ ಅಧಿಕಾರಕ್ಕೇರಿದ ಯಡ್ಡಿಯ ಟೇಬಲ್ ಮೇಲೆ ಬಂದು ಕುಳಿತಿದೆಯಷ್ಟೆ.

ಆದರೆ ಈ ಹಕ್ಕೊತ್ತಾಯದ ಹಿಂದಿರುವ ಸಮರ್ಥನೆಗಳನ್ನು, ದಾಖಲೆ ಪತ್ರಗಳನ್ನು, ನ್ಯಾಯಸಮ್ಮತೆಯನ್ನು ಪರಾಮರ್ಶಿಸಿ ಒಂದು ತೀರ್ಮಾನ ಕೈಗೊಳ್ಳುವ ಬದಲು ಅವರ ಬೇಡಿಕೆಯನ್ನೇ ಕಸದ ಬುಟ್ಟಿಗೆಸೆದಿರುವುದು, ಆದರೆ ಅದೇ ವೇಳೆಯಲ್ಲಿ ರಾಘವೇಶ್ವರ ಸ್ವಾಮಿಯ ಕಾಲಿಗೆ ಬೇಡಿದ್ದೆಲ್ಲವನ್ನೂ ಸುರಿಯುತ್ತಿರುವುದು ಸಹಜವಾಗಿ ಲಿಂಗಾಯತರನ್ನು ಕೆರಳಿಸಿದೆ.

ಯಾವ ಪರಂಪರೆಗೆ ಸೇರಿದ್ದು?

ಯಡಿಯೂರು ಕ್ಷೇತ್ರಕ್ಕಾಗಿ ತೋಂಟದಾರ್ಯ ಶ್ರೀಗಳು ಹಕ್ಕು ಪ್ರತಿಪಾದಿಸಲು ಅವರಿಗಿರುವ ಸಮರ್ಥನೆಗಳೇನು ಎಂಬುದನ್ನು ಕೆದಕುತ್ತಾ ಹೋದರೆ ಎಲ್ಲವೂ ತಿಳಿನೀರಿನಂತೆ ಸ್ಪಷ್ಟವಾಗಿ ರಾಚುತ್ತವೆ. ಯಡಿಯೂರು ಕ್ಷೇತ್ರದ ಪರಂಪರೆಯನ್ನು, ಚರಿತ್ರೆಯನ್ನು ಅರಿತುಕೊಳ್ಳಲು ವರ್ತಮಾನದ ಜೊತೆಗೆ ಆ ಕಾಲದ ಸಾಂದರ್ಭಿಕತೆಗಳನ್ನು ತಾಳೆ ಹಾಕಿ ನೋಡಿದರೆ ಅದರ ನೈಜ ಪರಂಪರೆಯ ಚಿತ್ರಣ ಸಿಗುತ್ತದೆ.

ದಾಖಲೆಗಳ ಪ್ರಕಾರ ಹನ್ನೆರಡನೇ ಶತಮಾನದಲ್ಲಿ ಬಸವಣ್ಣನ ನೇತೃತ್ವದಲ್ಲಿ ಪ್ರಾರಂಭವಾದ ದುಡಿಯುವ ಸಮುದಾಯಗಳ ಸ್ವಾಭಿಮಾನಿ ಹೋರಾಟ ಕೆಲ ಸಮಯದ ನಂತರ ತಾತ್ಕಾಲಿಕವಾಗಿ ಅಂತ್ಯಗೊಂಡಿದ್ದೇನೋ ನಿಜ. ಆದರೆ ಆ ಚಳವಳಿಯ ಮೌಲಿಕ ಗುಣಗಳೆಲ್ಲವನ್ನೂ ಮತ್ತೆ ಆಚರಣೆಯಲ್ಲಿ ಪ್ರಾರಂಭಿಸಿದವರು ಸಿದ್ದಲಿಂಗ ಶ್ರೀಗಳು. ಬಸವಣ್ಣನ ಅನುಯಾಯಿಗಳನ್ನು ಒಟ್ಟುಗೂಡಿಸಿ ಬಸವ ಸಾರಿದ ವಿರಕ್ತತೆಯನ್ನು ರಾಜ್ಯದೆಲ್ಲೆಡೆ ಪ್ರಚಾರ ಮಾಡಿ, ಬಸವಣ್ಣನ 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬ ಸಿದ್ಧಾಂತವನ್ನು ವಿರಕ್ತರ ನರನಾಡಿಗಳಲ್ಲಿ ಹರಿಯುವಂತೆ ಮಾಡಿದ್ದು ಇದೇ ಸಿದ್ಧಲಿಂಗಸ್ವಾಮಿಗಳು.

ಒಂದು ಹಂತದಲ್ಲಿ ಕರುನಾಡಿನಿಂದ ಕಾಣೆಯಾದ ವೈದಿಕ ಪುರೋಹಿತಶಾಹಿ ವಿರೋಧಿ ಜನಾಂದೋಲನಕ್ಕೆ ಮರುಜೀವ ಕೊಟ್ಟವರೇ ಸಿದ್ದಲಿಂಗಸ್ವಾಮಿಗಳು ಎಂದರೆ ಆಶ್ಚರ್ಯವೇನಿಲ್ಲ. ಇಂತಹ ಜಾತ್ಯತೀತ ಮೌಲ್ಯಗಳನ್ನು ಸಾರಿದ ಸಿದ್ದಲಿಂಗಸ್ವಾಮಿಗಳ ಸಮಾಧಿ ಸ್ಥಳ ಇಂದು ವಿವಾದದ ಕೇಂದ್ರಬಿಂದುವಾಗಿರುವುದು ದುರಂತ.

ದಾಖಲೆಗಳು ಏನು ಹೇಳುತ್ತವೆ?

ಯಡಿಯೂರು ಕ್ಷೇತ್ರಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಕೆದಕುತ್ತಾ ಹೋದಂತೆ ಅವೆಲ್ಲವೂ ಗದುಗಿನ ತೋಂಟದಾರ್ಯ ಶ್ರೀಗಳ ವಾದವನ್ನೇ ಸಮರ್ಥಿಸುತ್ತವೆ. ಅಂದರೆ, ಯಡಿಯೂರು ಸಿದ್ದಲಿಂಗೇಶ್ವರ ಕ್ಷೇತ್ರವು ಒಂದು ದೇವಸ್ಥಾನವಾಗಿರದೇ ಅದೊಂದು ವಿರಕ್ತ ಮಠ ಎನ್ನುವ ಸಾರವನ್ನೇ ಎತ್ತಿಹಿಡಿಯುತ್ತವೆ.

ಮುಜರಾಯಿ ಇಲಾಖೆಯ ಆಯುಕ್ತರು 26.10.07 ಹಾಗೂ 08.02.08ರಂದು ಸರ್ಕಾರಕ್ಕೆ ಸಲ್ಲಿಸಿದ ದಾಖಲೆಗಳ ಪ್ರಕಾರವೇ ಯಡಿಯೂರು ಕ್ಷೇತ್ರ ಒಂದು ಮಠವಾಗಿದೆ. ಈ ಕುರಿತು ಕ್ಷೇತ್ರದಲ್ಲಿ ಬೇಕಾದಷ್ಟು ಶಿಲಾಶಾಸನಗಳು ಕೆತ್ತಲ್ಪಟ್ಟಿವೆ. ಶಿಲಾಶಾಸನದ ಕ್ರ.ಸಂ. 1, 2, 25, 26, 30, 31, 32 ರಲ್ಲಿ ಇದು 'ತೋಂಟದ ಸ್ವಾಮಿಯ ಕಲ್ಲು ಮಠ' ಎಂದೇ ನಾಮಾಂಕಿತವಾಗಿದ್ದು ಇದರ ವಾರಸುದಾರಿಕೆ ಗದುಗಿನ ಮಠದ ಸ್ವಾಮಿಗಳಿಗೆ ಸಲ್ಲುತ್ತದೆ ಎಂದು ನಿಖರವಾಗಿ ದಾಖಲೆಗಳು ಹೇಳುತ್ತವೆ.



ಲಿಂಗಾಯತ ಪರಂಪರೆಯಲ್ಲಿ ದೇವಾಲಯಗಳೂ ಇವೆ, ಮಠಗಳೂ ಇವೆ. ಎರಡರಲ್ಲೂ ನಿತ್ಯ ಪೂಜೆ ಜಾತ್ರೆ, ಭಕ್ತರ ದರ್ಶನ ಜರುಗುತ್ತವೆ. ಹೀಗಾಗಿ ಮಠವೂ ದೇವಾಲಯದಂತೆ ಗೋಚರಿಸುತ್ತದೆ. ಇದನ್ನು ಸರಿಯಾಗಿ ಪರಾಮರ್ಶಿಸದೇ ಸರ್ಕಾರ 1968ರಲ್ಲಿ ಯಡಿಯೂರು ಸಿದ್ಧಲಿಂಗ ಸ್ವಾಮಿಯ ಮಠವನ್ನು ದೇವಾಲಯ ಎಂದು ಪರಿಗಣಿಸಿ ಮುಜರಾಯಿ ಇಲಾಖೆಗೆ ಸೇರಿಸಿತ್ತು.


ಗದುಗಿನ ಹೋರಾಟದ ಹಾದಿ

1921ರಲ್ಲಿ ಆಗಿನ ಮಠಾಧಿಪತಿಗಳಾಗಿದ್ದ ಗುರು ತೋಂಟದ ಸ್ವಾಮಿಗಳು 'ಯಡಿಯೂರು ಗದ್ದುಗೆಗೆ ನಾವೇ ವಾರಸುದಾರರು, ಮೊದಲಿನಿಂದಲೂ ಅದರ ಉಸ್ತುವಾರಿಯನ್ನು ನಾವೇ ನೋಡಿಕೊಂಡು ಬಂದಿದ್ದೇವೆ, ಗದ್ದುಗೆಯ ಉತ್ಪನ್ನವನ್ನು ನಮಗೆ ಕೊಡಿ' ಎಂದು ಕುಣಿಗಲ್ ಮಾಮಲೇದಾರರಿಗೆ ಪತ್ರಬರೆದಿದ್ದರು (ಪತ್ರ ಸಂಖ್ಯೆ 23). ಅದಕ್ಕೂ ಮೊದಲು ಯಡಿಯೂರಿನ ಮಠವನ್ನು ತಮ್ಮ ವಶಕ್ಕೆ ನೀಡಬೇಕೆಂದು ತೋಂಟದಾರ್ಯ ಪರಂಪರೆಯ 16ನೇ ಜಗದ್ಗುರು ಶ್ರೀ ಸಿದ್ದೇಶ್ವರ ಸ್ವಾಮಿಗಳು ಮೈಸೂರು ದಿವಾನರಿಗೆ ಪತ್ರ ಬರೆದಿದ್ದರು (ಪತ್ರ ಸಂಖ್ಯೆ 85).

ಯಡಿಯೂರು ಸಿದ್ಧಲಿಂಗೇಶ್ವರ ಮಠವನ್ನು ಸರ್ಕಾರ ಮುಜರಾಯಿ ಇಲಾಖೆಗೆ ಸೇರಿಸಿಕೊಂಡ ಮೇಲೆ ಬಹಳ ದಿನಗಳ ತನಕ ಅದನ್ನು ಮರಳಿ ತೋಂಟದಾರ್ಯ ಪರಂಪರೆಗೆ ಹಿಂತಿರುಗಿಸಿಕೊಳ್ಳುವ ಪ್ರಯತ್ನಗಳು ನಡೆಯಲಿಲ್ಲ. ಅದಕ್ಕೆ ಆಗಿನ ಪೀಠಾಧಿಪತಿಗಳು ನಿರಕ್ಷರಿಗಳಾಗಿದ್ದುದು ಒಂದು ಕಾರಣವಿರಬಹುದು.

ಆದರೆ ಯಾವಾಗ 1994ರಲ್ಲಿ ತೋಂಟದಾರ್ಯ ಶ್ರೀಗಳು ಗದಗ-ಡಂಬಳ ಮಠಕ್ಕೆ ಕಾಲಿಟ್ಟರೋ ಯಡಿಯೂರು ಕ್ಷೇತ್ರ ದೇವಸ್ಥಾನವಲ್ಲ, ಅದೊಂದು ನಿರ್ವಿಕಲ್ಪ ಸಮಾಧಿ ಕ್ಷೇತ್ರ. ಅದು ಗದುಗಿನ ತೋಂಟದಾರ್ಯ ಮಠದ ಪರಂಪರೆಗೆ ಸೇರಿದ್ದು ಎಂದು ಹಕ್ಕು ಪ್ರತಿಪಾದನೆಯ ಹೋರಾಟ ಪ್ರಾರಂಭಿಸಿದರು. ಅದಕ್ಕಾಗಿ ದಾಖಲೆಗಳನ್ನು, ಪುರಾವೆಗಳನ್ನು ಒದಗಿಸಿದರು. ಆದರೆ ಇದುವರೆಗೆ ರಾಜ್ಯವನ್ನಾಳಿದ ಯಾವುದೇ ಸರ್ಕಾರವೂ ಅದಕ್ಕೆ ಕವಡೆ ಕಾಸಿನ ಕಿಮ್ಮತ್ತನ್ನು ಕೊಟ್ಟಿಲ್ಲ. ಇನ್ನೂ ದುರಂತ ಎಂದರೆ, ವೈದಿಕ, ಪುರೋಹಿತಶಾಹಿ, ಬ್ರಾಹ್ಮಣಶಾಹಿ ಉದ್ದೇಶಗಳಿಗೆ [illegible] ಯಡಿಯೂರು ಸಿದ್ಧಲಿಂಗೇಶ್ವರ ವಿರಕ್ತ ಮಠದಲ್ಲಿ ವೈದಿಕಶಾಹಿ, ಬ್ರಾಹ್ಮಣಶಾಹಿ, ಪುರೋಹಿತಶಾಹಿ ಉದ್ದೇಶಗಳನ್ನು ಪಡೆಯುವುದಕ್ಕೆ ಪ್ರೋತ್ಸಾಹ ನೀಡುತ್ತಾ ಬಂದಿತು.





[illegible]

[illegible]

ಇಷ್ಟೆಲ್ಲಾ ದಾಖಲೆಗಳಿದ್ದರೂ ಯಡಿಯೂರು ಸಿದ್ಧಲಿಂಗೇಶ್ವರ ಮಠವನ್ನು ಗದುಗಿನ ತೋಂಟದಾರ್ಯ ಮಠಕ್ಕೆ ವಹಿಸುವುದಕ್ಕೆ ಏನು ತೊಂದರೆ? ಗೋಕರ್ಣ, ಅಮೃತ ಮಹಲ್‌ಗಳನ್ನು ರಾಘವೇಶನ ಜೋಳಿಗೆಗೆ ಸುರಿಯುವಲ್ಲಿ ಹಿಂದು ಮುಂದು ನೋಡದ ಯಡ್ಡಿ ಇಲ್ಲಿ ಯಾಕೆ ಹಿಂದು ಮುಂದು ನೋಡುತ್ತಿದ್ದಾನೆ? ಇವೇನೂ ಅರ್ಥವಾಗದ ಪ್ರಶ್ನೆಗಳಲ್ಲ.

ಯಡ್ಡಿ ತೋರ್ಪಡಿಕೆಗೆ ಲಿಂಗಾಯತನಾಗಿದ್ದರೂ ಅಂತರ್ಯದಲ್ಲಿ ಆತನೊಬ್ಬ ಮಹಾ ಬ್ರಾಹ್ಮಣವಾದಿ. ವಾಸ್ತವದಲ್ಲಿ ಲಿಂಗಾಯತ ಧರ್ಮದಲ್ಲಿ ಹೋಮ-ಹವನಗಳಿಗೆ ಅವಕಾಶವೇ ಇಲ್ಲ, ಅವೆಲ್ಲಾ ಪಕ್ಕಾ ಬ್ರಾಹ್ಮಣರ ಆಚರಣೆಗಳು. ಹಾಗಿದ್ದರೂ ವಿಧಾನಸೌಧದಲ್ಲಿಯೇ ರಾಜಾರೋಷವಾಗಿ ಹೋಮ ಹವನಗಳನ್ನು ಮಾಡಿಸಿ ತಾನೊಬ್ಬ ಬ್ರಾಹ್ಮಣ ಎಂಬುದನ್ನು ಆತ ಅವತ್ತೆ ತೋರಿಸಿಕೊಂಡಿದ್ದ. ರಾಘವೇಶನ ಕಾಲಡಿಯಲ್ಲೇ ಸದಾ ಬಿದ್ದುಕೊಂಡು ತಾನೊಬ್ಬ ಮಹಾಬ್ರಾಹ್ಮಣ ಸೇವಕ ಎನಿಸಿಕೊಂಡಿದ್ದಾನೆ.

ಅದೂ ಅಲ್ಲದೇ ಯಡ್ಡಿ ಒಬ್ಬ ಕೋಮುವಾದಿ. ಆತನಿಗೆ ಜಾತ್ಯತೀತ ಲಿಂಗಾಯತ ಧರ್ಮಕ್ಕಿಂತ ಬ್ರಾಹ್ಮಣಶಾಹಿ ಕೋಮುವಾದವೇ ಬಹಳ ಪ್ರಿಯ. ಆದ್ದರಿಂದಲೇ ಜಾತ್ಯತೀತತೆಗೆ ಹೆಸರುವಾಸಿಯಾಗಿರುವ ಯಡಿಯೂರು ಸಿದ್ಧಲಿಂಗೇಶ್ವರ ಮಠವನ್ನೂ ಸಂಪೂರ್ಣ ಕೋಮುವಾದಿ ಮಠವನ್ನಾಗಿ ಪರಿವರ್ತಿಸಲು ಹೊರಟಿದ್ದಾನೆ. ಅಂತಹದ್ದರಲ್ಲಿ ಬಸವಣ್ಣನ ಜಾತ್ಯತೀತ ಮೌಲ್ಯಗಳನ್ನು ಇಂದಿಗೂ ಆಚರಿಸಿಕೊಂಡು ಬರುತ್ತಿರುವ ಗದುಗಿನ ತೋಂಟದಾರ್ಯ ಮಠಕ್ಕೆ ಯಡಿಯೂರು ಮಠವನ್ನು ಕೊಡಲು ಆತ ಹೇಗೆ ತಾನೆ ಒಪ್ಪಿಯಾನು?

ಅದರಲ್ಲೂ ಕೋಮು ವಾದದ ಪ್ರಶ್ನೆ ಬಂದಾಗ ತೋಂಟದಾರ್ಯ ಶ್ರೀಗಳು ಹಿಂದುಮುಂದು ನೋಡದೆ ಅದನ್ನು ಖಂಡಿಸುತ್ತಲೇ ಬಂದಿದ್ದಾರೆ. ಹಿಂದೂತ್ವ ಕೋಮುವಾದಿಗಳು ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡಿದಾಗ ಅಲ್ಪಸಂಖ್ಯಾತರ ಪರವಾಗಿ ನಿಂತು ಕೋಮುವಾದಿ ವಿರೋಧಿ ಹೋರಾಟಗಳಲ್ಲಿ ಭಾಗವಹಿಸಿದ್ದಾರೆ. ಇದೆಲ್ಲಾ ಸಂಘಪರಿವಾರಿಗಳಿಗೆ ಚೆನ್ನಾಗಿ ಗೊತ್ತು. ಇಂತಹ ಜಾತ್ಯತೀತವಾದಿಯ ಜೋಳಿಗೆಗೆ ಯಡಿಯೂರು ಸಿದ್ಧಲಿಂಗೇಶ್ವರ ಮಠವನ್ನು ವಹಿಸುವುದಕ್ಕೆ ಪಕ್ಕಾ ಕೋಮುವಾದಿಯಾಗಿರುವ ಯಡ್ಡಿಯಾಗಲೀ ಅವನ ಬಿಗ್ ಬಾಸ್‌ಗಳಾದ ಸಂಘಪರಿವಾರಿಗಳಾಗಲೀ ಹೇಗೆ ಒಪ್ಪುತ್ತಾರೆ ಹೇಳಿ?

ಹಾಗಂತ ಲಿಂಗಾಯತರಾಗಲೀ ಅಥವಾ ಗದುಗಿನ ತೋಂಟದ ಶ್ರೀಗಳಾಗಲೀ ಸುಮ್ಮನೇ ಕುಳಿತಿಲ್ಲ. ಯಡ್ಡಿಯ ವಿರುದ್ಧದ ಆಕ್ರೋಶ ಕಟ್ಟೆಯೊಡೆಯುವ ದಿನಗಳು ದೂರವಿಲ್ಲ. ಉತ್ತರ ಕರ್ನಾಟಕದ ಲಿಂಗಾಯತ ಲೀಡರುಗಳು, ವಿವಿಧ ಲಿಂಗಾಯತ ಮಠಗಳ ಸ್ವಾಮಿಗಳು ಸೇರಿಕೊಂಡು "ಯಡ್ಡಿ ಲಿಂಗಾಯತನಲ್ಲ, ಅವನೊಬ್ಬ ಲಿಂಗಾಯತ ವಿರೋಧಿ, ಬ್ರಾಹ್ಮಣಶಾಹಿ" ಎಂಬ ಅಭಿಯಾನ ಶುರುಮಾಡಿಕೊಳ್ಳುವ ಲಕ್ಷಣಗಳು ಕಾಣುತ್ತಿವೆ.

ಯಡ್ಡಿಯನ್ನು ಆ ಸಗಣಿಗಳ್ಳನೇ ಕಾಪಾಡಬೇಕು.

■ ಹುರುಳಿಕುಪ್ಪಿ ವಿನಯ್

ಒಕ್ಕಲಿಗರ ಬಂಡಾಯ!




ಯಾವಾಗ ಗದುಗಿನ ತೋಂಟದಾರ್ಯರು ಯಡಿಯೂರು ಸಿದ್ದಲಿಂಗೇಶ್ವರ ಕ್ಷೇತ್ರಕ್ಕಾಗಿ ಹಕ್ಕುಪ್ರತಿಪಾದನೆ ಮಾಡಿದರೋ ಇತ್ತ ಒಕ್ಕಲಿಗರೂ ಬಂಡೇಳುತ್ತಿದ್ದಾರೆ. ಉತ್ತರ ಕರ್ನಾಟಕದಲ್ಲಿ ಲಿಂಗಾಯತರು ಯಡಿಯೂರು ಸಿದ್ಧಲಿಂಗೇಶ್ವರನನ್ನು ಆರಾಧಿಸಿದರೆ ಆ ಭಾಗದ ಒಕ್ಕಲಿಗರೂ ಸಿದ್ಧಲಿಂಗರನ್ನು ಪೂಜಿಸುತ್ತಾರೆ. ಹಾಗಾಗಿ ಒಕ್ಕಲಿಗರ ಸ್ವಾಮೀಜಿ ಆದಿಚುಂಚನಗಿರಿಯ ಬಾಲಗಂಗಾಧರನಾಥ ಸ್ವಾಮಿ ಕೂಡ ಯಡಿಯೂರಿಗಾಗಿ ರಂಪಾಟಕ್ಕಿಳಿದಿದ್ದಾರೆ.

ಒಕ್ಕಲಿಗರು ಮತ್ತು ಲಿಂಗಾಯತರು ವಾಸ್ತವದಲ್ಲಿ ಶೂದ್ರ ಪರಂಪರೆಯವರಾಗಿದ್ದು ಇವರಿಬ್ಬರ ನಡುವೆ ಜಗಳ ಹಚ್ಚುವ ಕೆಲಸವನ್ನು ಬ್ರಾಹ್ಮಣಶಾಹಿಗಳಾದ ಸಂಘಪರಿವಾರ ಬಾಲಗಂಗಾಧರ ಸ್ವಾಮಿಯ ಮೂಲಕ ಮಾಡಿಸುತ್ತಿರುವುದು ಇಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಚಡ್ಡಿಗಳು ಬಾಲಗಂಗಾಧರನಾಥ ಸ್ವಾಮಿಗಳನ್ನು ವಿಶ್ವಹಿಂದೂ ಪರಿಷತ್ತಿನ [illegible] ಮಾಡಿಕೊಂಡು ಕೋಲುಬಸವನಂತೆ ಕುಣಿಸುತ್ತಿರುವುದು ಈಗಲಾದರೂ ಅವರಿಗೆ ಅರ್ಥವಾಗಬೇಕು. [illegible] ಬ್ರಾಹ್ಮಣಶಾಹಿ ಸಂಘಪರಿವಾರದ ಅಂಗಳದಿಂದ ಹೊರಬಂದು ಶೂದ್ರ ಪರಂಪರೆಯ ತೋಂಟದಾರ್ಯರೊಂದಿಗೆ ಕೈಜೋಡಿಸಿದರೆ [illegible] ಸಿದ್ಧಲಿಂಗೇಶ್ವರನ ಅಂಗಳದಲ್ಲಿರುವ ವೈದಿಕ ಪುರೋಹಿತಶಾಹಿಗಳ ಹಿಂದು ಕಾಲ್ತೆಗೆಯುತ್ತದೆ. ಬಾಲಗಂಗಾಧರನಾಥ ಸ್ವಾಮಿಗಳು ನಿಜವಾಗಿಯೂ ಶೂದ್ರ ಪರಂಪರೆಯವರಾಗಿದ್ದರೆ, ಅವರು ಸಂಘಪರಿವಾರದ ಕುತಂತ್ರಗಳಿಗೆ ಒಂದು ಟೂಲ್ ರೀತಿಯಲ್ಲಿ ಬಳಕೆಯಾಗುವುದನ್ನು ಬಿಟ್ಟು ಈ ವಿವಾದ ಬಗೆಹರಿಸುವುದಕ್ಕೆ ಹೆಗಲು ಕೊಡಬೇಕು.


ರಂಭಾಪುರಿ ಗೋಬೆಲ್ಸ್‌ನ ಅವತಾರ!

ಬಾಳೆಹೊನ್ನೂರಿನ ಪಂಚಪೀಠಾಧಿಪತಿಗಳಲ್ಲೊಬ್ಬರಾದ ರಂಭಾಪುರಿ ಸ್ವಾಮಿ ಪವಿತ್ರ ಯಡಿಯೂರು ಕ್ಷೇತ್ರದಲ್ಲಿ ತನ್ನ ಹೊಲಸು ನಾಲಿಗೆ ಆಡಿಸುತ್ತಿದ್ದಾನೆ. ರಾಜ್ಯದ ಪಂಚಮಸಾಲಿ ಸಮುದಾಯದವರೆಲ್ಲ ಮರಳಿ ವಿರಕ್ತ ಪರಂಪರೆಗೆ ವಾಲಿದ ತಕ್ಷಣ ತೀವ್ರ ಕ್ರೈಸಿಸ್‌ಗೆ ಸಿಲುಕಿರುವ [illegible] ತನ್ನ ಪಾದಪೂಜೆಗೆ ಯಾರೂ ಇಲ್ಲದೇ, ಇನ್‌ಕಂ ಕೂಡ ಕಮ್ಮಿಯಾಗಿ ಸಂಕಟಪಡುತ್ತಿರುವ ಈ ಸ್ವಾಮಿಗೆ ಈಗ ಯಾವುದಾದರೊಂದು ಆದಾಯ ಬರುವ ಜಾಗಬೇಕು. ಅದಕ್ಕಾಗಿ ತನ್ನದೂ ಒಂದು ಕಲ್ಲು ಇರಲಿ ಎಂದು ಯಡಿಯೂರು ಸಿದ್ಧಲಿಂಗೇಶ್ವರ ಕ್ಷೇತ್ರಕ್ಕೆ [illegible] ಎಸೆದಿದ್ದಾರೆ. ಕೋಟ್ಯಂತರ ರೂಪಾಯಿ ಆದಾಯ ತರುವ ಧಾರ್ಮಿಕ ಜಾಗಗಳಲ್ಲಿ ಕೇಸರಿ ಧ್ವಜ ಹಾರಿಸಿ ಪೀಠ ಜಡಿದುಕೊಂಡಿರುವ [illegible] ಬಾಲಂಗೋಚಿ ಪಂಚಾಚಾರ್ಯರು [illegible] ಪ್ರಚಾರಕನಾಗಿದ್ದ ಗೋಬೆಲ್ಸ್ ಅವತಾರ [illegible] ರಂಭಾಪುರಿ ಸ್ವಾಮಿಗಳ [illegible] ಸಂಬಂಧವಿಲ್ಲ. ಹಾಗಿದ್ದಾಗಲೂ [illegible] ಸುಳ್ಳನ್ನು ನೂರು ಬಾರಿ ಹೇಳಿ ಸತ್ಯ ಮಾಡಲು [illegible]



ಕೊಡಗು-ಪೊನ್ನತ್‌ಮೊಟ್ಟೆ

ದೇವಸ್ಥಾನದಲ್ಲಿ ದನದ ಮೂಳೆ




ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿಗೆ ಸೇರಿದ ಚೆಟ್ಟಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಪೊನ್ನತ್‌ಮೊಟ್ಟೆಯ ಶನೇಶ್ವರ ದೇವಸ್ಥಾನದ ಆವರಣದಲ್ಲಿ ದನದಮಾಂಸ, ಮೂಳೆ ಬಿದ್ದಿತ್ತು ಎನ್ನುವ ಸುದ್ದಿ ಸಂಘಪರಿವಾರದವರ ಪ್ರತಿಭಟನೆಗೆ ಕಾರಣವಾಗಿ ಕೊಡಗಿನಲ್ಲಿ ಪ್ರಕ್ಷುಬ್ಧತೆಯನ್ನು ಮೂಡಿಸಿತ್ತು.

ಪೊನ್ನತ್‌ಮೊಟ್ಟೆ ಸುಮಾರು 150-200 ಜನಸಂಖ್ಯೆ ಇರುವ ಚಿಕ್ಕಹಳ್ಳಿ, ಬಹುತೇಕ ಎಲ್ಲವೂ ಹೆಂಚಿನ ಮನೆಗಳು. ಇಲ್ಲಿ ಮಲೆಯಾಳಿ ಮುಸ್ಲಿಮರು, ಮಲೆಯಾಳಿ ಹಿಂದುಗಳು ಮತ್ತು ಕಡಿಮೆ ಸಂಖ್ಯೆಯಲ್ಲಿ ಕನ್ನಡಿಗರಿದ್ದಾರೆ. ಮುಖ್ಯರಸ್ತೆಗೆ ತಾಗಿಕೊಂಡು ಶನೇಶ್ವರ ದೇವಸ್ಥಾನವಿದ್ದರೆ, ಇಲ್ಲಿಂದ ಒಂದೂವರೆ ಫರ್ಲಾಂಗ್ ದೂರದಲ್ಲಿ ಪಳ್ಳಿ (ಮಸೀದಿ) ಇದೆ. ಬಹುತೇಕ ಎಲ್ಲರೂ ಕೂಲಿ ಕಾರ್ಮಿಕರು; ಸುತ್ತಲಿನ ತೋಟ, ಗದ್ದೆಯಲ್ಲಿ ಕೆಲಸ ಮಾಡುವವರಾಗಿದ್ದಾರೆ, ಮಹಿಳೆಯರು ಕೂಡ. ಹೀಗಾಗಿ ಇಲ್ಲಿಯ ಹಗಲು ಕೂಡ ರಾತ್ರಿಯ ಮೌನವನ್ನು ಹೊದ್ದುಕೊಂಡಿರುತ್ತದೆ. ಒಟ್ಟಾರೆ ಹಸುರಿನ ಮಧ್ಯೆ ಮೊಟ್ಟೆಯಂತೆ ಕೂತಿದ್ದ ಪೊನ್ನತ್‌ಮೊಟ್ಟೆ ಎಂಬ ಹಳ್ಳಿಯ ಮೌನದಲ್ಲೀಗ ಭಯದ ಭೀತಿ ಆವರಿಸಿದಂತೆ ಕಾಣುತ್ತಿದೆ. ಪೊಲೀಸ್ ಪಡೆಯ ಕಾವಲು ಇದೆ.

ಆಗಸ್ಟ್ 23ರ ಬೆಳಗಿನ ಜಾವ ಶನೇಶ್ವರ ದೇವಸ್ಥಾನದ ಗೇಟಿನ ಮುಂದೆ ಮತ್ತು ದೇವಸ್ಥಾನದ ಆವರಣದಲ್ಲಿ ರಕ್ತದ ಕಲೆಗಳು ಮತ್ತು ದನದ ಕಾಲಿನ ಎರಡು ಉದ್ದದ ಮೂಳೆಗಳು ಕಾಣಿಸಿವೆ ಎಂದು ಆರೋಪಿಸುವಾತ ಇಲ್ಲಿನ ಗ್ರಾಮ ಪಂಚಾಯತಿಯ ಅಧ್ಯಕ್ಷ ಮಧುಸೂದನ್. ಸ್ವತಃ ತನ್ನ ಮನೆಯ ಅಂಗಳದಲ್ಲಿ ದನದ ರುಂಡ ಬಿದ್ದಿದ್ದು ಇದನ್ನು ಇಲ್ಲಿ ಬೆಳಿಗ್ಗೆ 5 ಗಂಟೆಗೆ ಹಾಕಿ ಹೋದ ವ್ಯಕ್ತಿ ರಫೀಕ್ ಎಂಬಾತ ಮತ್ತು ಇತನ ಸಂಗಡಿಗರು ಎಂದು ಚೆಟ್ಟಳ್ಳಿ ಪೊಲೀಸ್ ಸ್ಟೇಷನ್‌ನಲ್ಲಿ ಅದೇ ದಿನ ಸಂಜೆ ಆರು ಗಂಟೆಗೆ ಈತ ದೂರು ದಾಖಲು ಮಾಡಿದ್ದಾರೆ.

ಈ ಘಟನೆಯ ಸತ್ಯಾಸತ್ಯತೆಯನ್ನು ಅರಿಯುವ ನಿಟ್ಟಿನಲ್ಲಿ ಕೊಡಗು ಜಿಲ್ಲೆಯ ಪ್ರಗತಿಪರ ಚಿಂತಕರ ವೇದಿಕೆಯ ಸತ್ಯ ಶೋಧನಾ ಸಮಿತಿ ಪೊನ್ನತ್ ಮೊಟ್ಟೆಗೆ ಭೇಟಿ ನೀಡಿ ಎರಡು ಕೋಮಿನ ಜನರೊಂದಿಗೆ ಮಾತಾಡಿದರು.



ಬಿಜೆಪಿ ಪಕ್ಷದ ಮಧುಸೂದನ್ ಯುವಕ, ಅವಿವಾಹಿತ. ಕೈಗೆ ಕೇಸರಿ ದಾರ, ಹಣೆಗೆ ಕೆಂಪು ಕುಂಕುಮ ಎಳೆದುಕೊಂಡು ಒಂದಿಷ್ಟು ಪಡ್ಡೆ ಹುಡುಗರ ದಂಡನ್ನು ಇಟ್ಟುಕೊಂಡು ಓಡಾಡುವವ. ಅಭಿವೃದ್ಧಿಯೆಂಬ ಪದದ ಅರ್ಥವೂ, ಕ್ರಿಯೆಯೂ ಗೊತ್ತಿಲ್ಲದ ಈತ ಇಲ್ಲಿಯ ಗ್ರಾಮ ಪಂಚಾಯತಿಯ ಅಧ್ಯಕ್ಷ. "ಪೊನ್ನತ್‌ಮೊಟ್ಟೆಯ ಮುಸ್ಲಿಮರು ಇಲ್ಲಿ ದನ ಕಡಿಯುತ್ತಾರೆ. ವಾರಕ್ಕೆ ಎರಡು ಬಾರಿಯಾದ್ರೂ ತಿನ್ನುತ್ತಾರೆ. ಅವರ ಆಹಾರ, ಯಾತಕ್ಕೆ ಅಡ್ಡಿ ಬರಬೇಕು. ಹಾಗಾಗಿ ನೋಡಿಯೂ ಸುಮ್ಮನಿದ್ದೇವೆ" ಎನ್ನುವ ಈ ಅಧ್ಯಕ್ಷನ ಮಾತನ್ನು ಬಿಜೆಪಿಯೂ ಒಪ್ಪಿಕೊಳ್ಳಲಾರದು. ಗೋಹತ್ಯೆ ನಿಷೇಧಕ್ಕೆ ಒತ್ತಾಯಿಸುತ್ತಿರುವುದೇ ಬಿಜೆಪಿ ಮತ್ತು ಸಂಘ ಪರಿವಾರದವರು.

ಕೊಡಗು ಜಿಲ್ಲೆಯ ಎಲ್ಲಿಯೂ ದನಗಳನ್ನು ವಧಿಸುವ ಸಕ್ರಮಗೊಂಡ ಕಸಾಯಿಖಾನೆ ಇಲ್ಲ, ಹಾಗೆ ದನದ ಮಾಂಸದ ಅಂಗಡಿಗಳೂ ಇಲ್ಲ, ಹುಣಸೂರು ಮೈಸೂರಿನಿಂದ ತಂದು ಕೊಡಗಿನ ಅಲ್ಲಲ್ಲಿ ದನದ ಮಾಂಸವನ್ನು ಗುಟ್ಟಾಗಿ ಮಾರುವ ವ್ಯವಸ್ಥೆ ಇದೆ. ಬಹಳಷ್ಟು ಮಂದಿ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ. ಅಕ್ರಮವಾಗಿ ದನಗಳನ್ನು ಕಡಿಯುತ್ತಿದ್ದರೆ ಅದರ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವ ಅಧಿಕಾರ ಸಾರ್ವಜನಿಕರಿಗೆ ಇದೆ.

ಬಹಳಷ್ಟು ದಿನಗಳಿಂದ ದನಗಳನ್ನು ಕಡಿದು ತಿನ್ನುತ್ತಾರೆಂದು ನೇರವಾಗಿ ಆರೋಪಿಸುವ ಗ್ರಾಮ ಪಂಚಾಯತಿ ಅಧ್ಯಕ್ಷ ಮಧುಸೂದನ್ ಈವರೆಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿ ಕ್ರಮ ಜರುಗಿಸಲು ಒತ್ತಾಯಿಸದಿರುವುದು ಅಕ್ಷಮ್ಯ ಅಪರಾಧವಾಗಿದೆ ಅಥವಾ ಈತ ಮುಸ್ಲಿಮರ ಮೇಲೆ ದ್ವೇಷಪೂರಿತ ಸುಳ್ಳು ಆರೋಪ ಹೊರಿಸಿ ಕೋಮು ಸಾಮರಸ್ಯ ಕದಡುತ್ತಿದ್ದಾನೆ ಎನ್ನಬಹುದು. ಈ ಹಿನ್ನಲೆಯಲ್ಲಿ ಮಧುಸೂದನ್‌ನನ್ನು ಗ್ರಾಮ ಪಂಚಾಯತಿ ಅಧ್ಯಕ್ಷ ಸ್ಥಾನದಿಂದ ಕಿತ್ತು ಹಾಕುವ ಬಗ್ಗೆ ಕೊಡಗಿನ ಬಿಜೆಪಿ ವರಿಷ್ಠರು ಮರುಚಿಂತಿಸುವ ಅಗತ್ಯವಿದೆ.

ಆರೋಪಿ ರಫೀಕ್ ಎಂಟನೇ ತರಗತಿ ತನಕ ಓದಿರುವ 20 ವರ್ಷದ ಪ್ರಾಯದವ. ಸ್ಥಳೀಯ ತೋಟದಲ್ಲಿ ಕೂಲಿ ಕೆಲಸಗಾರನಾಗಿದ್ದಾನೆ. ಮಿತಭಾಷಿ. ಒಳ್ಳೆಯವ, ತಾನಾಯಿತು ತನ್ನ ಕೆಲಸವಾಯಿತು ಎಂಬುದು ಊರಿನ ಹಿಂದೂ-ಮುಸ್ಲಿಮರು ರಫೀಕ್ ಬಗ್ಗೆ ನೀಡುವ ಚಿತ್ರಣ.



ಮಧುಸೂದನರ ಪ್ರಕಾರ, ಬೆಳಗ್ಗಿನ ಜಾವ ಐದು ಗಂಟೆಯ ಹೊತ್ತಿಗೆ ಅಂಗಳದಲ್ಲಿ ನಾಯಿ ಬೊಗಳುವ ಸದ್ದು ಕೇಳಿಸಿ ಹೊರಬಂದು ಟಾರ್ಚ್ ಹಾಕಿ ನೋಡಿದಾಗ ರಫೀಕ್ ಮತ್ತು ಈತನ ಸಂಗಡಿಗರು (ಎರಡು-ಮೂರು ಮಂದಿ) ಹಸುವಿನ ತಲೆ ಬಿಸಾಕಿ ಬೇಲಿ ಹಾರಿ ಓಡಿ ಹೋದರು ಎನ್ನುವುದು. ಹಾಗೆ ರಾತ್ರಿ ಹೊತ್ತು ಎರಡು ನಾಯಿಗಳನ್ನು ಅಂಗಳದಲ್ಲಿ ಕಟ್ಟುವುದು ಇವರ ಅಭ್ಯಾಸವಂತೆ.

ಮುಸ್ಲಿಮರ ಪ್ರಕಾರ ಬೀದಿನಾಯಿ ದನದ ರುಂಡವನ್ನು ಎಳೆದುಕೊಂಡು ಮಧುಸೂದನನ ಮನೆಯ ಅಂಗಳ ತಲುಪಿರಬಹುದೆನ್ನುವುದು. ಬೀದಿ ನಾಯಿ(ಗಳು) ಮಾಂಸ ಸಿಕ್ಕಿದಾಗ ಅಲ್ಲಿಯೇ ಅಥವಾ ಸುರಕ್ಷಿತ ಸ್ಥಳಕ್ಕೆ ಎಳೆದುಕೊಂಡೋಗಿ ತಿನ್ನುತ್ತದೆ. ಅದು ಬಟ್ಟು ಪ್ರಯಾಸದಿಂದ ಕಚ್ಚಿಕೊಂಡೋ ಅಥವಾ ಎಳೆದುಕೊಂಡೋ ಹೋಗಿ ಅದೂ ಮಧುಸೂದನನ ಅಂಗಳದಲ್ಲಿ ತಿನ್ನಲು ಸಾಧ್ಯವೇ? ಸಾಮಾನ್ಯವಾಗಿ ಬೀದಿನಾಯಿಗಳು ಬೀದಿ ಬಿಟ್ಟು ಇತರರ ಮನೆಯ ಅಂಗಳಕ್ಕೆ, ಅದರಲ್ಲೂ ನಾಯಿಗಳಿರುವ ಸ್ಥಳಕ್ಕೆ ಅಕ್ರಮ ಪ್ರವೇಶ ಮಾಡುವುದಿಲ್ಲ, ನಾಯಿ ಬಾಯಿಯಲ್ಲಿ ದನದ ರುಂಡವನ್ನೆತ್ತಿಕೊಂಡು ಹೋಗಿ ತಿಂದಿರಬಹುದು ಎನ್ನುವ ಮುಸ್ಲಿಮರ ವಾದಸರಣಿಯೂ ಸಮಂಜಸವೆನಿಸುವುದಿಲ್ಲ.

ಕೊಡಗು ಜಿಲ್ಲಾ ಪ್ರಗತಿಪರ ಚಿಂತಕರ ವೇದಿಕೆಯ ಸತ್ಯಶೋಧನಾ ಸಮಿತಿ ಮುಂದೆ ಮಧುಸೂದನ ಶನೇಶ್ವರ ದೇವಸ್ಥಾನದ ಅಂಗಳದಲ್ಲಿ ದನದ ಕಾಲುಗಳಿದ್ದವು. ಅದನ್ನು ನೋಡಿದ ಅರ್ಧ ಗಂಟೆಯಲ್ಲಿ ಕಾಣೆಯಾಯಿತು ಎಂದು ಹೇಳಿದ್ದಾನೆ. ಆತ ಕೊಟ್ಟ ಪೊಲೀಸ್ ಪುಕಾರಿನಲ್ಲಿ ಅದರ ಬಗ್ಗೆ ಯಾವುದೇ ಮಾಹಿತಿ ಇಲ್ಲ, ಬೆಳಿಗ್ಗೆ 5 ಗಂಟೆಗೆ ನಡೆದ ಘಟನೆಯ ಬಗ್ಗೆ ಸಂಜೆ 6 ಗಂಟೆಗೆ ಪಿರ್ಯಾದು ನೀಡಿದ ಹಿನ್ನೆಲೆಯಲ್ಲಿ ನಡೆದ ಬೆಳವಣಿಗೆಗಳೇನು ಎನ್ನುವುದು ಚಿಂತಕರ ವೇದಿಕೆ ಎತ್ತಿರುವ ಪ್ರಶ್ನೆಗಳಾಗಿವೆ. ವೇದಿಕೆಯ ಪ್ರಕಾರ ದೇವಸ್ಥಾನದ ಆವರಣದಲ್ಲಿ ದನದ ಮೂಳೆ ಹಾಕಲಾಗಿದೆ ಎನ್ನಲಾದ ವಿಷಯವೇ ಸುಳ್ಳು. ದೇವಸ್ಥಾನದ ಗೇಟಿನ ಹೊರಗೆ ಮಾಂಸ ಮತ್ತು ರಕ್ತ ಇತ್ತು ಎನ್ನುವುದನ್ನು ಮಾತ್ರ ಪಿರ್ಯಾದಿನಲ್ಲಿ ಹೇಳಲಾಗಿದೆ. ಅಲ್ಲದೆ ದನದ ತಲೆ ಸಿಕ್ಕ ಸ್ಥಳ ಮಧುಸೂದನನ ಮನೆಯ ಅಂಗಳ ಎನ್ನುವುದೂ ಸುಳ್ಳು. ಸತ್ಯ ಶೋಧನಾ ಸಮಿತಿಗೆ ಮಧುಸೂದನ ತೋರಿಸಿದ ಜಾಗ ಆತನ ವಾಸದ ಮನೆಯಿರುವ ಸ್ಥಳಕ್ಕಿಂತ ಸ್ವಲ್ಪ ದೂರದಲ್ಲಿ, ಆತ ಹೊಸದಾಗಿ ಕಟ್ಟಿಸುತ್ತಿರುವ ಇನ್ನೂ ಗೃಹಪ್ರವೇಶವಾಗದಿರುವ ಕಟ್ಟಡದ ಸನಿಹದಲ್ಲಿ, ಆತನ ವಾಸದ ಮನೆ ರಸ್ತೆಗೆ ಹೊಂದಿಕೊಂಡೇ ಇದೆ. ಅದರ ಪಕ್ಕದಲ್ಲೇ ಶನೇಶ್ವರ ದೇವಸ್ಥಾನವಿದೆ. ದೇವಸ್ಥಾನಕ್ಕೂ ಮನೆಗೂ ರಸ್ತೆಯಿಂದಲೇ ಮೂಳೆಮಾಂಸಗಳನ್ನು ಎಸೆಯಲು ಅವಕಾಶವಿತ್ತು. ಇದೆಲ್ಲ ಹಿಂದೂ ಭಾವನೆಗಳನ್ನು ಕೆರಳಿಸಲು ಸಂಘಪರಿವಾರ ನಡೆಸಿದ ಕುಕೃತ್ಯವಿರಬಹುದು ಎನ್ನುವುದು ಚಿಂತಕರ ವೇದಿಕೆಯ ಸಂಶಯ.

ನಾಯಿಗಳು ಮೂಳೆಯನ್ನು ಅಂಗಳಕ್ಕೆ ತೆಗೆದುಕೊಂಡು ಹೋಗಿರಬಹುದೇ? ಅಥವಾ ಇತರ ಯಾವ ಕೋಮಿಗೆ ಸೇರಿದ ವ್ಯಕ್ತಿ ಎಸಗಿದ ದುಷ್ಕೃತ್ಯ ಇದಾಗಿರಬಹುದೆನ್ನುವುದು ಸೂಕ್ತ ತನಿಖೆಯಿಂದ ಬಯಲಾಗಬೇಕಿದೆ.


ಬಿಜೆಪಿ, ಸಂಘ ಪರಿವಾರದವರು ಆರೋಪಿ ರಫೀಕ್‌ನನ್ನು ಬಂಧಿಸಲು ವಿಳಂಬಿಸುತ್ತಿದ್ದ ಪೊಲೀಸರ ವಿರುದ್ಧ ತೀವ್ರ ಪ್ರತಿಭಟನೆ ನಡೆಸುತ್ತಿದ್ದರೆ, ಕೊಡಗು ಜಿಲ್ಲೆಯ ಕಾಂಗ್ರೆಸ್, ಜೆಡಿಎಸ್ ಪಕ್ಷಗಳು ಪೊನ್ನತ್‌ಮೊಟ್ಟೆಯ ಪ್ರಕರಣದಲ್ಲಿ ಗಾಢ ಮೌನ ವಹಿಸಿದಂತಿದೆ. ಸ್ಥಳಕ್ಕೆ ಭೇಟಿ ನೀಡಿ ಸತ್ಯವನ್ನು ಅರಿಯುವ, ನೊಂದವರನ್ನು ಸಾಂತ್ವನಿಸುವಂಥ ಕನಿಷ್ಠ ಕಾರ್ಯವನ್ನಾದರೂ ಇಲ್ಲಿನ ರಾಜಕೀಯ ಧುರೀಣರು ಮಾಡಬಹುದಿತ್ತು, ಮುಂದಿನ ವಿಧಾನಸಭೆ ಚುನಾವಣೆಗೆ ಇನ್ನೂ ಐದು ವರ್ಷ ಇದೆಯಲ್ಲಾ, ಈಗಲೇ ಯಾಕೆ ಎಲ್ಲವೂ ..... ಎಂಬ ನಿರ್ಧಾರಕ್ಕೆ ಇಲ್ಲಿನ ರಾಜಕೀಯ ಪಕ್ಷಗಳು ಬಂದಿರುವಂತಿದೆ.

ಪೊನ್ನತ್‌ಮೊಟ್ಟೆಯಲ್ಲಿ ಈವರೆಗೂ ಆಸ್ತಿಪಾಸ್ತಿ ನಷ್ಟದ, ಪ್ರಾಣಹಾನಿಯ ಯಾವುದೇ ಅಹಿತಕರ ಘಟನೆ ನಡೆಯದಿರುವುದು ಅಲ್ಲಿನ ಜನರ ನಡುವೆ ಬೆಸೆದಿರುವಂತಹ ಸಾಮರಸ್ಯವನ್ನು ತೋರಿಸುತ್ತದೆ. ಸಾಮರಸ್ಯವನ್ನು ಕದಡಿ, ತನ್ನ ಶಕ್ತಿಯನ್ನು ಅಮಾನವೀಯವಾಗಿ ವೃದ್ಧಿಸಿಕೊಳ್ಳುವುದು ಬಿಜೆಪಿ, ಸಂಘಪರಿವಾರದ ಗುಣಧರ್ಮವಾಗಿದೆ. ಈ ನಡೆ ಪೊನ್ನತ್‌ಮೊಟ್ಟೆ ಪ್ರಕರಣದಲ್ಲಿ ಎಷ್ಟರಮಟ್ಟಿಗೆ ಒಳಗೊಂಡಿದೆ ಎಂಬುದು ತನಿಖೆಯಿಂದ ಹೊರಬರಬೇಕಿದೆ.

ಕೊಡಗು ಜಿಲ್ಲಾ ಪ್ರಗತಿಪರ ಚಿಂತಕರ ವೇದಿಕೆಯ ಪದಾಧಿಕಾರಿ, ಸಾಹಿತಿ ಮತ್ತು ವಕೀಲರಾದ ಕೆ.ಆರ್. ವಿದ್ಯಾಧರ ಸತ್ಯಶೋಧನಾ ಸಮಿತಿಯ ಮುಂದಾಳತ್ವ ವಹಿಸಿ ಪೊನ್ನತ್‌ಮೊಟ್ಟೆಗೆ ಭೇಟಿ ನೀಡಿ "ಈ ವಿದ್ಯಮಾನ ರಾಜಕೀಯ ಪ್ರೇರಿತ ಹುನ್ನಾರದಿಂದ ಕೂಡಿರುವಂತಿದೆ" ಎಂದು ಆರೋಪಿಸಿದ್ದಾರೆ. ರಾಜ್ಯ ಸರ್ಕಾರವು ಇಂತಹ ಕೋಮುವಿದ್ವೇಷಗಳನ್ನು ಹರಡುವ ಪ್ರಕರಣಗಳನ್ನು ನಿಷ್ಪಕ್ಷಪಾತವಾಗಿ ತನಿಖೆ ಮಾಡಲು ಹೈಕೋರ್ಟ್ ನ್ಯಾಯಾಧೀಶರ ಸ್ಥಾನಮಾನದ ಶಾಶ್ವತ ಆಯೋಗದ ರಚನೆಗೆ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಪ್ರಗತಿಪರ ವೇದಿಕೆಯ ಸಂಚಾಲಕ ಅಲ್ಲಾರಂಡ ವಿಠಲ ನಂಜಪ್ಪನವರು ಕೊಡಗಿನಲ್ಲಿ ದನ ಕಡೆಯುವ ಕಸಾಯಿಖಾನೆ ಆರಂಭಿಸಲು ಪರವಾನಗಿ ಕೊಡಲು ಮತ್ತು ಆ ಮೂಲಕ ಅಧಿಕೃತವಾಗಿ ದನಮಾಂಸ ಮಾರಾಟ ಮಾಡಲು ಅವಕಾಶ ಸಿಕ್ಕಬೇಕೆಂದು ಸರಕಾರವನ್ನು ಆಗ್ರಹಿಸಿದ್ದಾರೆ.

ಬೆಳಗ್ಗೆ ಎದ್ದ ಕ್ಷಣ ದುಡಿಮೆಯನ್ನೇ ಧ್ಯಾನಿಸುವಂಥ ಪೊನ್ನತ್‌ಮೊಟ್ಟೆಯಲ್ಲಿ ಶಾಂತಿ ನೆಮ್ಮದಿ ನೆಲೆಸಬೇಕಿದೆ.

■ ಸಿ.ರಾಮ್, ಮಡಿಕೇರಿ



ಬೆಳಗಾವಿ: ಕೊನೆಗೂ ತೊಲಗಲಿರುವ ನಿರ್ಮಲೆ?

ಬೆಳಗಾವಿಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಹಾಯಕ ನಿರ್ದೇಶಕಿಯಾಗಿ ವಕ್ಕರಿಸಿಕೊಂಡಿರುವ ನಿರ್ಮಲಾ ಮಠಪತಿಯ ಲಂಚಾಯಣ-ನುಂಗಾಯಣಗಳ ಬಗ್ಗೆ ಎರಡು ವಾರಗಳ ಹಿಂದಷ್ಟೇ 'ಲಂಕೇಶ್' ವಿವರವಾಗಿ ಬರೆದಿತ್ತು, ಅದರ ಪ್ರತಿಫಲವೋ ಏನೋ ಅಂತೂ ಈಕೆಯನ್ನು ಇಲ್ಲಿಂದ ಎತ್ತಂಗಡಿ ಮಾಡುವ ಆದೇಶವೊಂದು ಹೊರಬೀಳಲು ಸಜ್ಜಾಗಿದೆ. ಇವಳ ಆಧಿಪತ್ಯದಲ್ಲಿ ಈಗಾಗಲೇ ಸೊರಗಿ ಸುಣ್ಣಾಗಿರುವ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇನ್ನಾದರೂ ಒಂದಿಷ್ಟು ಚೇತರಿಸಿಕೊಳ್ಳಬಹುದೇನೋ?

ನಿರ್ಮಲಾ ಮಠಪತಿ ಮಾಡಿದ ಅವಾಂತರಗಳಿಗೆ ಹೋಲಿಸಿದರೆ 'ವರ್ಗಾವಣೆ' ಎಂಬ ಈ ಶಿಕ್ಷೆ ತೀರಾ ಕಡಿಮೆ. ಈ ಹಿಂದೆ ಈಕೆಯ ಸಾರಥ್ಯದಲ್ಲಿ ನಿರ್ಮಾಣಗೊಂಡ ವಡಗಾವಿಯ ಗಡಿಭವನ ಉದ್ಘಾಟನೆಗೂ ಮುಂಚೆ ಸೋರಲಾರಂಭಿಸಿದ್ದಾಗಲೇ ಈಕೆಯನ್ನು ಅಮಾನತು ಮಾಡಬೇಕು ಎಂದು ಜನ ಪ್ರತಿಭಟಿಸಿದ್ದರು. ಆಗ ಅವರಿವರ ಕೈಕಾಲು ಹಿಡಿದು, ನೆತ್ತಿ ಸವರಿ ಹೇಗೋ ಬಚಾವಾಗಿದ್ದಳು. ಮತ್ತೆ ಕುಮಾರ ಗಂಧರ್ವ ರಂಗಮಂದಿರದ ತಾರಸಿ ಕಳಚಿ ಬಿದ್ದಾಗ ಈಕೆಯನ್ನು ಇಲ್ಲಿಂದ ಒದ್ದೋಡಿಸಬೇಕೆಂದು ಜನ ಹರಿಹಾಯ್ದಿದ್ದರು. ಕನ್ನಡ ಸಂಘಟಕರಾದ ಅಶೋಕ ಚಂದರಗಿ ಹಾಗೂ ರಾಘವೇಂದ್ರ ಜೋಶಿ ಈಕೆಯ ಅಕ್ರಮಗಳ ವಿರುದ್ಧ ಬೀದಿಗಿಳಿದು ಪ್ರತಿಭಟಿಸಿದ್ದರು. ಈ ಇಬ್ಬರು ಯುವಕರು ಬ್ರಾಹ್ಮಣ ಸಮುದಾಯಕ್ಕೆ ಸೇರಿರುವುದನ್ನೇ ಮುಂದು ಮಾಡಿಕೊಂಡು "ಲಿಂಗಾಯತರನ್ನು ತುಳಿಯಲು ಬ್ರಾಹ್ಮಣರು ಬೊಬ್ಬೆ ಹಾಕುತ್ತಿದ್ದಾರೆ" ಎಂದು ತನ್ನ ಅಕ್ರಮಗಳನ್ನು ಜಾತಿ ರಾಜಕಾರಣದಡಿಯಲ್ಲಿ ಮುಚ್ಚಿಡಲು ಪ್ರಯತ್ನಿಸಿದ್ದಳು. ಇವಳ ಈ ಸೋಗಲಾಡಿತನದ ಪುಂಗಿಗೆ ತನ್ನದೇ ಲಿಂಗಾಯತ ಸಮುದಾಯದ ಸಂಸದರುಗಳಾದ ಸುರೇಶ ಅಂಗಡಿ ಹಾಗೂ ಪ್ರಭಾಕರ ಕೋರೆ ಇಬ್ಬರೂ ತಲೆದೂಗಿದ್ದರು. ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದ ಸಂದರ್ಭದಲ್ಲಿ ಈ ರಂಗಮಂದಿರದ ತಾರಸಿ ಕುಸಿದು ಬಿದ್ದಿದ್ದರೆ, ಅಲ್ಲಿ ಸಾವಿರಾರು ಮಕ್ಕಳ ಮಾರಣಹೋಮವಾಗುತ್ತಿತ್ತು. ಆಗ ಈ ಕೋರೆಯಾಗಲೀ, ಅಂಗಡಿಯಾಗಲೀ ಹೊಣೆ ಹೊತ್ತುಕೊಳ್ಳುತ್ತಿರಲಿಲ್ಲ ಎಂದು ಜನ ಮಾತನಾಡಿಕೊಳ್ಳಲಾರಂಭಿಸಿದ್ದರು.


ಅಷ್ಟು ಹೊತ್ತಿಗಾಗಲೇ ನಿರ್ಮಲೆಯ ಲಂಚಾವತಾರದ ಲೀಲೆಗಳು ಜಿಲ್ಲಾಧಿಕಾರಿ ಡಿ.ಸಿ. ಡಾ.ಜೆ.ರವಿಶಂಕರ್‌ಗೆ ತಲುಪಿತ್ತು, ಆದರೆ ಈ ರವಿಶಂಕರ್ ಎಷ್ಟೊಂದು ಸಾಮರ್ಥ್ಯ ಎಂದರೆ ಇನ್ನು ಮೂರು ಜನ್ಮ ಎತ್ತಿಬಂದರೂ ಈತನಿಂದ ಅಂಗಡಿ ಮತ್ತು ಕೋರೆಗಳ ಬೆಂಬಲವಿರುವ ನಿರ್ಮಲೆಯನ್ನು ಎತ್ತಂಗಡಿ ಮಾಡಲಾಗುತ್ತಿರಲಿಲ್ಲ. ಈತ ದೀರ್ಘ ರಜೆಯ ಮೇಲೆ ಹೋಗಿ ಜಿ.ಪಂ. ಸಿಇಓ ಡಿ.ಬಿ. ನಾಯಕ ಪ್ರಭಾರ ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. ಸಿಕ್ಕ ಸಣ್ಣ ಅವಕಾಶವನ್ನೂ ಯಶಸ್ವಿಯಾಗಿ ಬಳಸಿಕೊಂಡ ನಾಯಕ್ ನಿರ್ಮಲೆಯ ಎತ್ತಂಗಡಿಗೆ ಶಿಫಾರಸ್ಸು ಮಾಡಿದ್ದಾರೆ.

ಈ ಸ್ಥಾನಕ್ಕೆ ಯಾರು?

ನಿರ್ಮಲೆಯಿಂದ ತೆರವಾಗಲಿರುವ ಈ ಸ್ಥಾನಕ್ಕೆ ಹಾವೇರಿಯ ಹಿರೇಗೌಡರನ್ನು ತರಬೇಕೆಂಬುದು ಕೆಲವರ ವಾದವಾದರೆ ಇನ್ನೊಂದೆಡೆ ಈ ಹಿಂದೆ ಇದ್ದ ಕೆ.ಎಚ್. ಚನ್ನೂರನನ್ನು ಕರೆತರಲು ಕನ್ನಡ ಸಂಘಟಕರು ಹವಣಿಸುತ್ತಿದ್ದಾರೆ. ಚನ್ನೂರ ಬಂದರೆ ಕನ್ನಡ ಸಂಘಟಕರ ಜೇಬು ಭರ್ತಿಯಾಗುತ್ತದೆ ಎಂಬುದೇ ಇದರ ತರ್ಕ. ಹಿರೇಗೌಡರ ಯಾರ ಮಾತಿಗೂ ಕಿವಿಗೊಡದ ಅಧಿಕಾರಿ ಎನ್ನಲಾಗುತ್ತಿದ್ದು ಅವರೇನಾದರೂ ಬಂದರೆ ಈ ಕನ್ನಡ ಓರಾಟಗಾರರ ಆಟ ನಡೆಯುವುದಿಲ್ಲ ಎಂಬುದು ಸ್ಪಷ್ಟ. ಜಿಲ್ಲೆಯ ಉಸ್ತುವಾರಿ ಸಚಿವ ಬಸವರಾಜ ಬೊಮ್ಮಾಯಿ ಯಾರ ಕಡೆ ವಾಲುತ್ತಾನೋ ನೋಡಬೇಕಷ್ಟೆ.

■ ಮಧುಬಾಲಾ

ಬೆಳ್ತಂಗಡಿ: ಕೆ.ಬಿ. ವೀರಾಪುರನೆಂಬ ಕಾಮಣ್ಣ!



ಕೆ.ಬಿ. ವೀರಾಪುರನೆಂಬ ತಾಲ್ಲೂಕು ಪಂಚಾಯತ್ ನಿರ್ವಹಣಾಧಿಕಾರಿಯು ಒಮ್ಮಿಂದೊಮ್ಮೆಲೆ ಕಾಮಾತುರನಾಗಿದ್ದು ಊರ ಜನರಿಗೆ ತಿಳಿದು, ಇನ್ನೇನು ಬಡಿಗೆ ಏಟಿನ ತುತ್ತಾಗುತ್ತಾನೆ ಎನ್ನುವಷ್ಟರಲ್ಲಿ ಆತ ದೀರ್ಘಕಾಲದ ರಜೆ ಹಾಕಿ ಗಂಟುಮೂಟೆ ಸಮೇತ ಓಟಕಿತ್ತ ಪ್ರಸಂಗ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ ಸಂಭವಿಸಿದೆ. ಕೆ.ಬಿ. ವೀರಾಪುರ ಎನ್ನುವ ಆಸಾಮಿ ಈ ಹಿಂದೆ ಶಿವಮೊಗ್ಗದ ಸಾಗರದಲ್ಲಿ ಕಾರ್ಯನಿರ್ವಹಣಾಧಿಕಾರಿಯಾಗಿದ್ದವ. ಅಲ್ಲಿ ಕಂಪ್ಯೂಟರ್ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದಲ್ಲಿ ತನಿಖೆ ಎದುರಿಸುತ್ತಿರುವಾಗಲೇ ಬೆಳ್ತಂಗಡಿಗೆ ವಕ್ಕರಿಸಿದ್ದ. ತಾನಿಲ್ಲಿಗೆ ಬಂದಿದ್ದೇ ಕಾಸು ಕಮಾಯಿಸಿ ಮಜಾ ಉಡಾಯಿಸಲು ಎಂಬಂತೆ ವರ್ತಿಸತೊಡಗಿದ ವೀರಾಪುರನ ಪೌರುಷಕ್ಕೆ ಪಿಡಬ್ಲುಡಿ ಅಸಿಸ್ಟೆಂಟ್ ಎಂಜಿನಿಯರ್ ನರೇಂದ್ರ, ಕೃಷಿ ಇಲಾಖೆಯ ರಂಗಸ್ವಾಮಿ, ತಹಸೀಲ್ದಾರ್ ಚಂದ್ರಮ್ಮ ಸೇರದಂತೆ ಹಿರಿ-ಕಿರಿ ಅಧಿಕಾರಿಗಳೆಲ್ಲಾ ಈತನ ನಿಷ್ಠುರ ಕಟ್ಟಿಕೊಳ್ಳಬೇಕಾಯಿತು.

ಹೇಳಿಕೇಳಿ ಮೊದಲೇ ಕಚ್ಚೆಹರುಕನಾದ ಈತನ ಸವಾರಿ ಗ್ರಾಮ ಪಂಚಾಯತ್ ಕಡೆಗೂ ಹರಿಯಿತು. ಪಂಚಾಯತ್ ಕಚೇರಿಗಳಲ್ಲಿ ಝಾಂಡಾ ಹೂಡಿ ಫೈಲುಗಳನ್ನೆಲ್ಲಾ ರಾಶಿಹಾಕಿ ತನಿಖೆಯ ನೆಪದಲ್ಲಿ ಕಾರ್ಯದರ್ಶಿಗಳನ್ನು ಮತ್ತು ಕಚೇರಿ ಸಿಬ್ಬಂದಿಗಳನ್ನು ಮಾನಸಿಕವಾಗಿ ಹಿಂಸಿಸಲಾರಂಭಿಸಿದ. ಈತನ 'ತನಿಖೆ'ಯ ಮೊದಲನೆ ಉದ್ದೇಶ ತಿಂಗಳ ಮಾಮೂಲಿ ಫಿಕ್ಸ್ ಮಾಡುವುದಾಗಿದ್ದರೆ ಎರಡನೆಯ ಉದ್ದೇಶ ಸ್ತ್ರೀ ಸಿಬ್ಬಂದಿಗಳನ್ನು ಬುಟ್ಟಿಗೆ ಹಾಕಿಕೊಳ್ಳುವುದಾಗಿತ್ತು. ಒಂದು ವೇಳೆ ಈತ ಬೀಸಿದ ಬಲೆಗೆ ಸಿಬ್ಬಂದಿ ಬೀಳದೆ ಹೋದರೆ ತನಿಖೆಯನ್ನು ತೀವ್ರಗೊಳಿಸಿ ಅವರನ್ನು ಸತಾಯಿಸುವುದು ಈತನ ವಿಕೃತ ಚಾಳಿಯಾಗಿತ್ತು.

ಈ ವೀರಾಪುರನ ವೃತ್ತಿ-ಪ್ರವೃತ್ತಿಗಳಲ್ಲಿ ಸಹಕರಿಸುತ್ತಿದ್ದವನು ಶ್ರೀಧರನೆಂಬ ಪಂಚಾಯತ್ ಗುಮಾಸ್ತ. ಒಂದು ಸಲ ಸಾಹೇಬರು ನಾರಾವಿ ಪಂಚಾಯತ್‌ಗೆ ತನಿಖೆಗೆಂದು ಹೋದರು. 'ತನಿಖೆ' ಫಲಪ್ರದವಾಗಿ ನಾರಾವಿಯ ಫಾರೆಸ್ಟ್ ಗೆಸ್ಟ್‌ಹೌಸ್‌ನಲ್ಲಿಯೇ ತಂಗಿದ್ದರು. ಸಾಹೇಬರ ಈ 'ಹಾದ'ರಾತಿಥ್ಯದ ಗುಟ್ಟನ್ನು ಅದುಮಿಟ್ಟುಕೊಳ್ಳಲಾಗದೇ ಬೆಳ್ತಂಗಡಿಯಲ್ಲಿ ಅದನ್ನು ಟಾಂ...ಟಾಂ... ಮಾಡಿದ್ದವನೂ ಇದೇ ಶ್ರೀಧರ. ವೀರಾಪುರ ಬೆಳ್ತಂಗಡಿಗೆ ಬಂದ ಮೂರು ತಿಂಗಳಲ್ಲೇ ಆತ ಅದೆಂತಹ ಬಕ ಅನ್ನೋದು ಜಾಹೀರಾಯಿತು. ಆಪ್ನಾದೇಶ್ ಪ್ರಾಯೋಜಕತ್ವದಲ್ಲಿ ಚಿಕೂನ್ ಗುನ್ಯಾ ಕುರಿತ ಮಾಹಿತಿ ಶಿಬಿರವೊಂದನ್ನು ಆಯೋಜಿಸಲಾಗಿತ್ತು. ಇದರ ಖರ್ಚಿಗೆಂದು ಪ್ರತಿ ಪಂಚಾಯತ್‌ನಿಂದ ತಲಾ 3000 ರೂ. ಅಲ್ಲದೇ ತಾಲ್ಲೂಕಿನ ಪ್ರತಿ ಇಲಾಖೆಯಿಂದಲೂ 5000 ರೂ. ವರೆಗೆ ವಸೂಲಿ ಮಾಡಲಾಗಿತ್ತು. ಅಂದರೆ ಈ ಒಂದು ಪ್ರಕರಣದಲ್ಲೇ ಆತ ಸುಮಾರು ಒಂದೂವರೆ ಲಕ್ಷದಷ್ಟು ಹಣವನ್ನು ತನ್ನ ಜೇಬಿಗಿಳಿಸಿದ್ದನ್ನು. ಹೀಗೆ ಆತ ಬೇರೆ ಬಾಬತ್ತಿನಲ್ಲಿ ಹೊಡೆದ ದುಡ್ಡಿಗೆ ಲೆಕ್ಕ ಇಟ್ಟವರಿಲ್ಲ.

ಇಷ್ಟೆಲ್ಲಾ ಆದರೂ ಯಾರೂ ಈತನ ವಿರುದ್ಧ ಚಕಾರವೆತ್ತದೆ ತಕ್ಕ ಸಂದರ್ಭಕ್ಕಾಗಿ ಜನ ಕಾಯುತ್ತಿದ್ದರು. ಆ ಸಂದರ್ಭವೂ ಬಂತು. ಸ್ಥಳೀಯ ಪಂಚಾಯತ್ ಒಂದರ ಕ್ಲರ್ಕ್ ಒಬ್ಬಾಕೆಯ ಮೇಲೆ ಕಾಕದೃಷ್ಟಿ ಬೀರಿದ ಈ ಕಾಮಣ್ಣ ಒಂದು ದಿನ ರಾತ್ರಿ ಆಕೆಗೆ ಫೋನಾಯಿಸಿ ಅಶ್ಲೀಲವಾಗಿ ಮಾತಾಡಿ ದನಲ್ಲದೆ ಬೆಳಗ್ಗೆ 8 ಗಂಟೆಗೆ ಮನೆಗೆ ಬಂದು ಕಾಣುವಂತೆ ಆಜ್ಞಾಪಿಸಿದನು. ಇದರಿಂದ ಇರಿಸುಮುರಿಸುಗೊಂಡ ಆ ಹುಡುಗಿ ವಿಷಯವನ್ನು ಮನೆಮಂದಿಯ ಗಮನಕ್ಕೆ ತಂದಳು. ಮನೆಯವರು ಮೇಲಧಿಕಾರಿಗೆ ದೂರಿದರು.

ಇನ್ನೇನು ವಿಷಯ ಊರೆಲ್ಲಾ ಹಬ್ಬಿ ವೀರಾಪುರನ ಛರ್ಬಿ ಇಳಿಸುವುದಷ್ಟೇ ಬಾಕಿ ಇತ್ತು, ತಕ್ಷಣವೇ ತನಿಖೆಗೆಂದು ಓಡಿಬಂದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಂಜಪ್ಪ ತನಿಖೆ ನಡೆಸುವ ನಾಟಕವಾಡಿ ರಾತ್ರೋರಾತ್ರಿ ವೀರಾಪುರನನ್ನು ರಜೆಯ ಮೇಲೆ ಊರಿಗೆ ಕಳುಹಿಸಿ ಆತ ಬೀಸೋ ದೊಣ್ಣೆಯಿಂದ ಪಾರಾಗುವಂತೆ ಸಹಕರಿಸಿದ್ದಾನೆ. ವೀರಾಪುರನಂತೂ ಬದುಕಿದೆ ಬಡಜೀವ ಎನ್ನುವಂತೆ ಪಾತ್ರೆ-ಪಗಡಿ ಸಮೇತ ಘಟ್ಟ ಹತ್ತಿದ್ದಾನೆ.

ಈ ಸಲುವೆ ವೀರಾಪುರನನ್ನು ಇಲ್ಲಿಂದ ಓಡಿಸಿದ್ದು ವಸಂತ ಬಂಗೇರಾ ಎಂದು ಜನ ಅಭಿನಂದಿಸುತ್ತಿರುವಾಗಲೇ ಸಿಪಿಐ ಸಂತ ಬೆದ್ದಿಗಳು 'ಒಂದು ದಿನದ ದುಡ್ಡುಗಾದರೂ ವೀರಾಪುರ ಬೆಳ್ತಂಗಡಿಗೆ ಬರುವಂತೆ ಮಾಡುತ್ತೇವೆ' ಎಂದು ಘೋಷಿಸುತ್ತಿರುವುದು ಲೇಟೆಸ್ಟ್ ಸುದ್ದಿ.


■ ಪ್ರಕಾಶ್ ಪಿಂಟೋ

ಹುಬ್ಬಳ್ಳಿ ಚಂದ್ರಶೇಖರ್ ಗೋಕಾಕ್ ಎಂಬ ಕೊಳ್ಳಿದೆವ್ವ!

ಬೇರೆ ಬೇರೆ ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಟಿಕೆಟ್ ನೀಡುವುದಕ್ಕೆ ಬೇರೆ ಬೇರೆ ಮಾನದಂಡಗಳನ್ನು ಅನುಸರಿಸುತ್ತವೆ. ಹಣ, ರಾಜಕೀಯ ವರ್ಚಸ್ಸು, ಗೆದ್ದು ಬರಬಲ್ಲ ಕ್ಷಮತೆ ಇತ್ಯಾದಿ ಇತ್ಯಾದಿ. ಆದರೆ ಬಿಜೆಪಿ ಇತರೆ ಎಲ್ಲಾ ರಾಜಕೀಯ ಪಕ್ಷಗಳಿಗಿಂತ ತುಸು ಭಿನ್ನವಾಗಿದ್ದು ಹಣದ ಜೊತೆ ಒಂದಿಷ್ಟು ಮುಸ್ಲಿಮ್ ಹೆಣಗಳನ್ನು ಉರುಳಿಸಿ ದಾಖಲೆಯಿದ್ದವರಿಗೆ ಖಾತ್ರಿಯಾಗಿ ಟಿಕೆಟ್ ನೀಡುತ್ತದೆ. ಅದಕ್ಕಾಗಿಯೇ ಬಿಜೆಪಿಯಿಂದ ಟಿಕೆಟ್ ಪಡೆಯಬೇಕೆಂದು ಬಯಸುವ ಪ್ರತಿಯೊಬ್ಬನೂ ಭಜರಂಗದಳ, ವಿಶ್ವಹಿಂದೂ ಪರಿಷತ್, ಎಬಿವಿಪಿಯಂತಹ ಹಿಂದೂತ್ವ ಭಯೋತ್ಪಾದಕ ಸಂಘಟನೆಗಳೊಂದಿಗೆ ಸೇರಿಕೊಂಡು ಕೋಮುಗಲಭೆಯೆಬ್ಬಿಸುತ್ತಾ ಒಂದಿಷ್ಟು ಮುಸ್ಲಿಮ್ ಹೆಣಗಳನ್ನು ಉರುಳಿಸುವುದಕ್ಕೆ ಪ್ರಯತ್ನಿಸುತ್ತಾನೆ.

ಮೊನ್ನೆ ಗಣೇಶ ಚತುರ್ಥಿಯ ಸಮಯದಲ್ಲಿ ಹುಬ್ಬಳ್ಳಿಯ ವಿಶ್ವಹಿಂದೂ ಪರಿಷತ್ತಿನ ನಾಯಕ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಕೆಲಸ ಮಾಡುತ್ತಿರುವ ಸೆಟ್ಲಮೆಂಟಿನ ಪುಡಿ ರೌಡಿ ಚಂದ್ರಶೇಖರ್ ಗೋಕಾಕ್ ಕೂಡ ಇಂತಹ ಒಂದು ಪ್ರಯತ್ನ ಮಾಡುವುದಕ್ಕೆ ಹೋಗಿದ್ದಾನೆ. ಆದರೆ ತಾನಂದುಕೊಂಡಂತೆ ಪ್ಲಾನ್ ಜಾರಿಯಾಗದಿದ್ದುದರಿಂದ ಮುಖ ಪೆಚ್ಚುಮೋರೆ ಮಾಡಿಕೊಂಡು ಮನೆದಾರಿ ಹಿಡಿದಿದ್ದಾನೆ.

ಈತ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹುಬ್ಬಳ್ಳಿ ಶಹರ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಪಡೆದು ಸ್ಪರ್ಧಿಸುವುದಕ್ಕೆ ಭಾರಿ ಕಸರತ್ತು ನಡೆಸಿದ್ದ. ಆದರೆ ಇವನ ಟ್ರ್ಯಾಕ್ ರೆಕಾರ್ಡ್ ಅಷ್ಟೊಂದು ಜಬರ್ದಸ್ತಾಗಿ ಇಲ್ಲದಿದ್ದುದರಿಂದ ಹಾಗೂ ಟಿಕೆಟ್‌ಗಾಗಿ ಹಣ ಸುರಿಯಲು ಕೈತುಂಬಾ ದುಡ್ಡು ಇಲ್ಲದಿದ್ದುದರಿಂದ ಅದು ಕೈತಪ್ಪಿಹೋಗಿತ್ತು. ಈ ಬಾರಿ ಸಿಗದಿದ್ದರೆ ಏನಾಯಿತು, ಮುಂದಿನ ಸಲವಾದರೂ ಪಡೆದೇ ಪಡೆಯುತ್ತೇನೆಂಬ ಹಠಕ್ಕೆ ಬಿದ್ದು ಈಗಿನಿಂದಲೇ ತಾಲೀಮು ಶುರುಹಚ್ಚಿಕೊಂಡಿದ್ದಾನೆ. ಈಗಾಗಲೇ ವಿಶ್ವಹಿಂದೂ ಪರಿಷತ್ತಿನ ನಾಯಕನಾಗಿ ಬಿಂಬಿತವಾಗಿರುವ ಈತ ಮುಂದಿನ ಐದು ವರ್ಷದಲ್ಲಿ ಒಂದಿಷ್ಟು ಕೋಮುಗಲಭೆಗಳನ್ನು ನಡೆಸಿ, ಹತ್ತಾರು ಮುಸ್ಲಿಮ್ ಹೆಣಗಳನ್ನು ಉರುಳಿಸಿ ಹಿಂದೂತ್ವ ರಕ್ಷಣೆಯ ಹರಿಕಾರನಾಗಿ ಹೊರಹೊಮ್ಮಿದರೆ




ಗಣೇಶ ಮೆರವಣಿಗೆಗೆ ಪೊಲೀಸರ ಬೆಂಗಾವಲು

ಬಿಜೆಪಿ ಟಿಕೆಟ್ ತನ್ನಿಂದ ತಾನೇ ಸಿಗುತ್ತದೆ ಎಂದು ಲೆಕ್ಕ ಹಾಕಿ ಕಾರ್ಯಪ್ರವೃತ್ತನಾಗಿದ್ದಾನೆ. ರಂಗತಾಲೀಮನ್ನು ಪ್ರಾರಂಭಿಸುವುದಕ್ಕೆ ಈ ಗಣೇಶ ಚತುರ್ಥಿಯೇ ಶುಭಗಳಿಗೆ ಎಂದುಕೊಂಡು ಅವತ್ತೇ ಕಿತಾಪತಿ ಶುರುಹಚ್ಚಿಕೊಂಡಿದ್ದ.

ಹಾಗೇ ನೋಡಿದರೆ, ಕಳೆದ ಐದಾರು ವರ್ಷಗಳಿಂದ ಹುಬ್ಬಳ್ಳಿಯಲ್ಲಿ ಗಣೇಶ ಚತುರ್ಥಿ ತುಸು ಶಾಂತವಾಗಿಯೇ ನಡೆದಿದೆ. ಈ ಬಾರಿ ಆ ರೆಕಾರ್ಡ್ ಮುರಿದು ಹಿಂದೂಗಳ ಹೀರೋ ಆಗುವುದು ಇವನ ಪ್ಲಾನ್‌ನ ಸಾರಾಂಶ. ಅವತ್ತು ಬುಧವಾರ ಗಣೇಶ ಚತುರ್ಥಿ. ತನ್ನ ಸೆಟ್ಲಮೆಂಟ್‌ನ ಪುಡಿ ಗೂಂಡಾಗಳನ್ನೆಲ್ಲಾ ಕಟ್ಟಿಕೊಂಡು, ಅವರಿಗೆ ಕಂಠಪೂರ್ತಿ ಕುಡಿಸಿ ಗಣಪತಿ ತರಲು ಟ್ರ್ಯಾಕ್ಟರ್ ತೆಗೆದುಕೊಂಡು ಹೋಗಿದ್ದಾನೆ. ವಾಪಾಸ್ಸು ಬರುವಾಗ ಈ ಗ್ಯಾಂಗ್‌ನಲ್ಲಿದ್ದ ಶ್ಯಾಮ್ ಜಾಧವ್ ಎಂಬ ಡಾನ್ ಸಹೋದರ ಮಿಥುನ್ ಜಾದವ್, ಶಿನುಕಾಕಾ, ಸೈಂಟಿಸ್ಟ್ ಮಂಜ್ಯಾ ಶಂಕರ ಎಂಬ ರೌಡಿಗಳು ಮಾರ್ಗ ಮಧ್ಯದಲ್ಲಿಯೇ ಗಣಪತಿಯನ್ನು ನಿಲ್ಲಿಸಿ ಚಂದ್ರಕಲಾ ಬಾರ್‌ಗೆ ನುಗ್ಗಿ ಮತ್ತಷ್ಟು ಸುರಾಪಾನ ಮಾಡಿಕೊಂಡು ಅಮಲೇರಿಸಿಕೊಂಡಿದ್ದಾರೆ; ಅಲ್ಲಿ ನೆರೆದಿದ್ದ ಗ್ರಾಹಕರೊಂದಿಗೆ, ಮಾಲಿಕರೊಂದಿಗೆ ಹಿಗ್ಗಾಮುಗ್ಗಾ ಜಗಳವಾಡಿ ಬಿಲ್ಲನ್ನೂ ಕೊಡದೇ ಕೊನೆಗೆ ತೊಂಭತ್ತಾರು ಬಾಟಲಿಗಳಿರುವ ಎರಡು ಹೆಂಡದ ಕೇಸ್‌ಗಳನ್ನು ರಾಬರಿ ಮಾಡಿಕೊಂಡು ಗಣಪತಿಗೆ ಜೈಕಾರ ಹಾಕುತ್ತಾ ಹೊರಟಿದ್ದಾರೆ.

ಗಣಪತಿಯ ಮೆರವಣಿಗೆ ಸಾಗುತ್ತಿದ್ದಂತೆಯೇ ಮಾರ್ಗ ಮಧ್ಯದಲ್ಲಿ ಮುಸ್ಲಿಂ ಆಟೋ ಚಾಲಕನಿದ್ದ ಆಟೋವೊಂದನ್ನು ಪಕ್ಕ ಹಚ್ಚಿ ಅವನೊಂದಿಗೆ ಜಗಳಕ್ಕೆ ಬಿದ್ದಿದ್ದಾರೆ. ಅದರಲ್ಲಿ ಕುಳಿತಿದ್ದ ಮುಸ್ಲಿಮ್ ಮಹಿಳೆಯನ್ನು ಹೊರಕ್ಕೆಳೆದು ಆಟೋವನ್ನು ಪಲ್ಟಿ ಮಾಡಿ ಕೆಳಕ್ಕೆ ಹಾಕಿದ್ದಾರೆ. ಆ ಮಹಿಳೆಯ ಕೊರಳಲ್ಲಿದ್ದ ಸರವನ್ನೂ ಕಿತ್ತುಕೊಂಡು ಕೂಗಾಡಿದ್ದಾರೆ. ಅಷ್ಟುಹೊತ್ತಿಗಾಗಲೇ ಜನ ಸೇರಿದ್ದು ಅತ್ತಿಂದಿತ್ತ-ಇತ್ತಿಂದತ್ತ ಕಲ್ಲುತೂರಾಟ ನಡೆದಿದೆ. ಇಲ್ಲಿ ಒಂದು ವಿಶೇಷ ಎಂದರೆ ಉದ್ದಕ್ಕೂ ಖಾಕಿ ತೊಟ್ಟ ಪೊಲೀಸರು ಸಾಕಷ್ಟು




ಸಂಖ್ಯೆಯಲ್ಲಿದ್ದರೂ ಅವರೆಲ್ಲ ಬಾಯ್ಮುಚ್ಚಿಕೊಂಡಿದ್ದರು!

ಹೇಗೋ ಮುಂದೆ ಸಾಗಿದ ಗಣಪತಿ ಮೆರವಣಿಗೆ ಇನ್ನೇನು ಸ್ಟೇಶನ್ ರೋಡ್ ಹತ್ತಿರ ಇರುವ ಮಸೀದಿಯ ಬಳಿ ಬರಬೇಕೆನ್ನುವಷ್ಟರಲ್ಲಿ ಗಣಪತಿಯ ಅಡಿಯನ್ನು ಮುರಿದು ಹಾಕಿ ಅದನ್ನು ಮುಸ್ಲಿಮರೇ ಮಾಡಿದ್ದಾರೆಂದು ಹಬ್ಬಿಸಿಬಿಟ್ಟರು. ಅಷ್ಟುಹೊತ್ತಿಗೆ ಮಧ್ಯಾಹ್ನದ ನಮಾಜಿಗೆ ಬಂದ ಮುಸ್ಲಿಮರೂ ಸೇರಿಕೊಂಡು ಇನ್ನೇನು ದೊಡ್ಡ ಪ್ರಮಾಣದ ಕೋಮುಗಲಭೆಯಾಗಿ ಪರಿವರ್ತನೆಯಾಗುವ ಹಂತಕ್ಕೆ ಪರಿಸ್ಥಿತಿ ತಿರುಗಿತ್ತು. ಅಷ್ಟರಲ್ಲಿ ಪೊಲೀಸರು ಒಂದಿಷ್ಟು ಜಾಗೃತೆ ವಹಿಸಿ ಅವರೇ ಮತ್ತೊಂದು ಹೊಸ ಗಣಪತಿಯನ್ನು ತಂದುಕೊಟ್ಟು ಪರಿಸ್ಥಿತಿಯನ್ನು ನಿಯಂತ್ರಿಸಿದರು.

ವಾಸ್ತವದಲ್ಲಿ ಬಿಜೆಪಿ ಅಧಿಕಾರದಲ್ಲಿರುವ ಈ ಸಂದರ್ಭದಲ್ಲಿ ರಾಜ್ಯದಲ್ಲಿ ಕೋಮುಗಲಭೆಗಳಾಗುವುದು ಬಿಜೆಪಿ ನಾಯಕರಿಗೆ ಇಷ್ಟವಿಲ್ಲ. ಏಕೆಂದರೆ ಮೊದಲ ಬಾರಿಗೆ ಅಧಿಕಾರ ಸಿಕ್ಕಿರುವುದರಿಂದ ಅದನ್ನು ಸಂಪೂರ್ಣವಾಗಿ ಅನುಭವಿಸುವ ಮಹದಾಶೆ ಅವರೆಲ್ಲರಿಗಿದೆ. ಕೋಮುಗಲಭೆಯಿಂದಾಗಿ ಸರ್ಕಾರ ಪತನವಾದರೆ ಅಧಿಕಾರ ಅನುಭವಿಸುವ ಆಶೆಯೂ ಕಮರಿಹೋಗುತ್ತದಾದ್ದರಿಂದ ಅಂತಹ ಗಲಾಟೆ ನಡೆಯದಂತೆ ಅವರೆಲ್ಲ ಎಚ್ಚರಿಕೆ ವಹಿಸುತ್ತಿದ್ದಾರೆ.

ಆದರೆ ಇದೆಲ್ಲ ಚಂದ್ರಶೇಖರ್ ಗೋಕಾಕ್‌ನಂತಹ ಕಮಂಗಿಗೆ ಎಲ್ಲಿ ಅರ್ಥವಾಗಬೇಕು? ಮುಂದಿನ ಚುನಾವಣೆಯ ಹೊತ್ತಿಗೆ ಹಿಂದೂಗಳ ಹೀರೋ ಆಗಿ ಹೊರಹೊಮ್ಮಿ ಟಿಕೆಟ್ ಗಿಟ್ಟಿಸುವ ತವಕದಲ್ಲಿರುವ ಆತನಿಗೆ ಏನಾದರೂ ಮಾಡಿ ಗಲಭೆಯೆಬ್ಬಿಸಿಯೇ ತೀರಬೇಕೆಂಬ ಹಠ. ಆದ್ದರಿಂದಲೇ ತನ್ನ ರೌಡಿಪಡೆಯನ್ನು ಕಟ್ಟಿಕೊಂಡು ಸೀದಾ ಸೆಟ್ಲಮೆಂಟಿನ ಗ್ರೌಂಡಿಗೆ ಹೋಗಿ "ಮುಸ್ಲಿಮರು ರಮ್ಜಾನ್ ಹೇಗೆ ಆಚರಿಸುತ್ತಾರೋ ನೋಡೇ ಬಿಡೋಣ" ಎಂದು ತನ್ನ ಕಪಿ ಸೈನ್ಯವನ್ನು ಹುರಿದುಂಬಿಸಿದ್ದಾನೆ. ಬಿಜೆಪಿಯ ಲೀಡರ್‌ಶಿಪ್ ಗೆಲ್ಲುತ್ತೋ ಅಥವಾ ಗೋಕಾಕ್‌ನಂತಹ ಕಮಂಗಿ ಗೆಲ್ಲುತ್ತೋ ಕಾದುನೋಡಬೇಕಷ್ಟೆ.




ಎನ್.ಶಿವಕುಮಾರ್

ಚಂದ್ರಶೇಖರ್ ಗೋಕಾಕ್ ಎಂಬ ಈ ಕೊಳ್ಳಿದೆವ್ವನ ಗಣಪತಿ ಮೆರವಣಿಗೆಯ ಇನ್ನೊಂದು ವಿಶೇಷ ಎಂದರೆ ಇವನ ಮೇಲೆ ಒಂದಿಷ್ಟು ವಿಶ್ವಾಸವಿರಿಸಿಕೊಂಡು ನಗರದ ವಿವಿಧ ಭಾಗಗಳಿಂದ ಬಂದಿದ್ದ ವಿಶ್ವಹಿಂದೂ ಪರಿಷತ್, ಭಜರಂಗದಳ, ಆರೆಸ್ಸೆಸ್‌ನ ಕಾರ್ಯಕರ್ತರು ಇವನಾಡುತ್ತಿದ್ದ ಮಂಗಾಟಕ್ಕೆ ಬೆಸ್ತುಬಿದ್ದು ವಾಪಾಸ್ಸು ಹೋಗಿದ್ದಾರೆ. ಅವರಲ್ಲಿ ಹೆಚ್ಚೂ ಕಡಿಮೆ 10-15 ಜನ ಕಾರ್ಯಕರ್ತರು ತಮ್ಮ ಮೊಬೈಲ್ ಫೋನುಗಳನ್ನು ಕಳೆದುಕೊಂಡಿದ್ದಾರೆ. ಚಂದ್ರಶೇಖರ್ ಗೋಕಾಕ್ ತನ್ನ ಸೋದರನಂತೆ ಸೆಟ್ಲಮೆಂಟಿನ ಕಳ್ಳಕಾಕರನ್ನೆಲ್ಲಾ ಕರೆತಂದಿದ್ದ ಎಂದರೆ ಇನ್ನೇನು ಅರ್ಥ ಹೇಳಿ?

■ ಹುಬ್ಬಳ್ಳಿ ಮಾನವ

ಪುಸ್ತಕ ಲೋಕ



ಪಾಕ ಕ್ರಾಂತಿ
ಪ್ರಕಾಶಕರು :
ಪುಸ್ತಕ ಪ್ರಕಾಶನ
91, 9ನೇ ಮುಖ್ಯ ರಸ್ತೆ
ಸರಸ್ವತಿಪುರಂ, ಮೈಸೂರು-570 009
ಬೆಲೆ : ರೂ. 60

ಇತ್ತೀಚೆಗೆ ದಿ. ಪೂರ್ಣಚಂದ್ರ ತೇಜಸ್ವಿಯವರ ಲೇಖನಗಳ ಸಂಗ್ರಹವೊಂದು ಪುಸ್ತಕದ ರೂಪದಲ್ಲಿ ಮಾರುಕಟ್ಟೆಗೆ ಬಂದಿದೆ. ಅವುಗಳಲ್ಲಿ ಪುಸ್ತಕದ ಶೀರ್ಷಿಕೆಯಾಗಿರುವ 'ಪಾಕ ಕ್ರಾಂತಿ' ಎಂಬ ಲೇಖನವಂತೂ ತೇಜಸ್ವಿಯವರ ಎಂದಿನ ಶೈಲಿಯಲ್ಲಿ ಓದುಗರನ್ನು ರಂಜಿಸುತ್ತದೆ. ಆ ಲೇಖನದ ಆರಂಭದಲ್ಲಿ ತೇಜಸ್ವಿಯವರ ಮಡದಿ ಕೆಲದಿನಗಳ ಕಾಲ ಬೇರೆ ಊರಿಗೆ ಹೋಗಿದ್ದಾರೆ. ಆದರೆ ಹೋಗುವ ಮುನ್ನ ಅಡಿಗೆ ಮನೆಯನ್ನು ನಿಭಾಯಿಸುವ ಬಗ್ಗೆ ಒಂದಿಷ್ಟು ಸಲಹೆಗಳನ್ನು, ಎಚ್ಚರಿಗಳನ್ನು ಕೊಟ್ಟು ಹೋಗಿರುತ್ತಾರೆ. ಆದರೆ ಅವುಗಳನ್ನು ನಿರ್ಲಕ್ಷಿಸುವ ತೇಜಸ್ವಿ ಪಾಕಕ್ರಾಂತಿಯನ್ನೇ ಸೃಷ್ಟಿಸಲು ಸಜ್ಜಾಗುತ್ತಾರೆ, ಆ ಕ್ರಿಯೆಯಲ್ಲಿ ಹಲವಾರು ಎಡವಟ್ಟುಗಳನ್ನು ಮಾಡಿಕೊಳ್ಳುತ್ತಾರೆ.

ನಮ್ಮ ಓದುಗರಿಗೆ ಇಲ್ಲಿ ಆ ಲೇಖನದ ಕೆಲ ಭಾಗಗಳನ್ನು ಆಯ್ದು ಕೊಟ್ಟಿದ್ದೇವೆ. ಎಂಜಾಯ್ ಮಾಡಿ.

ಮಡದಿ ಮನೆಯೊಳಗಿಲ್ಲದಿದ್ದರೆ...

******

"ಯಾಕೆ ಸಾರ್? ನಿಮ್ಮ ಮಿಸೆಸ್ಸು ಮನೇಲಿಲ್ವ?" ಎಂದು ನಾನು ಮೂರನೆ ಸಾರಿ ಪ್ರೆಷರ್‌ಕುಕ್ಕರಿನ ಗ್ಯಾಸ್ಕೆಟ್ಟು ಸೇಫ್ಟಿವಾಲ್ವ್‌ಗಳನ್ನು ಕೊಳ್ಳಲು ಹೋದಾಗ ಅಂಗಡಿಯ ಮಾರ್ವಾಡಿ ಹುಡುಗಿ ಕೇಳಿದಳು. ನನಗೆ ಆಶ್ಚರ್ಯ ಆಯ್ತು. ಕೈ ನೋಡಿ ಕೆಲವರು ಭವಿಷ್ಯ ಹೇಳುವ ಹಾಗೆ ಇವಳು ಅಂಗಡಿಗೆ ಬರುವ ಗಿರಾಕಿಗಳು ಏನೇನು ಕೊಳ್ಳುತ್ತಾರೆ ಎನ್ನುವುದರ ಮೇಲೆ ಅವರ ಮನೆಯ ಸ್ಥಿತಿಗತಿಗಳನ್ನು ಕರಾರುವಾಕ್ಕಾಗಿ ಊಹಿಸುತ್ತಿದ್ದಾಳಲ್ಲ! ಎಂದು. "ನಿಮಗೆ ಹೇಗೆ ಗೊತ್ತಾಯ್ತು?" ಎಂದು ಕುತೂಹಲದಿಂದ ಕೇಳಿದೆ. "ಗ್ಯಾಸ್ಕೆಟ್‌ಗಳು ವರ್ಷಗಟ್ಟಲೆ ಆದರೂ ಹಾಳಾಗೋದಿಲ್ಲ ಸಾರ್. ನೀವು ಗಂಟೆಗೆ ಒಂದೊಂದು ತಗೊಂಡು ಹೋಗ್ತಿರೋದನ್ನು ನೋಡಿ ಹಾಗೆ ಊಹಿಸಿದೆ. ಕುಕ್ಕರಿಗೆ ನೀವು ಸಾಕಷ್ಟು ನೀರು ಹಾಕ್ತಿಲ್ಲ ಅಂತ ಕಾಣ್ತದೆ. ನೀರು ಖಾಲಿಯಾದರೆ ಪಾತ್ರೆ ಕಾಯ್ದು ಗ್ಯಾಸ್ಕೆಟ್ಟು ಸೇಫ್ಟಿವಾಲ್ವ್ ಹಾಳಾಗುತ್ತೆ, ನೀರು ಸರಿಯಾಗಿ ಲೆಕ್ಕಾಚಾರ ಮಾಡಿ ಹಾಕಬೇಕು" ಎಂದಳು.

ನನ್ನ ಶ್ರೀಮತಿ "ಪ್ರೆಷರ್ ಕುಕ್ಕರ್ ಮೂರು ಸಾರಿ ಶಿಳ್ಳೆ ಹೊಡೆದ ಕೂಡಲೆ ಇಳಿಸಿ. ಅನ್ನ ಆಗಿರುತ್ತೆ" ಎಂದು ಹೇಳಿದ್ದಳು. ನಾನಂತೂ ಅದನ್ನೇ ಗಮನದಲ್ಲಿಟ್ಟುಕೊಂಡು ಓದುತ್ತಾ ಕುಳಿತಿದ್ದೆ. ಏನು ಮಾಡುವುದು! ಕುಕ್ಕರ್ ಎರಡೇ ಸಾರಿ ಶಿಳ್ಳೆ ಹೊಡೆದು ಸುಮ್ಮನಾಯ್ತು. ಎಷ್ಟು ಹೊತ್ತು ಕಾದರೂ ಮೂರನೆ ಸಾರಿ ಶಿಳ್ಳೆ ಹೊಡೆಯಲೇ ಇಲ್ಲ. ಏಕೆಂದು ನೋಡಹೋದರೆ ಗ್ಯಾಸ್ಕೆಟ್ ಕರಗಿ ಮುಚ್ಚಳಕ್ಕೂ ಪಾತ್ರೆಗೂ ಅಂಟಿಕೊಂಡಿತ್ತು. ಮಾರ್ವಾಡಿ ಹುಡುಗಿ ಹೇಳಿದ್ದು ನಿಜವಿರಬೇಕು. ಕುಕ್ಕರಿನ ನೀರು ಬತ್ತಿತ್ತೆ ಹೊರತು ಅನ್ನ ಏನು ಹಾಳಾದ ಹಾಗೆ ಕಾಣಲಿಲ್ಲ. ಆದರೆ ಗ್ಯಾಸ್ಕೆಟ್ ಬಿಸಿಗೆ ಕಾದು ಕರಗಿದ್ದರಿಂದ ಅಡಿಗೆಮನೆಯೆಲ್ಲಾ ರಬ್ಬರ್ ಸುಟ್ಟ ವಾಸನೆಯಾಗಿ ಒಂದು ದಿನದ ಮಟ್ಟಿಗೆ ನಾನು ಅದನ್ನು ಸಹಿಸಬೇಕಾಯ್ತು. ಇನ್ನು ಮೇಲೆ ಮಾರ್ವಾಡಿ ಹುಡುಗಿ ಹೇಳಿದ ಹಾಗೆ ಅನ್ನಕ್ಕೆ ಎಷ್ಟು ನೀರು ಅಗತ್ಯ ಎಂದು ಲೆಕ್ಕಾಚಾರ ಮಾಡಿ ಹಾಕಿದರೆ ಸರಿ ಎಂದುಕೊಂಡೆ. ಆದರೆ ಈ ಲೆಕ್ಕಾಚಾರ ಹೇಗೆ ಮಾಡುವುದು. ಯಾವುದರಿಂದ ಯಾವುದನ್ನು ಗುಣಿಸಿ ಕೂಡಿ ಕಳೆದು ಭಾಗಿಸುವುದು?

ಇದನ್ನೆಲ್ಲಾ ಯೋಚಿಸಿದಾಗ ಅಡುಗೆ ಎನ್ನುವುದು ಕಲೆಯೋ ವಿಜ್ಞಾನವೋ ಎಂದು ನನಗೆ ಅನುಮಾನ ಶುರುವಾಯ್ತು. ಪತ್ರಿಕೆಗಳಲ್ಲಿ ಬಣ್ಣಬಣ್ಣದ ತಿಂಡಿಗಳ ಜಾಹೀರಾತುಗಳನ್ನೂ, ಫೋಟೋಗಳನ್ನೂ, ಹೋಟೆಲುಗಳಲ್ಲಿ ನೀರುಳ್ಳಿ ಸೌತೇಕಾಯಿಗಳನ್ನು ಕುಯ್ದು ರಂಗೋಲಿ ರೀತಿ ನಾನಾ ಆಕಾರಗಳಲ್ಲಿ ಜೋಡಿಸಿರುವುದನ್ನೂ ನೋಡಿದ್ದ ನಾನು ಅಡುಗೆ ಎನ್ನುವುದು ಕಲೆ ಎಂದೇ ಪರಿಭಾವಿಸಿದ್ದೆ. ಬ್ರೆಡ್ ಅಂಗಡಿಯಲ್ಲಿ ಕೇಕುಗಳ ಮೇಲೆಲ್ಲಾ ಎಲೆಹೂವು ಹಣ್ಣುಗಳನ್ನು ಬಿಡಿಸಿರುವುದು ನೋಡಿದರೆ ಅಡುಗೆ ಎನ್ನುವುದು ಕುಶಲ ಕಲೆ ಎಂದೇ ಅಭಿಪ್ರಾಯ ಮೂಡುತ್ತದೆ. ಆದರೆ ಈಗ ಅಡುಗೆ ಮನೆಗಳಿಗೆ ಪ್ರೆಷರ್ ಕುಕ್ಕರ್‌ಗಳೂ ಮಿಕ್ಸಿಗಳೂ ಮೈಕ್ರೋ ಓವನ್‌ಗಳೂ ಬರತೊಡಗಿ ಅಡುಗೆ ಮನೆ ತನ್ನ ಕಲಾತ್ಮಕತೆಯನ್ನು ಕಳೆದುಕೊಂಡು ವಿಜ್ಞಾನಿಗಳ ಪ್ರಯೋಗಶಾಲೆ ತರ ಆಗಿದೆ. ಪ್ರೆಷರ್ ಕುಕ್ಕರ್ ಒಳಗೆ ಇರುವ ಅಕ್ಕಿ ಪ್ರಮಾಣ ಲೆಕ್ಕ ಹಾಕಿ ಇಷ್ಟೇ ನೀರಿಡಬೇಕೆಂದು ನಿರ್ಧರಿಸಿ, ಅದು ಇಷ್ಟೇ ಸಾರಿ ಶಿಳ್ಳೆ ಹೊಡೆಯುತ್ತಲೂ ಇಳಿಸಬೇಕೆಂದಾದರೆ ಅಡುಗೆಯನ್ನು ಕಲೆ ಎಂದು ಹೇಗೆ ಕರೆಯುವುದು. ಅದೀಗ ಹೆಚ್ಚುಕಡಿಮೆ ಕಾರ್ಖಾನೆಗಳ ಅಥವಾ ವಿಜ್ಞಾನಿಗಳ ಪ್ರಯೋಗಶಾಲೆಗಳಂತೆ ಮಾರ್ಪಾಡಾಗುತ್ತಿಲ್ಲವೆ. ನನಗೆ ಲೆಕ್ಕಾಚಾರ ಗಣಿತ ಎಂದರೆ ಆಗುವುದಿಲ್ಲ, ನಾನು ಕಾಲೇಜಿನಲ್ಲಿ ಸೈನ್ಸ್ ಓದದೆ ಆರ್ಟ್ಸ್ ತೆಗೊಂಡಿದ್ದೇ ಈ ಲೆಕ್ಕ ಮಾಡುವ ತಲೆನೋವಿನಿಂದ ತಪ್ಪಿಸಿಕೊಳ್ಳುವುದಕ್ಕೆ. ಇನ್ನು ಅಡುಗೆಗೆ. ಅನ್ನ ಬೇಯಿಸುವುದಕ್ಕೆ, ಸಾರು ಕುದಿಸುವುದಕ್ಕೆಲ್ಲಾ ಕಂಪ್ಯೂಟರ್ ಇಟ್ಟುಕೊಂಡು ಲೆಕ್ಕ ಮಾಡಬೇಕೆಂದಾದರೆ ನನ್ನ ಕತೆ ಮುಗಿದ ಹಾಗೆಯೇ ಲೆಕ್ಕ. ಪ್ರೆಷರ್‌ಕುಕ್ಕರಿನ ಗ್ಯಾಸ್ಕೆಟ್ ಮತ್ತು ಸೇಫ್ಟಿವಾಲ್ವ್‌ಗಳನ್ನು ಜೋಡಿಸುತ್ತ ನನಗೆ ಯಾಕೋ ಪ್ರೆಷರ್‌ಕುಕ್ಕರಿನ ಮೇಲೆ ಸಿಟ್ಟು ಬರತೊಡಗಿತು. ಅಡುಗೆಮನೆಯಲ್ಲಿ ಗಣಿತದ ಅಗತ್ಯ ಸೃಷ್ಟಿಸುತ್ತಿರುವ ಎಲ್ಲ ವಸ್ತುಗಳನ್ನೂ ಉಚ್ಚಾಟಿಸಿ ಮತ್ತೆ ಅಡುಗೆ ಮನೆಯನ್ನು ಕಲಾವಿದನ ಸ್ಟುಡಿಯೋ ಆಗಿ ಮಾರ್ಪಾಡಿಸಿ ಅಡುಗೆ ಮಾಡುವ ಹೆಂಗಸರಿಗೆಲ್ಲಾ ಕಲಾವಿದರ ಸ್ಥಾನಮಾನ ಕೊಡುವುದೇ ಸರಿಯಾದುದು ಎಂದು ಅಂದುಕೊಂಡೆ.


******

ರಾತ್ರಿ ದೀಪ ಇರಲಿಲ್ಲ, ಕಗ್ಗತ್ತಲು. ನಮ್ಮೂರಲ್ಲಿ ಕರೆಂಟು ಹೋದರೆ ಕತ್ತಲು ಹೇಗೆ ಕವಿಯುತ್ತದೆ ಎನ್ನುವುದು ನೋಡಿದರೇ ಅರ್ಥವಾಗುವುದು. ಪೇಟೆಗಳಲ್ಲಿ ಬೀದಿ ದೀಪಗಳೋ ಅಥವಾ ಅಕ್ಕಪಕ್ಕದ ಸಾಲಿನ ದೀಪಗಳೋ ಇಲ್ಲವೇ ಓಡಾಡುವ ವಾಹನದ ದೀಪಗಳೋ ಕಣ್ಣಿಗೆ ಬೀಳುವುದರಿಂದ ಬೆಳಕೆನ್ನುವುದು ಹೇಗಿರುತ್ತದೆಂದು ಮರೆಯುವುದಿಲ್ಲ. ಆದರೆ ಇಲ್ಲಿ ಕರೆಂಟು ಹೋದರೆ ಇದ್ದಕ್ಕಿದ್ದಂತೆ ಇಡೀ ಪ್ರಪಂಚ ಇಂಕಿನ ಸಮುದ್ರಕ್ಕೆ ಧುಮುಕಿ ಮುಳುಗಿ ಹೋದಂತೆ ಕಾಣುತ್ತದೆ. ಬೆಳಕೆನ್ನುವುದರ ಅರಿವೇ ಮರೆತುಹೋಗುವಂಥ ಗಾಢಾಂಧಕಾರ! ಬೆಂಕಿಪಟ್ಟಿಗೆ ಮೊಂಬತ್ತಿ ಹುಡುಕಿಕೊಂಡು ಗೋಡೆ ತಡವುತ್ತ ಪಾತ್ರೆ, ಪರಡಿ ಉರುಳಾಡಿಸುತ್ತಾ ಓಡಾಡಬೇಕು. ಕುರ್ಚಿ ಮೇಜುಗಳ ಮೈದಡವಿ ಗುರುತಿಸಿ ಮನೆಯ ಯಾವ ಭಾಗದಲ್ಲಿದ್ದೇನೆಂದು ಲೆಕ್ಕ ಹಾಕಬೇಕು. ಬೆಂಕಿ ಪೆಟ್ಟಿಗೆ ಇಟ್ಟಲ್ಲಿ ಇಲ್ಲದಿದ್ದರಂತೂ ಮುಗಿದೇಹೋಯ್ತು.

ನಾನು ಕತ್ತಲಲ್ಲಿ ಊಟ ಮಾಡುತ್ತ ನನ್ನ ಪುರಾತನ ಸಾರನ್ನು ಸರಿಯಾಗಿ ನೋಡಲು ಮೊಂಬತ್ತಿ ಬೆಳಕಿನಲ್ಲಿ ಸಾಧ್ಯವಾಗಲಿಲ್ಲ, ಅದರೊಳಗೆ ಅಸ್ಪಷ್ಟವಾಗಿ ಕಂಡ ಕಪ್ಪುಚುಕ್ಕೆಗಳನ್ನು ಸಾಸಿವೆ ಎಂದೇ ತಿಳಿದೆ. ಆದರೂ ಊಟ ಮಾಡುತ್ತಾ ಒಗ್ಗರಣೆಗೆ ಇಷ್ಟೊಂದು ಸಾಸುವೆ ಯಾಕೆ ಹಾಕಿದೆ ಎಂದು ಒಮ್ಮೆ ಯೋಚಿಸಿದೆ.

ಊಟ ಎಲ್ಲಾ ಮುಗಿಯುವ ಹೊತ್ತಿಗೆ ಇದ್ದಕ್ಕಿದ್ದಹಾಗೆ ಕರೆಂಟ್ ಬಂತು. ಸ್ವಿಚ್ಚು ಮೊದಲೇ ಹಾಕಿದ್ದರಿಂದ ಝಗ್ಗನೆ ಊಟದ ಮೇಜಿನ ಮೇಲೆ ಬಿಸಿಲು ಬಿದ್ದಂತೆ ಬೆಳಕು ಪ್ರವಹಿಸಿತು. ಸಾರಿನೊಳಗಿನ ಸಾಸಿವೆಗಳತ್ತ ಕಣ್ಣು ಹಾಯಿಸಿದರೆ ಸಾಸಿವೆಗಳಿಗೆಲ್ಲಾ ಕೈಕಾಲು ಮೀಸೆಗಳಿವೆ. ಕೆಲವು ಇನ್ನೂ ಜೀವಂತವಾಗಿ ಸಾರಿನೊಳಗೆ ಈಜಾಡುತ್ತಿವೆ. ಸಾರಿನ ಪಾತ್ರೆಯ ಮೇಲೆಲ್ಲಾ ನೂರಾರು ಇರುವೆಗಳು ಗಡಿಬಿಡಿಯಲ್ಲಿ ಭರದಿಂದ ಓಡಾಡುತ್ತಿವೆ. ಮೊಂಬತ್ತಿ ಬೆಳಕಿನಲ್ಲಿ ಇವುಗಳ ಅರಿವೇ ಇಲ್ಲದಂತೆ ಊಟ ಮಾಡಿದ್ದೇನೆ. ಸುಮಾರು ಇರುವೆಗಳನ್ನು ತಿಂದು ತೇಗಿರಬಹುದು!

ಇರುವೆ ತಿಂದೆನೆಂದು ನನಗೇನೂ ಬೇಸರವಾಗಲಿಲ್ಲ. ಏಕೆಂದರೆ ಅಂಥ ದುರ್ವಾಸನೆಯ ಒಣಮೀನನ್ನೇ ನಾಯಿಮರಿ ಆತ್ಮಾಸಕ್ತಿಯಿಂದ ಊಟ ಮಾಡಿರಬೇಕಾದರೆ ಚಿಕ್ಕ ಚುಕ್ಕೆಗಳಂತಿರುವ ಈ ಇರುವೆಗಳನ್ನು ಆಕಸ್ಮಾತ್ ನುಂಗಿರುವುದರಿಂದ ನನಗೇನೂ ಜಾತಿ ಕೆಡುವುದಿಲ್ಲ. ಆದರೆ ನಾಯಿಮರಿ ಕೊಳೆತ ಕಪ್ಪೆ ಇಲಿಗಳನ್ನು ತಿನ್ನುವ ಹಾಗೆ ನನಗೆ ಇರುವೆ ರುಚಿ ಹಲ್ಲಿಗೆ ಇಳಿದು ಕೊನೆಗೆ ಇರುವೆ ನಂಚಿಕೊಳ್ಳದೆ ಅನ್ನವೇ ಸೇರದ ಹಾಗಾದರೆ ಏನಪ್ಪಾ ಮಾಡುವುದು ಎಂದು ಚಿಂತೆಯಾಯ್ತು. ಹಾಳು ಇರುವೆ ಸಾರಿನ ಬಗ್ಗೆ ಅಸಹ್ಯ ಪಡಲು ಯತ್ನಿಸಿದೆ. ಆದರೆ ಅಂಥ ಯಾವ ಭಾವನೆಗಳೂ ನನಗೆ ಬರದೆ ನನ್ನ ಕೀಳು ಅಭಿರುಚಿಯ ಬಗ್ಗೆ ನನಗೇ ಬೇಸರವೆನ್ನಿಸಿತು. ■



ಜನ

ಸಾರಾ ಪ್ಯಾಲಿನ್

ಈಕೆಗಿನ್ನೂ 44 ವರ್ಷ ವಯಸ್ಸು. ಆದರೆ ...ವರು ಮಕ್ಕಳ ತಾಯಿಯಾದ ಈಕೆ ನಾಲ್ಕು ...ಗಳ ಹಿಂದೆ ತನ್ನ ಐದನೇ ಕೂಸಿಗೆ ಜನ್ಮ ...ವಿದ್ದಾಳೆ. ಇನ್ನು ನಾಲ್ಕು ತಿಂಗಳಲ್ಲಿ ಅಜ್ಜಿಯೂ ...ಗಲಿದ್ದಾಳೆ! (ಅವಳ 17 ವರ್ಷಹರೆಯದ ...ಮಗಳು ಬ್ರಿಸ್ಟಲ್ ಈಗ ಐದು ತಿಂಗಳ ಗರ್ಭಿಣಿ)

ತನ್ನನ್ನು ಗೃಹಿಣಿ ಮತ್ತು ತಾಯಿ ಎಂದೇ ಗುರುತಿಸಿಕೊಳ್ಳುವ ಈಕೆ ಅಮೆರಿಕದ ರಾಜ್ಯವೊಂದರ ಗವರ್ನರ್ ಕೂಡ ಹೌದು. ...ಪುರುಷ ಪ್ರಧಾನ ಸಮಾಜದ ವಿರುದ್ಧ ಸೆಣಸಾಡುವೆ ಎನ್ನುವ ಈಕೆ ಹಿಂದೊಮ್ಮೆ ಅದೇ ಪುರುಷ ಪ್ರಧಾನ ವ್ಯವಸ್ಥೆ ಸೃಷ್ಟಿಸಿರುವ ...ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸಿ ಗೆದ್ದಿದ್ದೂ ಉಂಟು.

ಈಕೆಯ ಹೆಸರು ...ಸಾರಾ ಪ್ಯಾಲಿನ್.

ಮೊನ್ನೆ ಮೊನ್ನೆ ...ನಕ ಅಮೆರಿಕದ ...ಜೆಗಳಿಗೆ, ...ಜಕಾರಣಿಗಳಿಗೆ ...ಗೊತ್ತೇ ಇಲ್ಲದಿದ್ದ ಈಕೆ ಈಗ ಎಲ್ಲರ ಗಮನ ...ಸೆಳೆದಿದ್ದಾಳೆ. ಅದಕ್ಕೆ ...ಕಾರಣ ಅಮೆರಿಕದ ...ರಿಪಬ್ಲಿಕನ್ ಪಕ್ಷದ ...ಅಧ್ಯಕ್ಷ ಪದವಿ ...ಆಕಾಂಕ್ಷಿ ಜಾನ್ ...ಮೆಕೈನ್ ಸಾರಾಳನ್ನು ...ಉಪಾಧ್ಯಕ್ಷ ಸ್ಥಾನಕ್ಕೆ ತನ್ನ ...ಜೊತೆ ಸ್ಪರ್ಧಿಸಲು ಆಯ್ಕೆ ಮಾಡಿರುವುದು.



ತಾನು ಬೇಟೆಯಾಡಿದ ಕರಡಿ ಚರ್ಮದ ಮೇಲೆ ಕೂತಿರುವುದು

ಸಾರಾ ಪ್ಯಾಲಿನ್ ವಿಚಿತ್ರ ಮಹಿಳೆ. ಚಿಕ್ಕವಳಿದ್ದಾಗಿನಿಂದಲೂ ಬೇಟೆ ಆಡುವ ಹವ್ಯಾಸವನ್ನು ಬೆಳೆಸಿಕೊಂಡಿರುವ ಈಕೆ ಇವತ್ತಿಗೂ ತನ್ನ ಗಂಡ ಮತ್ತು ಸ್ನೇಹಿತರ ಜೊತೆ ಬೇಟೆ ಆಡುತ್ತಾಳೆ. ಬಂದೂಕಿನಿಂದ ಕರಾರುವಾಕ್ಕಾಗಿ ಗುಂಡನ್ನು ಹಾರಿಸಿ ಅಮಾಯಕ ಕರಡಿ, ಹೆಗ್ಗಡವೆ ಮತ್ತು ಇತರೆ ಕಾಡು ಪ್ರಾಣಿಗಳನ್ನು ಕೊಲ್ಲುತ್ತಾಳೆ.



ತಾನು ಕೊಂದಿರುವ ಹೆಗ್ಗಡವೆ ಮುಂದೆ

ಹೀಗೆ ಬೇಕಾಬಿಟ್ಟಿ ಪ್ರಾಣಿಗಳನ್ನು ಕೊಲ್ಲುವ, ಅದರಲ್ಲೇ ಸಂತೋಷ ಕಾಣುವ ಈಕೆ ಯಾವುದೇ ಕಾರಣಕ್ಕೂ ಮಹಿಳೆಯರು ಗರ್ಭಪಾತ ಮಾಡಿಸಿಕೊಳ್ಳಬಾರದು ಎಂದು ವಾದಿಸುತ್ತಾಳೆ. ಗರ್ಭದಲ್ಲಿರುವ ಭ್ರೂಣಕ್ಕಿಂತಲೂ ಮಹಿಳೆಯರಿಗೆ ತಮ್ಮ ದೇಹದ ಮೇಲೆ, ಬದುಕಿನ ಮೇಲೆ ಅಧಿಕಾರ ಇಲ್ಲ ಎಂದೇ ನಂಬಿದ್ದಾಳೆ.

ಇವತ್ತು ಅಮೆರಿಕದಲ್ಲಿ ಪ್ರತಿ ಗಂಟೆಗೆ ಒಬ್ಬರು ಬಂದೂಕಿನ ಗುಂಡೇಟಿಗೆ ಬಲಿಯಾಗುತ್ತಿದ್ದಾರೆ. ತಲೆ ಕೆಟ್ಟ ಕೆಲವರು ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಮೆಷಿನ್ ಗನ್ ಪ್ರಯೋಗಿಸಿ ಸಹಸ್ರಾರು ವಿದ್ಯಾರ್ಥಿಗಳನ್ನು ಬಲಿತೆಗೆದುಕೊಳ್ಳುತ್ತಿದ್ದಾರೆ. ಆದರೂ ಈ ಸಾರಾ ಬೇಟೆ ಆಡುವುದಕ್ಕೆ ಎಲ್ಲರಿಗೂ ಗನ್ ಹೊಂದುವ ಹಕ್ಕು ಇರಬೇಕೆಂಬ ನಿಲುವನ್ನು ಹೊಂದಿದ್ದಾಳೆ.

ಹಾಗೆಯೇ ಇವತ್ತು ಅಮೆರಿಕದಲ್ಲಿ ಅದೆಷ್ಟೋ ಹುಡುಗಿಯರು ಅಪ್ರಾಪ್ತ ವಯಸ್ಸಿನಲ್ಲೇ ಗರ್ಭ ಧರಿಸುತ್ತಿದ್ದರೂ, ಅದನ್ನು ತಪ್ಪಿಸಲು ಲೈಂಗಿಕ ಶಿಕ್ಷಣ ಅಗತ್ಯವಿಲ್ಲ ಎನ್ನುತ್ತಾಳೆ. ಏಡ್ಸ್ ಎಂಬ ಮಾರಿ ಅಲ್ಲಿನ ಬಹಳಷ್ಟು ಯುವಕಯುವತಿರನ್ನು ಬಲಿತೆಗೆದುಕೊಳ್ಳುತ್ತಿದ್ದರೂ ಕಾಂಡೋಮ್‌ಗಳ ಬಳಕೆಯನ್ನು ಸರಕಾರ ಪ್ರೋತ್ಸಾಹಿಸಬಾರದು ಎನ್ನುತ್ತಾಳೆ.

ಅಪ್ರಾಪ್ತ ವಯಸ್ಸಿನಲ್ಲಿ ಹುಡುಗಿಯರು ಗರ್ಭವತಿಯಾದರೆ, ಯುವಜನರಿಗೆ ಏಡ್ಸ್ ಸೋಂಕು ತಗುಲಿದರೆ ಅದಕ್ಕೆ ಅವರ ಅಜ್ಞಾನ ಕಾರಣವಲ್ಲ, ಬದಲಾಗಿ ಅವರಿಗೆ ಅವರ ತಂದೆ-ತಾಯಿ ಸರಿಯಾದ ಮಾರ್ಗದರ್ಶನ ನೀಡದಿದ್ದದ್ದು, ಬೇಜವಾಬ್ದಾರಿ ತೋರಿಸಿದ್ದೇ ಕಾರಣ ಎನ್ನುತ್ತಾಳೆ.


ಇಂತಹ ಸಾರಾಳ ಮಗಳಾದ 17 ವರ್ಷದ ಅವಿವಾಹಿತೆ ಮಗಳು ಬ್ರಿಸ್ಟಲ್ ಈಗ ಐದು ತಿಂಗಳ ಗರ್ಭವತಿ. ಅದಕ್ಕೆ ಕಾರಣ ಆಕೆಗೆ ಲೈಂಗಿಕ ಶಿಕ್ಷಣ ಇಲ್ಲದಿದ್ದದ್ದೋ? ಅಥವಾ ಸಾರಾಳೆ ವಾದಿಸುವಂತೆ ಅವಳ ತಂದೆ ತಾಯಿ ಸರಿಯಾದ ಮಾರ್ಗದರ್ಶನ ನೀಡದಿದ್ದದ್ದೋ? ಅಥವಾ ಸಾರಾ ಮತ್ತಾಕೆಯ ಗಂಡ ಬೇಜವಾಬ್ದಾರಿಯಿಂದ ವರ್ತಿಸಿದ್ದೋ?

ಸಾರಾಳನ್ನು ಉಪಾಧ್ಯಕ್ಷ ಚುನಾವಣೆಗೆ ಆಯ್ಕೆ ಮಾಡುತ್ತಿದ್ದಂತೆ ಆಕೆಯ ಮಗಳ ಗರ್ಭಾವಸ್ಥೆ ಸ್ಥಿತಿ ಬಹಿರಂಗಗೊಂಡಿತು. ಆಗ ಸಾರಾ "ನನ್ನ ಮಗಳು ಮತ್ತು ಅವಳ ಗರ್ಭದಲ್ಲಿರುವ ಶಿಶುವಿನ ತಂದೆ ಸದ್ಯದಲ್ಲೇ ಮದುವೆ ಆಗಲಿದ್ದಾರೆ, ಅವರಿಬ್ಬರಿಗೂ ನನ್ನ ಬೆಂಬಲವಿದೆ" ಎಂದು ಘೋಷಿಸಿದಳು.

ಆದರೆ ಸಾರಾಳ ದುರಾದೃಷ್ಟವೋ ಏನೋ ಇನ್ನು ನಾಲ್ಕು ತಿಂಗಳಲ್ಲಿ ಆಕೆಯನ್ನು 'ಅಜ್ಜಿ'ಯಾಗಿಸಲಿರುವ ಬ್ರಿಸ್ಟಲ್‌ಳ ಬಾಯ್‌ಫ್ರೆಂಡ್ ತನ್ನ ವೆಬ್‌ಸೈಟ್‌ನಲ್ಲಿ "ನನಗಂತೂ ಮಕ್ಕಳು ಬೇಡವೇ ಬೇಡ" ಎಂದು ಪ್ರಕಟಿಸಿದ್ದಾನೆ.

ಯಾರಿಗೆ ಗೊತ್ತು, ಆತ ಅಧಿಕೃತವಾಗಿ ತನ್ನ ಅಳಿಯ ಆಗಲೇಬೇಕೆಂದು ಸಾರಾ ತನ್ನ ಸಂಗ್ರಹದಲ್ಲಿರುವ ಹಲವಾರು ಬಂದೂಕುಗಳನ್ನೂ ಉಪಯೋಗಿಸಬಹುದು!

ನರೇಂದ್ರ ಮೋದಿ



ಇತ್ತೀಚೆಗೆ ಗುಜರಾತಿನ ನರಹಂತಕ ಮುಖ್ಯಮಂತ್ರಿ ನರೇಂದ್ರ ಮೋದಿಗೆ ಅಮೆರಿಕದ ಸರಕಾರ ಮತ್ತೊಮ್ಮೆ ವೀಸಾ ನಿರಾಕರಿಸಿದೆ ಎಂಬ ಸುದ್ದಿ ಪ್ರಕಟವಾಯಿತು. ಆದರೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬ ಜಾಯಮಾನದ ಚೆಡ್ಡಿಗಳು "ನಮ್ಮ ನರೇಂದ್ರ ಭಾಯ್ ಅಮೆರಿಕದ ವೀಸಾಗೆ ಅರ್ಜಿ ಸಲ್ಲಿಸಿದ್ದರೇ ತಾನೆ ಅದು ನಿರಾಕರಣೆಗೊಳ್ಳುವುದು"ಎಂದು ವಾದಿಸಿದ್ದರು.

ಅವರು ಹೇಳಿದ್ದು ನಿಜವಾಗಿತ್ತು. 2002ರಲ್ಲಿ ಗುಜರಾತಿನಲ್ಲಿ ಅಮಾಯಕ ಅಲ್ಪಸಂಖ್ಯಾತ ಮುಸಲ್ಮಾನರ ಮೇಲೆ ವ್ಯವಸ್ಥಿತ ದಾಳಿ ನಡೆಸಿ ಸುಮಾರು ಮೂರು ಸಾವಿರ ಜನರ ಸಾವಿಗೆ ಕಾರಣನಾಗಿದ್ದ ಮೋದಿ ಆನಂತರ ಅವರ ಹೆಣಗಳ ಮೇಲೆ 'ಗುಜರಾತಿನ ಗರ್ವ' ಎಂಬ ಯಾತ್ರೆಯನ್ನು ಮಾಡಿದ್ದ. ಆ ಯಾತ್ರೆಯನ್ನು ಅಮೆರಿಕಕ್ಕೂ ಕರೆದೊಯ್ಯಲು ಆತ ಯತ್ನಿಸಿದಾಗ ಅಲ್ಲಿನ ಬಹಳಷ್ಟು ಪ್ರಗತಿಪರ ಎನ್‌ಆರ್‌ಐಗಳು ವಿರೋಧಿಸಿ ಆತನಿಗೆ ವೀಸಾ ಕೊಡಬಾರದೆಂದು ಅಮೆರಿಕ ಸರಕಾರವನ್ನು ಕೋರಿದ್ದರು. ಅದರಂತೆ 2005ರಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯ ಆರೋಪದ ಮೇಲೆ ಪ್ರಥಮ ಬಾರಿಗೆ ಮೋದಿಗೆ ವೀಸಾವನ್ನು ನಿರಾಕರಿಸಲಾಗಿತ್ತು.

ಇವತ್ತಿಗೂ ಅಲ್ಲಿನ ಎನ್‌ಆರ್‌ಐಗಳು ಮೋದಿ ವಿರುದ್ಧದ ಪ್ರಚಾರವನ್ನು ಮುಂದುವರೆಸುತ್ತಿರುವುದರಿಂದ ಮತ್ತೆ ಮುಖಭಂಗ ಮಾಡಿಸಿಕೊಳ್ಳಬಾರದೆಂದು ಈ ಬಾರಿ ಮೋದಿ ವೀಸಾಗೆ ಅರ್ಜಿ ಸಲ್ಲಿಸಿರಲಿಲ್ಲ.

ಬದಲಾಗಿ ಆತ ಏನು ಮಾಡಿದ್ದನೆಂದರೆ ಅಮೆರಿಕ ಸರಕಾರದ ಮುಂದೆ ತನ್ನ ಪರ ವಾದಿಸಲು ಆಪ್ಕೋ ಎಂಬ ಪಿಆರ್ ಕಂಪೆನಿಯನ್ನೇ ನೇಮಿಸಿದ್ದ. ಆಪ್ಕೊ ಕಂಪೆನಿ ಇಲ್ಲಿಯವರೆಗೂ ಎಂಥವರ ವಕಾಲತ್ತನ್ನು ವಹಿಸಿದೆ ಎಂದು ನೋಡಿದರೆ ಗಾಬರಿಯಾಗುತ್ತದೆ: ನೈಜೀರಿಯಾದ ಮಾಜಿ ಸರ್ವಾಧಿಕಾರಿ ಸಾನಿ ಅಬಾಚೆ, ಖಜಕಿಸ್ತಾನಕ್ಕೆ ಜೀವನಪರ್ಯಂತ ತಾನೇ ಅಧ್ಯಕ್ಷ ಎಂದು ಘೋಷಿಸಿಕೊಂಡಿರುವ ನೂರ್‌ಸುಲ್ತಾನ್ ನಜರ್‌ಬಯೇವ್, ರಷ್ಯಾದ ಮಾಫಿಯಾ ದೊರೆ ಮಿಖೇಲ್ ಖೋರ್‌ದೋವ್ಸ್ಕಿ...

ಅಂದಹಾಗೆ, ಅಮೆರಿಕದ ಸರಕಾರದ ಮುಂದೆ ಮೋದಿಯ ಕೈಮೇಲಿರುವ ರಕ್ತದ ಕಲೆಗಳಿಗೆ, ಮುಖದಲ್ಲಿರುವ ದ್ವೇಷಕ್ಕೆ ಪಿಆರ್ ಮೂಲಕ ಮೇಕಪ್ ಮಾಡಿ ಮುಚ್ಚಲು ಗುಜರಾತ್ ಸರಕಾರ ಆಪ್ಕೊ ಕಂಪೆನಿಗೆ ಪ್ರತಿ ತಿಂಗಳು ನೀಡುತ್ತಿರುವುದು ಕೇವಲ 25,000 ಡಾಲರ್ (ಹತ್ತು ಲಕ್ಷ ಐವತ್ತು ಸಾವಿರ ರೂಪಾಯಿ)ಗಳನ್ನು! ಇದೆಲ್ಲ ಗುಜರಾತಿನ ಜನರ ಹಣವೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ಅಲ್ಲವೇ?

ಆದರೆ ಆಪ್ಕೊ, ಅದೆಷ್ಟೇ ಪ್ರಯತ್ನಪಟ್ಟರೂ ಅಮೆರಿಕ ಸರಕಾರದ ಮಾನವಹಕ್ಕು ಸಚಿವಾಲಯ ಈ ಬಾರಿಯೂ ಮೋದಿಗೆ ವೀಸಾ ನೀಡಲು ಸಾಧ್ಯವಿಲ್ಲ ಎಂದಿತ್ತು, ಅದು ಗೊತ್ತಿದ್ದರಿಂದಲೇ ಮೋದಿ ಅದಕ್ಕೊಂದು ಅರ್ಜಿ ಸಲ್ಲಿಸಿರಲಿಲ್ಲ!

ಅದೇನೋ ಹೇಳುತ್ತಾರಲ್ಲ, ಅದೆಷ್ಟೇ ಸುಗಂಧವನ್ನು ಸಿಂಪಡಿಸಿದರೂ ರಕ್ತದ ವಾಸನೆಯನ್ನು ಅಷ್ಟು ಸುಲಭವಾಗಿ ಮರೆಮಾಚಲಾಗುವುದಿಲ್ಲ ಎಂದು. ಹಾಗಾಯಿತು ನರಹಂತಕ ಮೋದಿಯ ಕತೆ. ■

ಒರಿಸ್ಸಾ ಗಲಭೆಗಳಿಗೆ ಕಾರಣರಾರು?

ಈ ಪ್ರಶ್ನೆಗೆ ಉತ್ತರವಾಗಿ ಇಲ್ಲೊಂದಿಷ್ಟು ಅಂಕಿಅಂಶಗಳನ್ನು ಕೊಡಲಾಗಿದೆ. ಇದನ್ನು ಓದಿ ನೀವೇ ನಿರ್ಧರಿಸಿ.

- * 1998: ಕಿಯೊಂಜಾರ್ ಜಿಲ್ಲೆಯಲ್ಲಿ ದನಗಳನ್ನು ಸಾಗಿಸುತ್ತಿದ್ದ ವಾಹನದ ಮೇಲೆ ಚೆಡ್ಡಿಗಳ ದಾಳಿ. ವಾಹನದ ಮುಸ್ಲಿಮ್ ಚಾಲಕನನ್ನು ಹೊಡೆದು ಕೊಲೆ.
- * 1998: ಗಜಪತಿ ಜಿಲ್ಲೆಯಲ್ಲಿನ ಕಾರಾಗೃಹದ ಮೇಲೆ ಚೆಡ್ಡಿಗಳ ದಾಳಿ, ಇಬ್ಬರು ಕ್ರಿಶ್ಚಿಯನ್ ಬಂಧಿಗಳ ಕಗ್ಗೊಲೆ.
- * 1999: ಚೆಡ್ಡಿಗಳಿಂದ ಮಯೂರ್ ಭಂಜ್ ಎಂಬಲ್ಲಿ ವಾರದ ಸಂತೆಯಲ್ಲಿ ಶೇಖ್ ರೆಹಮಾನ್ ಎಂಬ ಬಟ್ಟೆ ವ್ಯಾಪಾರಿಯ ಕೊಲೆ ಮತ್ತು ಸಾರ್ವಜನಿಕವಾಗಿ ಆತನ ಕಳೆಬರಹದ ದಹನ.
- * 1999: ಚೆಡ್ಡಿಗಳಿಂದ ಆಸ್ಟ್ರೇಲಿಯಾದ ಧರ್ಮ ಪ್ರಚಾರಕ ಗ್ರಹಾಂ ಸ್ಟೈನ್ಸ್ ಮತ್ತು ಅವರ ಇಬ್ಬರು ಪುತ್ರರ ಸಜೀವ ದಹನ.
- * 1999: ಕ್ಯಾಥೊಲಿಕ್ ಸನ್ಯಾಸಿ ಜ್ಯಾಕಲಿನ್ ಮೇರಿ ಎಂಬುವವರ ಮೇಲೆ ಚೆಡ್ಡಿಗಳ ಸಾಮೂಹಿಕ ಅತ್ಯಾಚಾರ.
- * 1999: ಅರುಲ್ ದಾಸ್ ಎಂಬ ಕ್ರಿಶ್ಚಿಯನ್ ಪಾದ್ರಿಯ ಕೊಲೆ.
- * 2001: ಮುಸಲ್ಮಾನರ ಸ್ಮಶಾನವನ್ನು ಆಕ್ರಮಿಸಿಕೊಳ್ಳಲು ಚೆಡ್ಡಿಗಳಿಂದ ಯತ್ನ.
- * 2001: ಪಿಟಿಯಾಪುರದ 'ಹಿಂದೂ'ಗಳಿಂದ ಕೋಮುಗಲಭೆ. ಮುಸಲ್ಮಾನರ ಮನೆಗಳಿಗೆ ಬೆಂಕಿ, ಮುಸಲ್ಮಾನ ಮಹಿಳೆಯರಿಗೆ ಅವಮಾನ, ಅವರ ಮನೆಗಳ ಲೂಟಿ.
- * 2004: ಏಳು ಕ್ರಿಶ್ಚಿಯನ್ ಸನ್ಯಾಸಿನಿಯರು ಮತ್ತು ಓರ್ವ ಪಾದ್ರಿಗೆ ಬಲವಂತವಾಗಿ ಕ್ಷೌರ, ಅವರೆಲ್ಲರ ಮೇಲೆ ಸಾಮಾಜಿಕ ಮತ್ತು ಆರ್ಥಿಕ ಬಹಿಷ್ಕಾರ.



ಅಷ್ಟೇ ಅಲ್ಲ ಕಳೆದ ಆರು ವರ್ಷಗಳಲ್ಲಿ 4,845 ಗಲಭೆಗಳು, 1,947ಕೊಲೆಗಳು, 16,792 ಜನರಿಗೆ ಗಾಯಗಳು, ಸಾವಿರಾರು ಮನೆಗಳ ಧ್ವಂಸ....

ಹಿಂದೂ 'ಧರ್ಮ'ದ ಉದ್ಧಾರ ಈ ಪರಿಯದ್ದು....

ಗಲಭೆಯ ನಂತರ ಗಲಭೆ

ಕಳೆದ 65 ವರ್ಷಗಳಲ್ಲಿ ಸಂಘ ಪರಿವಾರ ನಡೆಸಿದ ಕೋಮು ಗಲಭೆಗಳ ಪಟ್ಟಿ ಹೀಗಿದೆ:

- * 1946: ಕೊಲ್ಕತ್ತಾ
- * 1953: ಕೋಟಾ
- * 1964: ರೌರ್ಕೆಲಾ
- * 1967: ರಾಂಚಿ
- * 1969: ಅಹಮದಾಬಾದ್
- * 1970: ಭಿವಾಂಡಿ
- * 1978: ಅಲಿಘರ್
- * 1979: ಜಮ್‌ಶೆಡ್ಪುರ್
- * 1980: ಮೋರಾದಾಬಾದ್
- * 1983: ಹೈದರಾಬಾದ್
- * 1983: ಅಸ್ಸಾಮ್
- * 1984: ದೆಹಲಿ
- * 1989: ಭಗಲ್‌ಪುರ್
- * 1991: ಬಾದ್‌ರಾಕ್
- * 1992: ಅಯೋಧ್ಯ
- * 1992: ಮುಂಬೈ
- * 2002: ಗುಜರಾತ್
- * 2003: ಮರದ್
- * 2008: ಜಮ್ಮು



ಇಂತಹ 'ಸಾಧನೆ'ಗಳಿಗೆ ಸಂಘ ಪರಿವಾರ ವಲ್ಲದೆ ಮತ್ತ್ಯಾವುದೋ ಧಾರ್ಮಿಕ ಸಂಘಟನೆ ಕಾರಣವಾಗಿದ್ದರೆ ಅದನ್ನು ಏನೆಂದು ನಮ್ಮ ಸರ್ಕಾರಗಳು, ಪೊಲೀಸರು, ಮಾಧ್ಯಮಗಳು ಬಣ್ಣಿಸುತ್ತಿದ್ದವು?

ಭಯೋತ್ಪಾದಕ ಸಂಘಟನೆ ಎಂದಲ್ಲವೆ?

ನಮ್ಮ ದೇಶದ ಶಾಂತಿ ಮತ್ತು ನೆಮ್ಮದಿಗೆ ಸಂಘ ಪರಿವಾರ ಇಷ್ಟೆಲ್ಲಾ ಕಂಟಕವಾಗುತ್ತಿರುವಾಗ ಅದನ್ನು ಕೂಡಲೇ ನಿಷೇಧಿಸಬೇಕಲ್ಲವೇ?

ಯಾರನ್ನು ಕೊಲ್ಲಲು ಈ ತರಬೇತಿ?



ಇಲ್ಲಿರುವ ಚಿತ್ರವನ್ನು ನೋಡಿ. ಇದು ಭಜರಂಗದಳ ತನ್ನ ಕಾರ್ಯಕರ್ತರಿಗೆ ಆಯುಧಗಳ ತರಬೇತಿ ನೀಡುತ್ತಿರುವ ದೃಶ್ಯ. ಇದನ್ನು ಭಜರಂಗದಳ ಮತ್ತು ಸಂಘಪರಿವಾರ ಬಹಿರಂಗವಾಗಿಯೇ ಮಾಡುತ್ತಿದೆಯಲ್ಲದೆ ತಾನು ಕೂಡಾ ಹಿಂದೂ ಭಯೋತ್ಪಾಕರನ್ನು ಸೃಷ್ಟಿಸುತ್ತಿರುವುದಾಗಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದೆ.

ಒಂದು ಕ್ಷಣ ಯೋಚಿಸಿ, ಇದನ್ನೇ ಕ್ರಿಶ್ಚಿಯನ್ನರೋ, ಮುಸಲ್ಮಾನರೋ, ದಲಿತರೋ, ಆದಿವಾಸಿಗಳೋ ತಮ್ಮ ರಕ್ಷಣೆಗೆಂದು ತಮ್ಮ ಯುವಕರಿಗೆ ಶಸ್ತ್ರಾಸ್ತ್ರಗಳಲ್ಲಿ ತರಬೇತಿ ನೀಡುವ ಬಗ್ಗೆ ಯೋಜಿಸಿದ್ದೇವೆ ಎಂದು ಒಂದೇ ಒಂದು ಮಾತು ಹೇಳಿದರೂ ಸಾಕು, ಅದನ್ನು ಅವರು ಕಾರ್ಯರೂಪಕ್ಕೆ ತರುವ ಮುನ್ನವೇ ಅವರನ್ನೆಲ್ಲ ದೇಶದ್ರೋಹ ಆರೋಪದ ಮೇಲೆ ಜೈಲಿಗಟ್ಟಲಾಗುತ್ತದೆ.

ಅಂದಹಾಗೆ, ಇಂತಹ ಭಯೋತ್ಪಾದಕ ಚಟುವಟಿಕೆಗಳನ್ನು ಕೇವಲ ಶಸ್ತ್ರಾಸ್ತ್ರಗಳ ತರಬೇತಿಗೆ ಸಂಘಪರಿವಾರ ತನ್ನನ್ನು ಸೀಮಿತಗೊಳಿಸಿಕೊಂಡಿಲ್ಲ. ಬದಲಾಗಿ ಅದೀಗ ಬಾಂಬ್ ತಯಾರಿಸುವುದರಲ್ಲೂ ತನ್ನ ಜನರಿಗೆ ತರಬೇತಿ ನೀಡುತ್ತಿದೆ.

ಎರಡು ವಾರಗಳ ಹಿಂದೆ (ಆಗಸ್ಟ್ 24) ಕಾನ್ಪುರ್ ನಗರದಲ್ಲಿ ರಾಜೀವ್ ಮಿಶ್ರಾ ಮತ್ತು [illegible] ಸಿಂಗ್ ಎಂಬ ಇಬ್ಬರು ಭಜರಂಗಿಗಳು ಬಾಂಬ್‌ಗಳನ್ನು ತಯಾರಿಸುತ್ತಿದ್ದಾಗ ಆಕಸ್ಮಿಕವಾಗಿ [illegible] ಸ್ಫೋಟಗೊಂಡು ಅವರಿಬ್ಬರು ಸ್ಥಳದಲ್ಲಿಯೇ ಮೃತಪಟ್ಟರು. ಅನಂತರ ಪೊಲೀಸರು ವಿಚಾರಣೆ ನಡೆಸಿದಾಗ ಗೊತ್ತಾಗಿದ್ದೇನೆಂದರೆ ಭಜರಂಗದಳವು ಹಲವು ಭಾರಿ ಬಾಂಬ್ ಸ್ಫೋಟಗಳಿಗೆ ತಯಾರಿ ನಡೆಸುತ್ತಿತ್ತೆಂದು, ಅಲ್ಪಸಂಖ್ಯಾತರು ವಾಸಿಸುವ ಪ್ರದೇಶದ ನೀಲನಕ್ಷೆ ಹೊಂದಿತ್ತೆಂದೂ, ರಂಜಾನ್ [illegible] ಸಂದರ್ಭದಲ್ಲಿ ಅವುಗಳನ್ನು ಸ್ಫೋಟಿಸಬೇಕೆಂದು, ಆದರೆ ಆ ಕೃತ್ಯದ ಹಿಂದೆ ಮುಸಲ್ಮಾನರೇ [illegible] ದಾರಿ ತಪ್ಪಿಸಲು ಬಿಳಿ ಟೋಪಿ ನಕಲಿ ಗಡ್ಡಗಳನ್ನು ಇಟ್ಟುಕೊಂಡಿದ್ದರು ಎಂ[illegible]

ಭಯೋತ್ಪಾದಕ ಚಟುವಟಿಕೆಯಲ್ಲಿ ಭಾಗವಹಿಸುತ್ತಿದೆ ಎಂಬ ಆರೋಪದಡಿ [illegible] ಸರಕಾರ ನಿಜವಾಗಲೂ ಬಾಂಬ್ ತಯಾರಿಯಲ್ಲಿ ಮತ್ತು ಶಸ್ತ್ರಾಸ್ತ್ರ ತರಬೇತಿಯಲ್ಲಿ ತೊಡಗಿರುವ, ಸಿಕ್ಕಿಹಾಕಿಕೊಂಡಿರುವ ಭಜರಂಗದಳ ಮತ್ತು ಆರೆಸ್ಸೆಸ್‌ನ್ನು ಯಾಕೆ ನಿಷೇಧಿಸುತ್ತಿಲ್ಲ?

ಅಂಬಾರಿ ಹೊರೊ ಆನಿಗೆ ವಯಿಸಾಗ್ಯದೆ ಅಂದ್ಲಂತೆ ಸೋಬಕ್ಕ

ತೆಮ್ಮೂರ ಸಮೀಪಕ್ಕೆ ಆನೆಗಳು ಬಂದಿವೆಯೆಂಬ ಸುದ್ದಿ ಕೇಳಿದ ಸೀರ.

"ಅಂತೂ ನಾವು ಹುಟ್ಟಿದ್ದು ಸಾರ್ಥಕಾಯ್ತು ಬುಡು" ಎಂದ.

"ಅಂತ ಕ್ಯಲಸ ಏನು ಮಾಡಿದೊ ಸೀರಮಾವ?" ಎಂದ ಉಗ್ರಿ.

"ಅಲ್ಲಾ ಕಂಢ, ಅಗ್ರಾರದ ಕ್ಯರೆತಕ್ಕೆ ಆನಿಬಂದವೆ ಅಂದ್ರೆ ಏನರ್ಥ? ಸುಮ್ನುಸುಮ್ನನೆ ಬಂದವೆ? ಅದಕ್ಕಲ್ಲ ಯೇಗ ಬೇಕು ಕಂಢ ಯೇಗ."

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಕೇಡುಗಾಲ ಬತ್ತು ಅಂತ ನಾವು ಬಾಯಿಬಡಕಂಡ್ರೆ ನೀನು ಯೇಗ ಬತ್ತು ಅಂತಿಯಲ್ಲೋ?"

"ಕೇಡಗಾಲ್ಯಾಕೆ ಬಂದತ್ಲ?"

"ಅಲ್ಲಾ ಕಣೊ ಸೀರಮಾವ, ಹ್ಯಗ್ಗಡದ್ಯಾವನು ಕ್ವಾಟೆ ಕಾಡಲ್ಲಿರೊ ಆನೆ ನಾಗಮಂಗಲದತ್ರ ಹಳ್ಳಿಗೆ ಬಂದು ನಿಂತವೆ ಅಂದ್ರೆ ಏನರ್ಥ? ಈ ನನ ಮಕ್ಕಳು ಕಾಡ ತಗದವುರೆ, ಅದ್ಕೆ ನಾಡಿಗೆ ಬಂದವೆ ಅಂತ ಅಲವೇನೊ?"

"ಇರಬವುದು ಕಂಢ. ಆದ್ರು ಅವು ಇಲ್ಲಿಗಂಟ ನ್ಯಡಕಂಡು ಬಂದವೆ ಅಂದ್ರೆ, ನಾವು ಕಾಡು ಬ್ಯಳದಿದ್ವಿ ಅಂದಂಗಾಯ್ತಪ್ಪ"

"ಬ್ಯಳದಿದ್ದಿ ಬುಡು, ನಿನ್ನ ಸರೀಳ ನೋಡಿದ್ರೆ ಕಾಡ್ಯಾವುದು, ಕುರುಚುಲು ಕಾಡ್ಯಾವುದು ಅನ್ನದೆ ಗೊತ್ತಾಗದಿಲ್ಲ" ಎಂದು ಉಗ್ರಿ ನಕ್ಕ.

"ಆನೆ ಊರುಕಡಿಕೆ ಯಾಕೆ ಬತ್ತವಪ್ಪ ಅಂದ್ರೇ ಅವು ವಾಸ ಮಾಡೋ ಜಾಗದಲ್ಲಿ ನೀವ್ಹೋಗಿ ತ್ವಂದ್ರೆ ಮಾಡಿದ್ದಿರಿ, ಅದ್ಕೆ ಬಂದವೆ ಕಂಢ" ಎಂದ ಕಾಳಮಾವ.

"ನಿಜಕಣ ಮಾವ, ಇವತ್ತು ಕಾಡಲ್ಲಿ ಏನಾರ ಉಳುದಿದ್ದತೆ? ಅದ್ಕೆ ಪಾಪ ಅವು ಬಂದವೆ" ಎಂದ ಉಗ್ರಿ.

"ಇಲ್ಲಿಗಂಟ ಯಂಗೆ ಬಂದೋ?" ಎಂದಳು ಜುಮ್ಮಿ.

"ಅವು ಎಲ್ಯು ನಿಲ್ಲದಿಲ್ಲ ಕಣೆ. ಸುಮ್ಮನೆ ಹೋಯ್ತಾಯಿರತವೆ. ಅಂಗೇ ಸ್ಯಡರು ಮಗ್ಗಲೇ ಬಂದುಬುಟ್ಟವೆ. ಅಂತೂ ಹುಟ್ಟದಾಗಿಂದ ಆನೆ ನೋಡದೋರ್ಯಲ್ಲ ನೋಡಿದಂಗಾಯ್ತು."

"ಅಂತೂ ಗಣೇಸನಬ್ಬದ ಟೇಮಿಗೆ ಸರಿಯಾಗಿ ಬಂದೋ ಕಂಢ. ನಾನಂತೂ ಮಸಿದೂರ ಹಿಂದೆಲೇ ಹೋದೆ. ನಮ್ಮ ಜ್ವತೆ ಓಡಕ್ಯಾಗದಿಲ್ಲ ಕಂಢ ಅವು" ಎಂದ ಸೀರ.

"ಆದ್ರು ಸೊಂಡ್ಯಲ್ಲಿ ಯಟಗಿಸಿಗಂಡು ಅಪ್ಪಳಿಸಿಬುಡ್ತದೆ ಕಣೊ. ಹೊಂದಿಕಂಡ್ರೆ ಅದರಂತ ಪ್ರಾಣೀನೆ ಇಲ್ಲ, ತಲಿಕೆಡ್ತು ಅಂದ್ರೆ ಏನೂ ಉಳಿಯದಿಲ್ಲ."

"ಆ ಚಂದ್ರಾಯ್‌ಪಟ್ನದ ಈರಪ್ಪನ್ನ ಕೊಂದಾಕಿದ್ದು ಆನೆ ಅಲವೇನ್ಲ?"

"ದಡ್ಡಾ, ಅವನು ಓಡೋಗಿ ತಪ್ಪಿಸಿಗ ಬವುದಿತ್ತು" ಎಂದ ಸೀರ.

"ಅಲ್ಲಕಣೊ, ಕತ್ಲೆಲಿ ಕತ್ಲೆಯಂಗೆ ನಿಂತಿದ್ದು ಅನಾಮತ್ತು ಸೊಂಡ್ಯಲ್ಲಿ ಎತ್ತಿ ಅಪ್ಪಳಿಸಿದ್ರೆ ಯಂಗೆ ತಪ್ಪಿಸಿಗಂಡೀ?" ಎಂದ ಉಗ್ರಿ.

"ಪಾಪ, ಅವುನು ಯಗ್ಗಡದ್ಯಾವನ ಕ್ವಾಟೆಲಿ ಮೋಜಿನ್‌ದಾರಾಗಿದ್ದ ಕಂಢೆ. ಅಲ್ಲಿಗೋಗಿ ಯಾವಳ್ನೊ ಮಡಿಕಂಬುಟ್ಟದ್ದ" ಎಂದ ಕಾಳಮಾವ.

"ಇಲ್ಲಿ ಹೆಡತಿ ಮಕ್ಳಳಿದ್ರು ಅಲ್ಲಿಗೋಗಿ ತಿರಗ ಯಾವಳ್ನೊ ಇಟಗಂಡಿದ್ನೆ?" ಎಂದ ಸೀರ.

"ಅವುನೆದ್ದಿ ಕೈತ್ವಳಕಂಡು ಮುಟ್ಟಂಗವುಳಪ್ಪ ಆದ್ರು ಅಂತ ಕ್ಯಲಸ ಮಾಡಿದ್ನೆ?" ಎಂದಳು ಜುಮ್ಮಿ.

"ಅವುನಂಥೋನಲ್ಲ ಕಂಢೆ. ಯಾರೋ ವತ್ತುವರಿ ಜನ ಒಂದುದಿಗಿ ಕಳಿಸಿ ಬಾಗಲಾಯ್ನುಂದು. ಇವುನು ಸಿಗಾಯ್ಕಂಡ. ಅಂಗಾದುದ್ದದು"

"ಪಾಪ ಅವುಮಾನಾಯ್ತು, ಯಾಕಬೇಕು ಇಂತ ಜಲ್ಮ ಅನ್ನವಾಗ ಆನೆ ಬಲಿ ತಗಂಡು ಮುಕ್ತಿ ಕೊಡ್ತು ಅತ್ತಗೆ" ಎಂದ ಉಗ್ರಿ.

"ಆನೆ ಅಂದ್ರೆ ಅಂತಿಂಥ ಆನ್ಯಲವಂತೆ ಕಂಢ ಅದು. ಅರಮನೆ ಅಂಬಾರಿ ಹೊರತದೆ ನೋಡು, ಅಂಥಾ ಆನ್ಯಂತೆ" ಎಂದ ಕಾಳಮಾವ.



"ಈಗ ಮೈಸೂರಲ್ಲಿ ಇವುಳೊಂದು ಕ್ಯಾತೆ ತಗದವುಳಲ್ಲಪ್ಪ"

"ಯಾರ್ಲ?"

"ಸೋಬಕರಂದ್ಲಾಜೆ ಅನ್ನೋಳು ಅಂಬಾರಿನೆ ಮುಂದೋಗ್ಲಿ, ಅದರಿಂದೆ ಯಲ್ಲ ಮ್ಯಾರವಣಗೆ ಬರ್ಲಿ ಅಂದವುಳಂತೆ."

"ಕಾಲಾದಿಂದ ನ್ಯಡಕಂಡು ಬಂದಿರಂಗೆ ನ್ಯಡುಸಬೇಕು. ಇವುಳದೇನು ಪ್ಯಸಲ್ನು?"

"ಅಲ್ಲಕಂಢ ಉಸ್ತವ ಅಂದ್ರೇನು? ಯಲ್ಲ ಕುಣಿಯದು ಮ್ಯರಿಯದು, ಯಾಸಯಲ್ಲಾ ಮುಗದ ಮ್ಯಾಲೆ ದೇವುರು ಬತ್ತದಪ್ಪ ಆಗ ಜನ ಕೈ ಮುಗುದು ಮನಿಗೋಯ್ತರೆ ಅದುಬುಟ್ಟು ಮದ್ಲೆ ದೇವುರ ನೋಡಿದ್ರೆ ತಿರಗ ಇನ್ನೆನ್ನೊಡ್ಯರಲ್ಲೀ?"

ಅದೇ ಕಣಮಾವ, ಬಜೆಪಿಗಳು ಬಂದ್ರೆ ಏನಾಯ್ತದೆ ಬರ್ಲಿ ಬುಡು ಅಂತಿದ್ದಲ್ಲಾ, ಈಗ ನೋಡು ದಸ ಮ್ಯಾರವಣಿಗೆನೆ ಉಲ್ಟ ಮಾಡಕ್ವಂಟವುರೆ."

"ಅದ್ಯಾಕ್ಲ ಅವುರಿಗೇನು ತಲಿಕೆಟ್ಟದ್ದತೆ?" ಎಂದಳು ಜುಮ್ಮಿ.

"ಅದೇನೊ ಅಂಬಾರಿ ಹೊರೊ ಆನಿಗೆ ವಯಿಸಾಗಿ ದ್ದತಂತೆ. ಅದು ಐನೂರು ಕೆ.ಜಿ. ಚಿನ್ನದ ಅಂಬಾರಿ ಹೊರಕ್ಕೆ ಸುಸ್ತಾದತಂತೆ.. ಅದ್ ಮದ್ಲೆ ಹೋಗಿಬುಡ್ಲಿ, ಅಂಬಾರಿ ಸವಾರಿ ಅಂದಿದ್ದಳಂತೆ."

"ಅಲ್ಲಾ, ಅಂಬಾರಿ ಹೊರಕ್ಯಾಗದಿಲ್ಲ ಅಂತ ಆನೆ ಇವುಳಿಗೆ ಬಂದೇಳಿತ್ತೇ?"

"ಹೇಳದೆಯಿದ್ರು, ಅವುಳಿಗೆಲ್ಲೊ ಹೊಳದದೆ ಕಣಮಾವ. ಆನೆಗೆ ವಯಿಸಾಗಿರೋದ್ರಿಂದ ಅದು ಸುಸ್ತಾಯ್ತದೆ ಅಂತ ಅವುಳ ಹೇಳ್ತಳೆ ಅಂದ್ರೆ ಅವುಳ ಮಾತ ತಗದಾಕದು ಕಷ್ಟ" ಎಂದು ಉಗ್ರಿ ನಗತೊಡಗಿದ. ಅವನ ಬೆನ್ನಿನ ಮೇಲೆ ಒಂದು ಗುದ್ದಿದ ಜುಮ್ಮಿ,

"ಈ ಮುಂಡೆಮಗ ಯಾವ ಮಾತು ಅಲ್ಲಿಗೆ ತಗಂಡೋಯ್ತನೆ. ನ್ಯಟ್ಟಗೆ ಮಾತಾಡ್ಯ" ಎಂದಳು

"ಇಸಿಸಿ ಇರದೇಳಿದೆ ಕಣೆ ನಾನು. ವಯಸಾಗಿರೋ ಆನೆ ಅಂಬಾರಿ ಹೊರಕ್ಕೆ ಸುಸ್ತಾಯ್ತದೆ ಅಂತ ಶೋಬಾ ಕರಂದ್ಲಾಜೆ ಹೇಳ್ತಳೆ ಅಂದ್ರೆ ಆ ಮಾತ ನಾವು ಸೀರಿಯಸ್ಸಾಗಿ ತಗೋಬೇಕಪ್ಪ" ಎಂದ ಉಗ್ರಿ.

"ಅದವುಳ ಮಾತಲ್ಲ ಕಣೊ ಉಗ್ರಿ, ಯಾರದೊ ಮಾತು" ಎನ್ನುತ್ತಾ ವಾಟಿಸ್ಸೆ ಬಂದ.


ಕಾಗೇರಿ ಕಾಕಾ ಸಾಧನೆ!

'ಒರಿಸ್ಸಾ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಛೀಮಾರಿ' ಅನ್ನುವುದನ್ನು ಓದಿ ಅತ್ಯುನ್ನತ ನ್ಯಾಯಾಲಯಕ್ಕೆ ಏನೋ ಕೇಡುಗಾಲ ಬಂದಿದೆ ಅಂದುಕೊಂಡೆ. ಅಲ್ಲಿ ಕಂಧಮಲ್ ಜಿಲ್ಲೆಯಲ್ಲಿ ದೊಂಬಿ, ಲೂಟಿ, ಒಂದಷ್ಟು ಜನ ಧರ್ಮ ಬಾಹಿರರ ಸಜೀವ ದಹನ ಮಾಡಿದ್ದೇ ಮಹಾಪರಾಧ ಅಂತ ಅದು ಭಾವಿಸಿರುವಂತಿದೆ. ಜೀವಭಯದಿಂದ ಹೇಡಿಗಳಂತೆ ಓಡಿಹೋಗುತ್ತಿರುವವರ ರಕ್ಷಣೆಗೆ ಸರ್ಕಾರ ಬರಬೇಕಿತ್ತಂತೆ. ಹಾಗೆ ಬರಲಿಲ್ಲವಲ್ಲ ಅದು ಸರ್ಕಾರದ ವೈಫಲ್ಯ ಅಂತೆ!

ಕೋರ್ಟು ಅನ್ನೋದು ಅಲ್ಲಿನ ಮುಖ್ಯಮಂತ್ರಿಯವರ ಸಂಧಿಗ್ಧತೆಯನ್ನು ಅರ್ಥ ಮಾಡಿಕೊಳ್ಳಬೇಕಿತ್ತು. ಅಲ್ಲಿ ಸರ್ಕಾರ ಅಂತ ನಿಂತಿರೋದು, ಅವರು ಮುಖ್ಯಮಂತ್ರಿ ಅಂತ ಅನ್ನಿಸಿಕೊಳ್ಳುತ್ತಿರೋದು ಭಾರತೀಯ ಜನತಾ ಪಕ್ಷದವರ ಕೃಪಾಶ್ರಯದಿಂದ. ಹೇಳಿಕೇಳಿ ಭಜರಂಗದಳ ಅನ್ನೋದು ಆ ಪಕ್ಷದವರು. ಸುಪ್ರೀಂಕೋರ್ಟು ಯಾವು ಯಾವುದನ್ನು ಅಪರಾಧ ಅಂತ ಪರಿಗಣಿಸುತ್ತೋ ಅದನ್ನೇ ಕಾರ್ಯರೂಪಕ್ಕೆ ತರುವುದಕ್ಕೆ ತರಬೇತಿ ನೀಡಿ ಸಾಕಿಕೊಂಡಿರುವಂತದ್ದು. ವಿಶ್ವಹಿಂದೂ ಪರಿಷತ್ತು ಅಂದುಕೊಂಡದ್ದನ್ನು ಕೃತಿಗಿಳಿಸುವುದು ಇವರ ಪವಿತ್ರಕಾರ್ಯ. ಅಂತಹದ್ದರಲ್ಲಿ ಆ ಪರಿಷತ್ತಿನ ನಾಯಕ ಸ್ವಾಮಿ ಲಕ್ಷ್ಮಣಾನಂದ ಸರಸ್ವತಿಯನ್ನೇ ಗುಂಡಿಟ್ಟು ಕೊಂದದ್ದು ಅವರ ರಕ್ತ ಕುದಿಸಿದ್ದು ಸಹಜವೇ ಆಗಿತ್ತು. ಮುಯ್ಯಿಗೆ ಮುಯ್ಯಿ ತೆಗೆದುಕೊಳ್ಳಲು ಕ್ರಿಶ್ಚಿಯನ್ನರ ಸಜೀವ ದಹನ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಗುರು ಕಾಣಿಕೆ ನೀಡುವುದು ನಮ್ಮ ಪರಂಪರೆ. ಇದನ್ನೇ ಅವರೂ ಮಾಡಿದ್ದರು. ಮಹಿಳೆಯರೂ ಈ ಪುಣ್ಯ ಕಾರ್ಯದಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದ್ದಾರೆಂಬುದು ಹಿಂದೂ ಪರಂಪರೆಗೆ ಕಿರೀಟಪ್ರಾಯವಾಗಿದೆ! ಇದೆಲ್ಲವನ್ನೂ ಅರಿತಿದ್ದ ಮಾನ್ಯ ಪಾಟ್ನಾಯಿಕ್ ಸಾಹೇಬರು ಅವರಿಗೆಲ್ಲ ಪರೋಕ್ಷವಾಗಿ ಬೆಂಬಲವಾಗಿ ನಿಲ್ಲುವುದು ನ್ಯಾಯವೇ ಆಗಿತ್ತು, ಇದು ಸರ್ಕಾರದ ವೈಫಲ್ಯ ಎಂದು ನ್ಯಾಯಾಲಯ ಹೇಗೆ ತೀರ್ಮಾನಕ್ಕೆ ಬಂದಿತೆಂಬುದು ಆಶ್ಚರ್ಯಕರವಾಗಿದೆ.

ಅದೂ ಅಲ್ಲದೆ ರಾಜಕೀಯ ಪಕ್ಷಗಳಲ್ಲಿರುವವರು ಸರ್ವ ಸಂಗ ಪರಿತ್ಯಾಗಿಗಳಲ್ಲ, ಎಲ್ಲ ಪಕ್ಷಗಳೂ ಅಧಿಕಾರದ ಗದ್ದುಗೆ ಏರಬೇಕು ಎಂದು ಬಯಸುತ್ತಲೇ ಇರುತ್ತವೆ. ಪ್ರತಿಯೊಂದು ಪಕ್ಷವೂ ತನ್ನದೇ ಆದ ಕಾರ್ಯಸೂಚಿ ಹೊಂದಿರುತ್ತವೆ. 'ಒಂಟೆ ಮತ್ತು ಗುಡಾರ' ಕತೆ ನ್ಯಾಯಾಲಯಕ್ಕೆ ತಿಳಿದಿದೆ ಎಂದು ಭಾವಿಸುತ್ತೇವೆ. ಭಾಜಪವೂ ಇದೇ ಕತೆಯ ನೀತಿಯನ್ನು ಅನುಸರಿಸುತ್ತದೆ. ವಿಷಯ ಹೀಗಿರುವಾಗ ಕ್ರಿಶ್ಚಿಯನ್ನರ ವಿರುದ್ಧದ ಭೀಕರ ದೊಂಬಿಯನ್ನು ಆ ಪಕ್ಷದ ಚಾಣಾಕ್ಷತನ ಎಂದು ತಾರೀಫು ಮಾಡಬೇಕಿತ್ತು!

ವಿಶ್ವಹಿಂದೂ ಪರಿಷತ್, ಭಜರಂಗದಳ ಹಾಗೂ ಆರೆಸ್ಸೆಸ್ ಸಂಘಟನೆಗಳನ್ನು ನಿಷೇಧಿಸುವಂತೆ ಕೆಲವು ಅಜ್ಞಾನಿಗಳು ಸೂಚಿಸುತ್ತಿದ್ದಾರೆ. ಇದು ಎಷ್ಟು ಕಠಿಣತರವಾದ



ಕೆಲಸ ಎಂಬುದನ್ನು ಸರ್ಕಾರ ಮನವರಿಕೆ ಮಾಡಿಕೊಂಡಿದೆ. ಅಲ್ಪಸಂಖ್ಯಾತರ ಸಂಘಟನೆಯನ್ನು ನಿಷೇಧಿಸಿದಷ್ಟು ಇದು ಸುಲಭ ಅಲ್ಲ!

ಈ ಎಲ್ಲ ಘಟನೆಗಳಿಂದಾಗಲಿ, ಸುಪ್ರೀಂಕೋರ್ಟಿನ ಛೀಮಾರಿಯಿಂದಾಗಲೀ ಭಾರತೀಯ ಜನತಾ ಪಕ್ಷವಾಗಲೀ ಮುಖ್ಯಮಂತ್ರಿ, ನವೀನ್ ಪಾಟ್ನಾಯಕ್ ಅವರಾಗಲೀ ವಿಚಲಿತರಾಗಿಲ್ಲ, ಚುನಾವಣೆ ಸಮೀಪಿಸಿದಂತೆಲ್ಲ ಕೋಮು ಗಲಭೆಗಳು ನಡೆಯುತ್ತವೆ. ಇದಕ್ಕೆ ನೇರವಾಗಿ ಭಾಜಪ ಹೊಣೆಗಾರರಾಗಿಸಲು ಸಾಧ್ಯ ಇಲ್ಲ! ಇನ್ನು ನವೀನ್ ಪಾಟ್ನಾಯಕ್ ಅವರದ್ದು ಸರಿಯೇ ಸರಿ. 'ಕ್ರಿಶ್ಚಿಯನ್ನರು ಮನವಿ ನೀಡಿದರೂ ಯಾಕೆ ಸೂಕ್ತ ಕ್ರಮ ಕೈಗೊಳ್ಳಲಿಲ್ಲ' ಎಂದೇನಾದರೂ ನ್ಯಾಯಾಲಯ ಕೇಳಿದರೆ 'ಅವರು ಏನು ಕೇಳಿದರೋ ನನಗೆ ತಿಳಿಯಲಿಲ್ಲ' ಅಂದರಾಯಿತು! ಹೇಗಿದ್ದರೂ ನವೀನ್ ಪಾಟ್ನಾಯಕ್ ಸಾಹೇಬರಿಗೆ ಒರಿಯಾ ಭಾಷೆ ತಿಳಿಯಲ್ಲ ಅನ್ನುವುದು ಜಗತ್ತಿಗೇ ಗೊತ್ತುಂಟು!

ಹಿಂದೂ ಸಂಸ್ಕೃತಿಯ ಉಳಿವಿಗಾಗಿ ನಡೆಯುತ್ತಿರುವ ಈ 'ಬಲಿ'ಗಳನ್ನು ಪ್ರತಿಭಟಿಸಲು ಕ್ರಿಶ್ಚಿಯನ್ ಮತಾಂಧರು ತಾವು ನಡೆಸುತ್ತಿರುವ ವಿದ್ಯಾಸಂಸ್ಥೆಗಳಿಗೆ ಒಂದು ದಿನದ ಸಾಂಕೇತಿಕ ರಜೆ ಘೋಷಿಸಿದರು. ಇದನ್ನು ಕಂಡೂಕಂಡೂ ಮನುಧರ್ಮ ಶಾಸ್ತ್ರವನ್ನು ಶತಾಯಗತಾಯ ಜಾರಿಗೆ ತರಲೇಬೇಕೆಂದು ಪ್ರತಿಜ್ಞೆಗೈದಿರುವ ವಿದ್ಯಾಸಚಿವ(!) ವಿಶ್ವೇಶ್ವರ ಹೆಗಡೆ ಕಾಗೇರಿ ಸಿಡಿದೆದ್ದರು... ಅಲ್ಲವೆ ಮತ್ತೆ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಈ ಸಂಸ್ಥೆಗಳು ಈ ರೀತಿ ನಡೆದುಕೊಂಡರೆ! ಪೂರ್ವಾನುಮತಿ ಪಡೆದಿದ್ದರೆ ಅವರು? ಈ ಸಂಸ್ಥೆಗಳಿಗೆ ಶಿಕ್ಷೆ ನೀಡುವುದಾಗಿ ಆರ್ಭಟಿಸಿದರು. ಆ ದನಿ ಕೆಲವರಿಗೆ 'ಕಾ' 'ಕಾ' ಅಂತ 'ಕಾಗೆ' ಕೂಗಿದ ಹಾಗೆ ಕೇಳಿಸಿರಬಹುದು! ಹೀಗೆ ಕೇಳಿಸಿಕೊಂಡಿರುವ ಕೆಲವು ಧೂರ್ತರು, ಎಲ್ಲೋ ನಡೆದಿರುವ ಅಮರನಾಥ ಭೂವಿವಾದಕ್ಕೆ ದೇಶದಾದ್ಯಂತ ಬಂದ್ ಆಚರಿಸಲಾಯಿತಲ್ಲಾ, ಆಗ ಶಾಲಾ ಕಾಲೇಜುಗಳನ್ನು ಮುಚ್ಚಿದರಲ್ಲಾ ಅಂತಹವರಿಗೂ ಶಿಕ್ಷೆ ವಿಧಿಸಲಾಗುತ್ತದೆಯಾ ಎಂಬ ತಲೆತಿರುಕ ಪ್ರಶ್ನೆ ಕೇಳುತ್ತಿದ್ದಾರೆ. ಅವರಿಗೇನು ತಲೆ ಇದೆಯಾ. ಅವೇನು ಅಲ್ಪಸಂಖ್ಯಾತರ ವಿದ್ಯಾಸಂಸ್ಥೆಗಳೇನ್ರಿ!

ಮಾನ್ಯ ಯಡ್ಯೂರಪ್ಪನವರು ನೂರು ದಿನಗಳ ಸಾಧನೆಗಳ ಬಗ್ಗೆ ಬೆನ್ನು ತಟ್ಟಿಕೊಳ್ಳಲು ಸಮಾರಂಭ ಏರ್ಪಡಿಸುತ್ತಿದ್ದಾರೆ. ಅದರಲ್ಲಿ ರೈತರ ಆತ್ಮಹತ್ಯೆ, ದೇಶದ ಬೆನ್ನೆಲುಬಿನ ಎದೆಗೆ ಗುಂಡು, ಪಕ್ಷಾಂತರಿ ಶಾಸಕರ ಅಭಿವೃದ್ಧಿ ಇಂತಹವುಗಳ ಬಗ್ಗೆ ತಿಳಿಸುತ್ತಾರೋ ಇಲ್ಲವೋ ತಿಳಿಯದು. ಆದರೆ ಒಂದಂತೂ ಖಚಿತ. ತಮ್ಮ 'ಅಕ್ಕ' ಭೇಟಿ (ಯಾವ 'ಅಕ್ಕ' ಅಂತ ಮಧ್ಯೆ ಬಾಯಿ ಹಾಕಬೇಡಿ ಮತ್ತೆ!) ಕಾಗೇರಿ, ಅವರ ಕಾಕಾ ಸಾಧನೆ ಬಗ್ಗೆ ಬೆನ್ನು ಚಪ್ಪರಿಸಿಕೊಳ್ಳುವುದಂತೂ ಖಚಿತ! ಇವೇನು ಕಡಿಮೆ ಸಾಧನೇನಾ!

ಕಾರುಗಳ್ಳರ ಸಂಘ!

ಕದಿಯೋದು ಅಂದರೆ ಪುಗಸಟ್ಟೆಪುನುಗಲ್ಲ, ಅದಕೂ ವೃತ್ತಿ ನೈಪುಣ್ಯತೆ ಬೇಕು. ಕೆಲವು ಚಾಣಾಕ್ಷರು ಕಾರುಗಳನ್ನೇನೋ ಕ್ಷಣ ಮಾತ್ರದಲ್ಲಿ ಹಾರಿಸಿಕೊಂಡು ಹೋಗ್ತಾರೆ ನೋಡಿದವರಿಗೆ ಇವರೇ ಕಾರಿನ ಮಾಲೀಕರಿರಬೇಕು ಇಲ್ಲದೆ ಇದ್ದರೆ ಈ ರೀತಿಯಲ್ಲಿ ಕಾರು ಓಡಿಸಿಕೊಂಡು ಹೋಗುತ್ತಿದ್ದರಾ ಅಂತ ಅನ್ನಿಸುತ್ತದೆ. ಕಾರು ಕದ್ದಷ್ಟು ಸಲೀಸಾಗಿ ಮಾರಾಟ ಮಾಡಲಾಗುತ್ತಿರಲಿಲ್ಲವಂತೆ ಪ್ರದರ್ಶನಕ್ಕೆ ಇಡೋಕಾ ಅವರು ಕಾರು ಕದ್ದಿದ್ದು? ಇಲ್ವಲ್ಲಾ ಅದಕ್ಕೆ ಮಾರಾಟದಲ್ಲಿ ನೈಪುಣ್ಯತೆ ಪಡೆದ ಗುಂಪನ್ನು

ಅಣಕ

ಎಚ್.ಎಲ್. ಕೇಶವಮೂರ್ತಿ

ಹಿಡಿದರಂತೆ. ಇವರು ಕದಿಯೋದು ಅವರು ಮಾರೋದು ಇದು ಬಲೇ ಸಲೀಸಾಗಿ ನಮ್ಮ ಅಲ್ಪಬಹುಮತ ಸರ್ಕಾರದ ತರ ನಡೀತಿತ್ತಂತೆ. ಇವರ ಮೋಡಸ್ ಆಪರೆಂಡಿ ಹೇಗಪ್ಪಾ ಅಂದರೆ..... ಕಾರು ಎಗರಿಸಿದವರು ಸಮೀಪದ ಒಂದು ನಿರ್ದಿಷ್ಟ ಪೆಟ್ರೋಲ್ ಬಂಕಿನಲ್ಲಿ ಕಾರು ನಿಲ್ಲಿಸುತ್ತಿದ್ದರಂತೆ ಇನ್ನೊಂದು ಗುಂಪು ಅಲ್ಲಿಂದ ಕಾರನ್ನು ಸಾಗಿಸುತ್ತಿತ್ತಂತೆ ಮೂರನೆ ಗುಂಪು ಅವನ್ನ ಮಾರಾಟ ಮಾಡುತ್ತಿದ್ದವಂತೆ ಶ್ರಮಕ್ಕೆ ತಕ್ಕಂತಹ ಪ್ರತಿಫಲ ಹಂಚಿಕೊಳ್ಳಲಾಗುತ್ತಿತ್ತಂತೆ ಈ ಕಳ್ಳರ ಒಕ್ಕೂಟ ಬಲೇ ಪಸಂದಾಗಿ ಕಾರ್ಯನಿರ್ವಹಿಸುತ್ತಿತ್ತಂತೆ!

ಈ ಸಂಘಟನೆ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಈಶಾನ್ಯ ಭಾರತದಲ್ಲಂತೆ.

ಇದನ್ನು ಏನೋ ಆಶ್ಚರ್ಯದ ಸಂಗತಿ ಅಂತ ಸ್ನೇಹಿತನಿಗೆ ಹೇಳಿದಾಗ ಅವನು.... ಇದೇನು ಮಹಾ ಸಂಘಟನೆಯಲ್ಲಿ ಶಕ್ತಿ ಇದೆ ಅನ್ನೋದು ಯಾರಿಗೆ ಗೊತ್ತಿಲ್ಲ ಮಹಿಳಾ ಸಂಘಟನೆಗಳು ಈ ಸಾಲಿನ ಚುನಾವಣೆಯಲ್ಲಿ ತಮ್ಮ ಶಕ್ತಿ ಪ್ರದರ್ಶಿಸಲಿಲ್ಲವಾ; ಅನೇಕ ಸಂಘಗಳ ನಾಯಕರು ಅವುಗಳ ಹೆಸರಿನಲ್ಲಿ ದಂಧೆ ನಡೆಸುತ್ತಿಲ್ಲವಾ; ಇಂತಹವೆಲ್ಲ ಮರ್ಯಾದಸ್ಥ ಸಂಘಟನೆಗಳು ಅಂತ ಹೆಸರನ್ನು ಪಡೆದುಕೊಂಡಿಲ್ಲವಾ. ಹಂಗೇನೆ ಇದೂನು ಅಂದುಬಿಡೋದೆ!

ತೂತುಬೇಲ

ತಲೆ ಕೆಟ್ಟು ಗೊಬ್ಬರ ಆಗಿತ್ತು!

"ಇರುವುದು, ಯಾರ ಬಾಯಿಯಿಂದ ಬತ್ತು ಅದೇ ಮುಖ್ಯ ಅಲವೇನೊ. ಬಲ್ಲಿ ಅವುಳು ಮೈಸೂರಿನ ಉಸ್ತುವಾರಿ ಮಂತ್ರಿ. ಹೆಚ್ಚುಕಮ್ಮಿ ಎಡೂರಪ್ಪ ಸೂರನೆ ಅವುಳಿಗೆ ಬುಟ್ಟುಕೊಟ್ಟವುನೆ" ಎಂದ ಉಗ್ರಿ.

"ಕೊಡ್ಲಿ ಬುಡೂ, ಅವುಳಿಗೆ ಕೊಡದೆ ಇನ್ನೇನು ಶಂಕರಲಿಂಗೇಗೌಡನಿಗೆ ಬೇಕಾಗಿತ್ತೆ?"

" ಆ ಶಂಕರಲಿಂಗ ದಾನುಸೂರ ಕರ್ಣ ನಾಟಗ ಕಲಸೊ ಮೇಷ್ಟ್ರಿದಂಗವುನೆ. ಪತಿ ಗೆದ್ದವುನೆ, ಆದ್ರು ಶೋಬಕ್ಕನಿಂದೆ ನಿಂತಗತ್ತನಲ್ಲ, ಒಂದು ಚೂರಾರ ವಾದಿ ಬ್ಯಾಡವೇನೊ?" ಎಂದು ಉಗ್ರಿ ಹೇಳುವಾಗ, ನಾಲ್ಕಾರು ಹುಡುಗರು ಟ್‌ಪುಸ್ತಕ ಹಿಡಿದು ಗಣಪತಿ ಕಾಣಿಕೆ ವಸೂಲಿಗೆ ಬಂದವು. ಅವುಗಳನ್ನು ಕಟತ್ತವಾಗಿ ನೋಡಿದ ವಾಟಿಸ್ಸೆ,

"ಆಹಾ ಏನು ಭಾರತಾಂಬೆ ಮಕ್ಕಳಯ್ಯ ನೀವು, ಏನು ಬೇಕ್ರೋ ಗೆ?" ಎಂದ.

"ಗಣಪತಿ ಕಾಣಿಕೆ."

"ಬೇಷ್, ಇಷ್ಟು ಚಿಕ್ಕವಯಸಿಗೆ ಭಿಕ್ಷೆ ಮಾಡಿ ಹಬ್ಬ ಮಾಡೋ ಮನಸು ಗೆ ಬಂದಿರದ ನೋಡಿದ್ರೆ, ನನಗೆ ತುಂಬಾ ಯೆಮ್ಮೆ ಆಯ್ತಾ ಅದೆ. ಬ್ಯರ್ಕೆ ಂದ್ಯತ್ತವ ಕಳ್ಳ ಮುಂದೆ ಮಕ್ಕಳ, ಈ ತರ ಭಿಕ್ಷೆ ಮಾಡಿ ಹಬ್ಬ ಮಾಡದ .. ಯಾವ ದೇವರೂ ಈತರ ಚಂದಾ ಎತ್ತಿ ಎಂಜಲ ಕಾಸಲ್ಲಿ ಬಾಳೆಹಣ್ಣು ದು ಬತ್ತಿ ತಂದು ಹಚ್ಚಿ ಅಂತ ಹೇಳಿಲ್ಲ" ಎಂದು ವಾಟಿಸ್ಸೆ ಭಾಷಣ ಯುವಾಗ ಜುಮ್ಮಿ,

"ಇದ್ರೆ ಕೊಡು, ಇಲ್ದಿದ್ರೆ ಕಳುಸ್ಲ ಬೈಬ್ಯಾಡ" ಎಂದಳು.

"ಬೈಯ್ಯದಲ್ಲ ಕಣಕ್ಕ, ಈ ತರದ ದೈವ ಭಕ್ತಿ ಜನಕ್ಕೆ ಹಳೆ ಕ್ಯರತಗಂಡು ಬೇಕು. ಹಬ್ಬ ಮಾಡ್ತರಂತೆ ಹಬ್ಬವ. ಅಲ್ಲಲೇ ನಿಮ್ಮವುನ್, ಕಣ್ಣಬುಟ್ಟು ೀಡ್ರೊ ಸಾಬ್ರು ಯಂಗಬ್ಬ ಮಾಡ್ತ ಅವುರೆ. ಯಾರನಾರ ಕಾಸು ಕೇಳ್ತರ? ರಿಗಾರ ತೊಂದ್ರೆ ಕೊಡ್ತರ? ಹಗಲ್ಯಲ್ಲ ಉಪವಾಸ ಮಾಡ್ತರೆ. ರಾತ್ರಿವೊತ್ತು ಣ್ಣುತರೆ. ನಮಾಜ್ ಮಾಡ್ತರೆ. ಮೈಮುರಿತರೆ. ಅವುರಿಗೆ ದೇವರು ಕಂಡ್ರೂ ಬಹುದು. ಅದೇ ನಿಮ್ಮಂತ ಭಿಕ್ಷುಕರಿಗೆ ಚಿಲ್ಲರೆ ಕಾಸುಬುಟ್ರೆ ಇನ್ನೇನು ದಿಲ್ಲ, ಇವತ್ತು ಗಣಪತಿಗೆ ದುಡ್ಡುಕೇಳೋ ನೀವು ಮುಂದೆ ಭೂಗತಲೋಕದ ಗಳಾಗ್ತಿರಿ, ಲಫಂಗರಾಗ್ತಿರಿ, ನೀಚರಾಗ್ತಿರಿ. ಕಡಿಗೆ ರಾಜಕಾರಣಿಗಳಾಗ್ತಿರಿ. ಂದ ನೀವ್ಯಲ್ಲ ಈ ಕೂಡ್ಲೆ ಗಣಪತಿ ಡಬ್ಬ ಬಿಸಾಕಿ, ನನ್ನ ಜೊತೆ ಬನ್ನಿ " ದು ವಾಟಿಸೆ ಹೇಳುವಾಗ ಹುಡುಗರು ಖಾಲಿಯಾಗಿದ್ರೊ. ಜುಮ್ಮಿ ತ್ತ

"ಹೋಗ್ಲಿ ಬುಡ್ಯ ಅತ್ತಗೆ" ಎಂದಳು

"ಸರಿಯಲವ ದ್ವಡಪ್ಪ?"

"ಮದ್ಲು ನೀನು ಸರಿಯಾಗ್ಲ."

■

ಏನಯ್ಯಾ ಇದು, ಯಾರು ನೋಡಿದರೂ ಕೋಟಿಯಲ್ಲೇ ಮಾತಾಡ್ತಾರೆ. ಗಿದ್ದರೂ ಭ್ರಷ್ಟಾಚಾರದಲ್ಲಿ ಕರ್ನಾಟಕ ಅನ್ನೋ ರಾಜ್ಯ ಹದಿನೇಳನೇ ಸ್ಥಾನದಲ್ಲೇ ಟ್ನೊ ಕೊಳೆಯುತ್ತಾ ಬಿದ್ದಿದೆ. ಅದು ಯಾವತ್ತು ಮೇಲೇರೋದು ಅಂತ ಚಾಡಿಕೊಂಡಿದ್ವೆ. ಸದ್ಯ ಈ ಸಾಲಿನ ಆಮ್ನೆಸ್ಟಿ ಇಂಟರ್‌ನ್ಯಾಷನಲ್ ವರದಿ ೀಡಿ ಹೊಟ್ಟೆ ತಣ್ಣಗಾಯಿತು! ಸುತ್ತಮುತ್ತಲ ರಾಜ್ಯಗಳಿಗಿಂತ ಈಗ ಮೀಸೆ ುವುತ್ತಾ ಮೇಲೆದ್ದು ನಿಂತಿದೆ!

ಈಗ ಒಂದು ರೀತಿಯ ಸಮಾಧಾನ!

ಇದಕ್ಕೆ ನಮ್ಮ ಆರೋಗ್ಯ ಶಿಕ್ಷಣ ಸಚಿವ ಅಂತಹವರೂ ಕಾರಣ ಅಂದರೆ ಲ್ಲಿ. 'ಇದಕ್ಕೆ' ಅಂದರೆ ಭ್ರಷ್ಟಾಚಾರಕ್ಕೆ ಅಂತ ಅಲ್ಲ ಸಮಾಧಾನಕ್ಕೆ!

ಭ್ರಷ್ಟಾಚಾರದ ವಿಷಯ ಎತ್ತಿಕೊಂಡು ಗೌಡರ ಬಳಿಗೆ ಹೋಗಿದ್ರೊ. ತಹ ಮುತ್ತಿನಂತಹ ಮಾತನಾಡಿದರು ಅಂತೀರಿ. ಹರಿಕತೆ ದಾಸರ ಪ್ರವಚನ ದಷ್ಟು ಪುಣ್ಯ ಬರಬೇಕು ಹಾಗಿತ್ತು!

'ಭ್ರಷ್ಟಾಚಾರ ಎಲ್ಲಿಲ್ರಿ?' ಮಂತ್ರಿಗಳ ಪ್ರಶ್ನೆ.

ಆಹಾ ಅದ್ಭುತ! ಯಾರೂ ಇಲ್ಲದ ಎಡೆ ಬಾಳೆಹಣ್ಣು ತಿಂದು ಬನ್ನಿ ಅಂತ ರುಗಳು ಹೇಳಿದಾಗ ಎಲ್ಲರೂ ಅಲ್ಲಿ ಇಲ್ಲಿ ಅವಿತು ತಿಂದುಬಂದರಂತೆ. ದರೆ ಒಬ್ಬ ಮಾತ್ರ ಹಾಗೆ ಬಂದನಂತೆ. ಯಾಕಪ್ಪ ತಿನ್ನಲಿಲ್ಲ ಅಂದದ್ದಕ್ಕೆ ರುಗಳೆ ಎಲ್ಲಾ ಕಡೆಯೂ ದೇವರು ಇದ್ದ' ಎಂದನಂತೆ! ಆ ದೇವರಂತೆಯೇ ಭ್ರಷ್ಟಾಚಾರ! ಅದಿಲ್ಲದ ಜಾಗವೇ ಇಲ್ಲ!

ಎಂತಹ ಅಪೂರ್ವ ಒಳನೋಟ ಮಂತ್ರಿಗಳದ್ದು!

ಆದರೆ ನಾವು ಬೆಪ್ಪುಗಳು. ಇದನ್ನು ಅರ್ಥಮಾಡಿಕೊಳ್ಳಲಿಲ್ಲ, ಪೆದ್ದು ದ್ಯಾಗಿ 'ಲೋಕಾಯುಕ್ತರೇ ರಿಪೋರ್ಟು ಕಳ್ಸಿದಾರೆ ಸಾರ್' ಅಂದ್ರೊ.

'ಲೋಕಾಯುಕ್ತರೇನು ಸರಿಯಾಗಿದಾರಾ?' ಮಂತ್ರಿಗಳ ಪ್ರಶ್ನೆ.

ಆಹಾ! ಎಂತಹ ಮೇಧಾವಿತನ!

ಭ್ರಷ್ಟಾಚಾರ ನಿರ್ಮೂಲನದ ಮಾತು ಹಾಗಿರಲಿ, ನಿಯಂತ್ರಣವೂ ಸಾಧ್ಯ ಲ್ಲ ಅನ್ನುವುದು ಅರಿವಾಯಿತು. ತೆಪ್ಪಗಾದೆೊ. ಮಂತ್ರಿವರ್ಯರು ುಂದುವರೆಸಿದರು.


ಜನ ಕುಲಗೆಟ್ಟು ಹೋಗಿದಾರ್ರಿ. ಹೆಂಡ ಹಣಕ್ಕೆ ಓಟಾಕ್ತಾರೆ. (ಅಲ್ಲ ದನ್ನು ಕೊಡುವವರು ಯಾರು? ಯಾಕೆ ಕೊಡುತ್ತಾರೆ? ಇದನ್ನು ಕೇಳಬೇಕೆಂಬ ಲಹಸ ಬಂದ ಮಾತನ್ನು ನುಂಗಿಕೊಳ್ಳಬೇಕಾಯಿತು. ಮಂತ್ರಿಗಳು ನೋಡಿ! ವಿದ್ಯಾಪಾರಂಗತರು ಅವರು!) ಈಗಿನ ಮಕ್ಕಳು ಹುಟ್ಟುವಾಗಲೆ ಕ್ರಿಸ ಉಂಗುರಾನ ಮುಷ್ಟಿಯಲ್ಲಿಟ್ಟುಕೊಂಡು ಬರ್ತಾವೆ (ಹಳಸಲು ೇಕು ನಿಜ. ಅದನ್ನು ಹೇಳುವ ಹಾಗಿಲ್ಲ, ಮಂತ್ರಿಗಳ ನೋಡಿ. ಸಕಲ ದ್ಯಾಪಾರಂಗತರು!)... ಹೀಗೇ ಮುಂದುವರೆಯಿತು...

ನಮ್ಮ ದಡ್ಡತನಕ್ಕಾಗಿ ಖಂಡುಗ ನಾಚಿಕೆ ಆಯಿತು. ಓಹೋ ಸರ್ಕಾರ ದರೆ ತೂತು ಬೀಲ ಇದ್ದಂಗೆ ಅನ್ನೂದು ಸಮಾಧಾನ ಹುಟ್ಟುಕೊಂಡು ದಿದೊ.

■


'ತಲೆದಂಡ' ಮತ್ತು ಮಾಸ್ತಿ

ಮರೆಯುವ ಮುನ್ನ




■ ಪಿ. ಲಂಕೇಶ್ ಡಿಸೆಂಬರ್ 2, 1990

ಮೊನ್ನೆ ಆದ ಒಂದು ಸಣ್ಣ ಸಂಗತಿ, ತಮಾಷೆಯ ಸಂಗತಿ ಹೇಳುತ್ತೇನೆ. ನಾನು ಒಬ್ಬನೇ ಕೂತು ಅದೇನೋ ಲೆಕ್ಕಾ ಹಾಕುತ್ತಿದ್ದೆ, ಗಿರೀಶರ 'ತಲೆ ದಂಡ' ನಾಟಕವನ್ನು ಆಗತಾನೆ ಓದಿ ಮುಗಿಸಿದ್ದೆ. ಗಿರೀಶ್ ಕಾರ್ನಾಡ್ ಎಂಥ ವಿಚಿತ್ರ ಮನುಷ್ಯರೆಂಬುದು ಅನೇಕರಿಗೆ ಗೊತ್ತಿಲ್ಲ, ಈತ ಮನಸ್ಸು ಮಾಡಿದ್ದರೆ ವಿಕ್ರಮ್ ಶೇಟ್, ಸಲ್ಮನ್ ರಶ್ದಿ, ನಾಯ್‌ಪಾಲ್ ತರಹದ ಇಂಗ್ಲಿಷ್ ಲೇಖಕರಾಗಿ ಮೆರೆಯಬಹುದಿತ್ತು, ನಮ್ಮಲ್ಲಿ ಇಂಗ್ಲಿಷ್ ಭಾಷೆಯನ್ನು ಅದರೆಲ್ಲ ಚೆಂದದೊಂದಿಗೆ ಬಳಸಬಲ್ಲ ವ್ಯಕ್ತಿ ಗಿರೀಶ್. ಇಂಗ್ಲಿಷ್ ಲೇಖಕರ ಆದಾಯ, ಖ್ಯಾತಿ, ವೈಭವ ಅನೇಕರಿಗೆ ಗೊತ್ತಿರಲಿಕ್ಕಿಲ್ಲ, ಕನ್ನಡದಲ್ಲಿ ನೂರು ನಾಟಕ ಬರೆದರೂ ದೊರೆಯದಷ್ಟು ಹಣ ಇಂಗ್ಲಿಷ್ ಕಿರುನಾಟಕದಿಂದ ದೊರೆಯಬಲ್ಲದು. ಆದರೆ ಗಿರೀಶ್ ಅದೆಲ್ಲಕ್ಕೆ ಆಸೆ ಪಡಲಿಲ್ಲ, ಮತ್ತೆ ಮತ್ತೆ ಕನ್ನಡದಲ್ಲೇ ಬರೆಯುತ್ತಾರೆ; ಬರೆಯುತ್ತಾ ಅವರ ಕನ್ನಡ ಶೈಲಿ ಜನಸಾಮಾನ್ಯರ ಮಾತುಗಳನ್ನು, ಸಾಮಾನ್ಯರ ಮಾತಿನ ಗತ್ತು, ಕಮರನ್ನು ಪಡೆಯುತ್ತದೆ. ಅವರ 'ತಲೆದಂಡ' ನಾಟಕದಲ್ಲಿನ ಬಸವಣ್ಣ, ಬಿಜ್ಜಳ ರಾಜ, ಮಂತ್ರಿಯ ಗತ್ತನ್ನೆಲ್ಲ ಬಿಟ್ಟು ಎಲ್ಲ ಮನುಷ್ಯರಂತೆ, ಅಗಾಧ ಸಮಸ್ಯೆಗಳ ಎದುರಿಸುವ ದಿಟ್ಟರಂತೆ ಕಂಡುಬರುತ್ತಾರೆ.



ಇಲ್ಲಿಯ 'ತಲೆದಂಡ' ವಸ್ತುವಿಗಿಂತಲೂ ಪವಾಡ ಅರ್ಥಪೂರ್ಣವಾಗಿದೆ. ಹನ್ನೆರಡನೆ ಶತಮಾನದ ಕ್ಷೌರಿಕ ಜಾತಿಗೆ ಸೇರಿದ ವ್ಯಕ್ತಿಯೊಬ್ಬ (ಈತ ಜೈನ ಎಂದು ನಾನು ಓದಿದ್ದೆ) ಬಸವಣ್ಣನವರ ಮಾಂತ್ರಿಕ ಸ್ಪರ್ಶದಿಂದ ದೊರೆಯಾಗುವುದೇ ಅಲ್ಲದೆ, ಪವಾಡವೊಂದನ್ನು ಕಾಣುತ್ತಾನೆ-ಜೋಳ ಮುತ್ತಾಗುವ, ಬಸವಣ್ಣನವರು ತಮ್ಮ ಧಾರಾಳವನ್ನು ಚಾಣಾಕ್ಷತೆಯಿಂದ ಮುಚ್ಚಿಹಾಕುವ ಪವಾಡವಲ್ಲ; ಶತಮಾನಗಳಿಂದ ಕೆಳಜಾತಿಯವರು, ಕೀಳುಜನ ಎನ್ನಿಸಿಕೊಂಡಿದ್ದ, ಎಂದುಕೊಂಡಿದ್ದ ಜನ ಮನುಷ್ಯರಾಗುವ, ವಿಚಾರವಂತರಾಗುವ, ಕಲಿಗಳಾಗುವ, ದೊರೆಗಳಾಗುವ ಪವಾಡ.



.... ಈ ನಾಟಕ ಓದುತ್ತಿದ್ದಾಗ ನನ್ನನ್ನು ನೋಡಿಕೊಳ್ಳುವ ಹುಡುಗ ನನ್ನ ಕೋಣೆಗೆ ಬಂದು ಹೇಳಿದ: "ಸಾರ್, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ರು ಬಂದಿದ್ದಾರೆ!"

"ಆ? ಏನಂದೆ?" ಅಂದೆ.

"ಮಾಸ್ತಿ ವೆಂಕಟೇಶ್ ಅಯ್ಯಂಗಾರ್ರು ನಿಮ್ಮನ್ನು ನೋಡಲು ಬಂದಿದ್ದಾರೆ."

"ಛೆ, ಮತ್ತೆ ಕೇಳಿಕೊಂಡು ಬಾ-ಅವರಿರಲಾರರು" ಅಂದೆ. ಆತ ಹೋದ ಮರುಕ್ಷಣ ಬಂದು ಹೇಳಿದ, "ಹೌದು ಸಾರ್, ಅವರು ಮಾಸ್ತಿ ವೆಂಕಟೇಶ ಅಯ್ಯಂಗಾರ್ರಂತೆ" ಅಂದ.

ನಾನು ನಕ್ಕೆ, 'ತಲೆದಂಡ'ದ ಗುಂಗಿನಲ್ಲಿದ್ದ ನಾನು ಎದ್ದು "ಸ್ವಲ್ಪ ಇರಲು ಹೇಳು" ಎಂದು ಯೋಚಿಸಿದೆ. ಅವರು ಬರಲು ಸಾಧ್ಯವೇ ಇಲ್ಲ, ಆದರೆ ಆ ಹೆಸರನ್ನು ಪೂರ್ತಿ ಬೇರೆಯವರು ಇಟ್ಟುಕೊಳ್ಳುವುದೂ ಸಾಧ್ಯವಿಲ್ಲ, "ಅಕಸ್ಮಾತ್ ಅವರೇ ಬಂದಿದ್ದರೆ?" ಎಂದು ಕೇಳಿಕೊಂಡು ನಕ್ಕೆ, 'ತಲೆದಂಡ'ದ ಗುಂಗು ತೀವ್ರವಾಯಿತು. ಅನೇಕಾನೇಕ ದೆವ್ವದ, ಅತೀಂದ್ರಿಯ ಕತೆಗಳನ್ನು ಬರೆದ ಮಾಸ್ತಿ ಬಂದೇಬಿಟ್ಟಿದ್ದರೆ? ನಕ್ಕೆ, ಒಂದು ಕ್ಷಣ ಯೋಚಿಸಿದೆ, ಬಾಗಿಲು ತೆರೆದುಕೊಂಡು ಬಂದೇಬಿಟ್ಟರೆ ಗತಿಯೇನೆಂದು ನಾನೇ ಬಾಗಿಲು ತೆರೆದು ನೋಡಿದೆ... ಅಲ್ಲಿ... ಮಾಸ್ತಿಯವರ ಮೂರನೇ ಅಳಿಯ ಶೇಷಾದ್ರಿ ನಿಂತಿದ್ದರು!

"ಛೆ, ಇದೇನ್ರಿ.... ಮಾಸ್ತಿ ಅಂತ ನೀವು ಹೇಳಿಕೊಳ್ಳೋದೆ?" ಅಂದೆ.

"ಹಾಗೆ ಹೇಳದಿದ್ದರೆ ನೀವು ನೋಡೋದಕ್ಕೆ ನಿರಾಕರಿಸ್ತೀರಿ ಅಂತ ಹಾಗಂದೆ" ಅಂದರು.

ಕ್ಷಣದ ತಳಮಳ ತಿಳಿಸಿದೆ. ಅವರು ದೊಡ್ಡದಾಗಿ ನಕ್ಕು, "ನೀವು ಅಂಥದನ್ನೆಲ್ಲ ನಂಬುವುದಿಲ್ಲವಲ್ಲ?" ಅಂದರು.

"ಒಂದು ಕ್ಷಣ ನಂಬಿಕೆ ಸುಳ್ಳಾದರೆ ಗತಿಯೇನು ಹೇಳಿ?" ಅಂದೆ. ಶೇಷಾದ್ರಿ ದೊಡ್ಡದಾಗಿ ನಕ್ಕು ತಮ್ಮ ಕಷ್ಟ ಹೇಳಿಕೊಳ್ಳತೊಡಗಿದರು.

ನಿಮಗೀಗ ಎಷ್ಟು ವಯಸ್ಸು? ಅಂದೆ. ಎಪ್ಪತ್ತಿರಬಹುದೆ? ಎಪ್ಪತ್ತೈದು?'

"ನೀವು ಸತ್ಯಕ್ಕೆ ಹತ್ತಿರ ಇದ್ದೀರಿ" ಎಂದರು, ನಿಗೂಢವಾಗಿ-

'ತಲೆದಂಡ'ದ ಗುಂಗಿನಲ್ಲಿದ್ದ ನಾನು, ಹನ್ನೆರಡನೆ ಶತಮಾನದ ಬಸವಣ್ಣ, ಅಲ್ಲಮರ ಉಯ್ಯಾಲೆಯಲ್ಲಿದ್ದ ನಾನು ಮಾಸ್ತಿಯವರವರೆಗೆ ಹೀಜಿಕೊಂಡಿದ್ದೆ. ಎದುರು ಕೂತು ಮಾತಾಡುತ್ತಿದ್ದ ಮಾಸ್ತಿಯವರ ಅಳಿಯ ಶೇಷಾದ್ರಿಯವರ ಒಂದು ಮಾತೂ ನನ್ನನ್ನು ತಲುಪಲಿಲ್ಲ.

ಪ್ಯಾಲಿಸ್ಟೇನಿಯನ್.....



ನನಗೆ ತೀರಾ ಹತ್ತಿರದ ಸಂಬಂಧಿ-ನನ್ನ ಅಳಿಯ ಚಿದಾನಂದ ರಾಜ್‌ಘಟ್ಟ-ತಿಂಗಳ ಹಿಂದೆ ಗಲ್ಫ್‌ಗೆ ಹೋಗಿದ್ದ; ಅವನ ವೃತ್ತಪತ್ರಿಕೆಯವರು ಅವನನ್ನು ದಿಲ್ಲಿಯಿಂದ ವರದಿಗಾರನಾಗಿ ಕಳಿಸಿದ್ದರು. ಜೋರ್ಡಾನ್ ದೇಶದ ಅಮ್ಮಾನ್‌ಗೆ ಹೋಗಿ ಬಂದಿದ್ದ. ಅಲ್ಲಿಗೆ ಹೋದಮೇಲೆ ಮೊದಲಬಾರಿಗೆ ಬೆಂಗಳೂರಲ್ಲಿದ್ದ, ಜೋರ್ಡಾನ್ ಮರುಭೂಮಿ, ರಾಜಧಾನಿ ಅಮ್ಮಾನ್ ಬಗ್ಗೆ ಹೇಳಿದ. ಆತ ಅಲ್ಲಿಗೆ ಹೋಗುವ ಮುನ್ನ ತಿಳಿದದ್ದು, ಜೋರ್ಡಾನ್ ಮರುಭೂಮಿಯ ನಾಡು, ಅದರ ರಾಜಧಾನಿ ಅಮ್ಮಾನ್ ಬೆಂಕಿಯಂತೆ ಇರಬಹುದು, ನರಕದಂತೆ ಇರಬಹುದು. ಆದರೆ ಅಲ್ಲಿಗೆ ಹೋದಮೇಲೆ ತಿಳಿಯಿತು, ಅಮ್ಮಾನ್ ಬೆಂಗಳೂರಿನಂತಿದೆ. ಅಲ್ಲಿಯ ಹವೆ ಕೂಡ ಇಲ್ಲಿಯಷ್ಟೇ ಹಿತಕರ, ಅಚ್ಚರಿ ಇಟ್ಟುಕೊಂಡು ಅಮ್ಮಾನ್, ಭಾರತೀಯ ನಿರಾಶ್ರಿತರು, ಕುವೈತ್‌ನಿಂದ ತಪ್ಪಿಸಿಕೊಂಡು ಬಂದವರು-ಎಲ್ಲರ ಬಗ್ಗೆ ಆತನ ಪತ್ರಿಕೆಗೆ ವರದಿ ಮಾಡಲು ಅಡ್ಡಾಡಿದ.

ಹೀಗೆ ಅಡ್ಡಾಡುತ್ತಿದ್ದಾಗ ಒಂದು ವಿಶೇಷ ಘಟನೆ ನಡೆಯಿತು. ಅಮ್ಮಾನ್‌ನ ಹೋಟೆಲೊಂದರ ಹತ್ತಿರ ನಿಂತಿದ್ದಾಗ ರಾಕ್ಷಸಾಕಾರದ, ನೋವು ತುಂಬಿದ ಕಣ್ಣುಗಳ, ಉಗ್ರಗಾಮಿ ತರಹದ ವ್ಯಕ್ತಿಯೊಬ್ಬ ಚಿದಾನಂದನ ಕಡೆ ನಡೆದುಬಂದು ತನ್ನ ಮುರುಕಲು ಇಂಗ್ಲಿಷ್‌ನಲ್ಲಿ **"Which Country?"** ಎಂದು ಕೇಳಿದ, ಹೆದರಿಕೊಂಡ ಈತ ತಡವರಿಸುತ್ತಾ "ಇಂಡಿಯಾ" ಅಂದ. **"Where in India?"** ಅಂತ ಆತ ಅದೇ ಗತ್ತಿನಲ್ಲಿ ಕೇಳಿದ. ಈತ ಅಳುಕುತ್ತಲೆ 'ಬೆಂಗಳೂರು' ಅಂದ. ಆ ರಾಕ್ಷಸಾಕಾರದ ಮನುಷ್ಯ ಭಾಗ್ಯ ಸಿಕ್ಕವನಂತೆ ನಕ್ಕು, "ಅರೆ, ಏನ್ ಸ್ವಾಮಿ, ಬೆಂಗಳೂರಿನವರಾಗಿ ಹೀಗೆ ನಿಂತಿದ್ದೀರಿ?" ಎಂದು ಅಚ್ಚ ಕನ್ನಡದಲ್ಲಿ ಮಾತಾಡತೊಡಗಿದ. ಬೆಂಗಳೂರಿನವನೊಬ್ಬ ಆತನಿಗೆ ದೇವತೆಯಂತೆ ಕಾಣತೊಡಗಿದ್ದ. ತನ್ನ ಹುಟ್ಟೂರಿನವರನ್ನು ಮಾತಾಡಿಸುವಂತೆ ಮಂಡ್ಯ, ಶಿವಮೊಗ್ಗ ಕಡೆಯವರು ನಾಚಿಕೊಳ್ಳುವಂಥ ಕನ್ನಡದಲ್ಲಿ ಆತ ಮಾತಾಡುತ್ತಿದ್ದ. ಚಿದಾನಂದ ಖುಷಿಯಿಂದ ಅವನ ಹಿನ್ನೆಲೆಯ ಬಗ್ಗೆ ಕೇಳಿದ. ಆತ ಪ್ಯಾಲಿಸ್ಟೇನಿಯನ್ ಮುಸ್ಲಿಂ; ಗಲ್ಫ್ ಯುದ್ಧ ಶುರುವಾದ ಮೇಲೆ ಸೌದಿ ಅರೇಬಿಯದಲ್ಲಿ ಕೆಲಸ ಕಳೆದುಕೊಂಡು ನಿರುದ್ಯೋಗಿಯಾಗಿ ತಿರುಗುತ್ತಿರುವವನು. ಅವನು ಕೆಲವೇ ವರ್ಷಗಳ ಹಿಂದೆ ಬೆಂಗಳೂರಲ್ಲಿ ಇದ್ದವನು; ಒಂಭತ್ತು ವರ್ಷ ಇಲ್ಲಿ ಓದಿ, ಸಣ್ಣಪುಟ್ಟ ಕೆಲಸ ಮಾಡಿಕೊಂಡು ಸುಖವಾಗಿದ್ದವನು. ಬೆಂಗಳೂರಲ್ಲಿ ಇದ್ದಾಗ ಕನ್ನಡವನ್ನು ಚೆನ್ನಾಗಿ ಕಲಿತವನು. ಅವತ್ತು ಚಿದಾನಂದನಿಗೆ ಪರಿಚಯವಾದ ಮೇಲೆ ದಿನಾ ಸಿಕ್ಕು, "ಏನ್ ಬುದ್ಧಿ, ಚೆನ್ನಾಗಿದ್ದೀರಾ? ಕಾಫಿ ಕುಡಿಯೋಣ ಬನ್ನಿ, ಬೆಂಗಳೂರು ವಿಚಾರ ಹೇಳಿ" ಎಂದು ಕನಸಿನ ನಾಡೊಂದನ್ನು ಮತ್ತೆ ತಲುಪಿದಂತೆ, "ನನಗೆ ಬೆಂಗಳೂರು, ಕನ್ನಡಿಗರು, ಕರ್ನಾಟಕ ತುಂಬ ಇಷ್ಟ. ಅಲ್ಲಿ ಒಂದು ಚಿಕ್ಕ ಕೆಲಸ ಸಿಗುವುದಾದರೆ ತಿಳಿಸಿ. ಬಂದುಬಿಡ್ತೇನೆ!" ಅನ್ನುತ್ತಿದ್ದ.

ಮನುಷ್ಯರ ಹೃದಯ ಎಷ್ಟು ಸುಂದರವಾಗಿ ವರ್ತಿಸುತ್ತದೆ, ಸ್ಪಂದಿಸುತ್ತದೆ!

ಚಿದಾನಂದ ಬೆಂಗಳೂರಿನವನಾಗಿದ್ದೂ ಅವನಿಗೆ ಕನ್ನಡ ಬಾರದೇ ಇದ್ದಿದ್ದರೆ, ಆ ಪ್ಯಾಲಿಸ್ಟೇನಿನ ವ್ಯಕ್ತಿಯೊಂದಿಗೆ ತಮಿಳು ಅಥವಾ ಉರ್ದುವಿನಲ್ಲಿ ಮಾತಾಡಿದ್ದರೆ-ಅವನಿಗೆ ಎಷ್ಟು ಸಿಟ್ಟು ಬರುತ್ತಿತ್ತು, ನೆನೆಸಿಕೊಳ್ಳಿ.

ಮೇಲಿನ ವಿಚಾರವನ್ನು ಚಿದಾನಂದ ಹೇಳುತ್ತಿದ್ದಾಗ ನಾಗರಾಜ್ ತಾನು ಬ್ಯಾಂಕಾಕ್‌ನಲ್ಲಿ ಅನುಭವಿಸಿದ್ದು ಹೇಳಿದ. ಅಲ್ಲಿಯ ಒಬ್ಬ ಥೈಲೆಂಡ್ ಮನುಷ್ಯನಿಗೆ ಕನ್ನಡ ಗೊತ್ತಿದ್ದುದು ಮಾತ್ರವಲ್ಲ, ಆತ ನಮ್ಮ ಪತ್ರಿಕೆಯ ಬಗ್ಗೆ ವಿಚಾರಿಸಿದ್ದ!

ಬಿಡಿ ಚಿತ್ರಗಳು

• ಈಶ

Companionship...

ಕೆಲವರ ಮದುವೆಗಳು ಬರೀ ಮದುವೆಯಾಗೇ ಕೊನೆಯಾಗದೆ ಈ ಕಂಪ್ಯಾನಿಯನ್‌ಶಿಪ್ ಎನ್ನುವ ಹಂತ ತಲುಪಿರುತ್ತವೆ. ಗಂಡು-ಹೆಣ್ಣು ಪರಸ್ಪರರನ್ನು ಪೊರೆಯುತ್ತಾ, ಅಕ್ಕರೆ ಪ್ರೀತಿಯ ಬಟ್ಟಲು ಬರಿದಾಗಲು ಬಿಡದೆ ಚೆಂದನೆಯ ಬದುಕು ಕಟ್ಟಿಕೊಂಡಿರುತ್ತಾರೆ.


ಈ companionship ಬಗ್ಗೆ ರಾಶಿರಾಶಿ ಮಾತು ಅಭಿಪ್ರಾಯಗಳಿವೆ. ಇದರ ಮಧ್ಯೆ ಹೊಸ ಮಾತುಗಳೂ ಹೊಮ್ಮುತ್ತಿರುತ್ತವೆ.

ಮೊನ್ನೆ ಹೀಗೇ ಆಯಿತು.

ಅದೊಂದು ದೊಡ್ಡ ಗ್ಯಾದರಿಂಗ್. ಸನ್ಮಾನ ಸಮಾರಂಭದ ಆ ವೇದಿಕೆಯ ಮೇಲೆ ಅರೆ ಸಂತೋಷ ಮುಕ್ಕಾಲುವಾಸಿ ಸಂಕೋಚದಿಂದ ಒಬ್ಬ ಹಿರಿಯ ಮನುಷ್ಯ ಕುಳಿತಿದ್ದಾರೆ. ಇನ್ನೇನು ಸಮಾರಂಭ ಮುಗಿಯಲಿದೆ ಎನ್ನುವಾಗ 'ಒಂದೆರಡು ಮಾತಾಡಲಾ' ಅಂತ ಕೇಳಿಕೊಂಡ ಅವರ ಪತ್ನಿ ಹೇಳಿದ್ದಿಷ್ಟೆ:

"ನನ್ನ ಬದುಕಿನ ಪ್ರಯಾಣ ಚೆನ್ನಾಗಿತ್ತು,

ಈ ಸಹಪ್ರಯಾಣಿಕನೂ ಚೆನ್ನಾಗಿದ್ದ."



-ಇಡೀ ಸಭೆಗೆ ಒಂದು ಹೃದಯಸ್ಪರ್ಶಿ, ಕಾವ್ಯಾತ್ಮಕ ಮೂಡ್ ತಂದು ಕೊಟ್ಟಿತು. ಇಷ್ಟು ಚೆಂದನೆಯ ಮಾತನ್ನಾಡಿದಾಕೆ ಹಸನತ್ ಮನ್ಸೂರ್. ಪ್ರೊಫೆಸರ್ ಹಸನ್ ಮನ್ಸೂರ್‌ರ ಸಂಗಾತಿ.

ಸೆವೆಂಟಿ ಪ್ಲಸ್ ವಯಸ್ಸಿನ ಈ ಜೋಡಿಯ ನಡುವೆ ಅದೆಂತಾ ಪ್ರೀತಿ, ಅಕ್ಕಲಾತಿ ಇದೆಯೆಂಬುದಕ್ಕೆ ಹಸನತ್‌ರ ಈ ಮಾತುಗಳೇ ಸಾಕ್ಷಿ.

'ಜೀವನ ಪ್ರಯಣ ಚೆನ್ನಾಗಿತ್ತು, ಸಹ ಪ್ರಯಾಣಿಕನೂ



ಹಿರಿಯ ಮನುಷ್ಯ ಹಸನ್ ಮನ್ಸೂರ್ ಕಳೆದ ಇಪ್ಪತ್ತೈದು ವರ್ಷಗಳಿಂದ ಕರ್ನಾಟಕದಲ್ಲಿ Human Rights ಗಾಗಿ ದನಿ ಎತ್ತುತ್ತಾ ಬಂದಿದ್ದಾರೆ. ಈಗಲೂ ಚಟುವಟಿಕೆಯಿಂದಿದ್ದಾರೆ. 1980 ರ ಸುಮಾರಿಗೆ ಕಾಣಿಸಿಕೊಂಡ ಕರ್ನಾಟಕ ಸಿವಿಲ್ ಲಿಬರ್ಟೀಸ್ ಕಮಿಟಿ (KCLC) ಬಹುಶಃ ರಾಜ್ಯದ ಮೊದಲ ಮಾನವಹಕ್ಕು ಸಂಘಟನೆ. ಆಗ ಇವರ ಗುಂಪಿನಲ್ಲಿ ನಗರಿ ಬಾಬಯ್ಯ, ಲಕ್ಷ್ಮೀನಾರಾಯಣ್, ಪತ್ರಕರ್ತ ಚಂದ್ರಮೌಳಿ, ರಾಮದಾಸ್‌ರಾವ್ ಮುಂತಾದವರೆಲ್ಲಾ ಇದ್ದರು. ನಕ್ಸಲ್ ಚಳವಳಿಗೆ ಸೇರುವ ಮೊದಲು ಸಾಕೇತ್ ರಾಜನ್ ಕೂಡ ಕೆಲಕಾಲ ಇದೇ ಚಟುವಟಿಕೆಯಲ್ಲಿದ್ದರೆನ್ನುವ ಮಾತು ಇತ್ತು.

ಹಸನ್ ಮನ್ಸೂರ್ ಮತ್ತವರ ಗೆಳೆಯರ ಗುಂಪಿಗೆ ಸವಾಲಿನಂತೆ ಮೊಟ್ಟ ಮೊದಲು ಎದುರಾಗಿದ್ದೇ ಪ್ರೊ. ನಗರಿ ಬಾಬಯ್ಯನವರ ಪ್ರಕರಣ. 1986 ರ ಏಪ್ರಿಲ್ 23 ರಂದು ಎಂದಿನಂತೆ ಬೆಂಗಳೂರು ಯೂನಿವರ್ಸಿಟಿಯಲ್ಲಿ ಇಂಗ್ಲಿಷ್ ಪಾಠ ಹೇಳಲು ಮನೆಯಿಂದ ಹೊರಟ ಬಾಬಯ್ಯ ಸಂಜೆ ಮನೆಗೆ ವಾಪಸಾಗ ಲಿಲ್ಲ. ಎರಡು ದಿನ ಕಳೆದ ಮೇಲೆ ಪೊಲೀಸರು ಬಾಬಯ್ಯರನ್ನು ಹಿಡಿದಿಟ್ಟು ಕೊಂಡಿದ್ದಾರೆಂದು ಗೊತ್ತಾಯಿತು. ಆಂಧ್ರದ ನಕ್ಸಲೀಯನೊಬ್ಬನಿಗೆ ಬಾಬಯ್ಯ ಬಾಡಿಗೆ ಮನೆ ಕೊಡಿಸಿದ್ದರೆಂಬ ಅನುಮಾನದ ಮೇಲೆ ಈ ಬಂಧನ ನಡೆದಿತ್ತು. ಇನ್ನೂ ವಿಚಿತ್ರ ಅಂದರೆ ಮಾಜಿ ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪನವರಿಗೆ ಸೇರಿದ್ದ ಮನೆಯೊಂದರ ಔಟ್‌ಹೌಸ್ ಅದಾಗಿತ್ತು. ಆಮೇಲೆ ತಿಂಗಳಾನುಗಟ್ಟಲೆ ರಾಜ್ಯ ಪೊಲೀಸರ ಚಿತ್ರಹಿಂಸೆಗೆ ಸಿಲುಕಿ ನಲುಗಿದ ಬಾಬಯ್ಯ ಆಂಧ್ರ ಪೊಲೀಸರ ವಶವಾಗದೇ ಜೀವಂತ ಹೊರಬಂದಿದ್ದೇ ಒಂದು ಪವಾಡ. ಕೊನೆಗೆ ಬಾಬಯ್ಯ ವಿರುದ್ಧದ ಕೇಸೂ ಬಿದ್ದುಹೋಯಿತು ಬಿಡಿ.

ಮಾನವಹಕ್ಕು ಸಂಘಟನೆಗಳು ಬಿಟ್ಟುಬಿಡದೆ ಪ್ರತಿಭಟಿಸುತ್ತಲೇ ಹೋದ ಕಾರಣ ರಾಜ್ಯದ ಜನರಿಗೆ ಇಬ್ಬರು ದೊಡ್ಡ ಮನುಷ್ಯರು ಸಿಕ್ಕರು. ಅವರಲ್ಲಿ ಬಾಬಯ್ಯ ಒಬ್ಬರಾದರೆ ಇನ್ನೊಬ್ಬರು ಈ ಹಸನ್ ಮನ್ಸೂರ್.

ರಾಯಲಸೀಮಾದ ರಾಮಾಮೃತಂ ಹಸನ್ ಮನ್ಸೂರ್ ಆಗಿ ಬದಲಾದದ್ದೂ ಒಂದು ರೋಮ್ಯಾಂಟಿಕ್ ಅಧ್ಯಾಯ.

ಹಸನತ್‌ರ ಸ್ನೇಹ ಸಿಕ್ಕ ನಂತರ ತಮ್ಮ ಹಿಂದಿನ ಮದುವೆ ಸಂಬಂಧದಿಂದ ಹೊರಬಂದ ರಾಮಾಮೃತಂಗೆ ಹಸನತ್ ಜೊತೆಯಾದರು. ಅಲ್ಲಿಂದಾಚೆಗೆ ಈ ದಂಪತಿಗಳ ಜೀವನ ಪಯಣ ಸಾಗಿಬಂದಿದೆ.

ಇವತ್ತಿನ ಕೆಟ್ಟ ಪರಿಸ್ಥಿತಿಯಲ್ಲಿ ಮಾನವಹಕ್ಕುಗಳ ಬಗ್ಗೆ ಮಾತಾಡಲು, ಅವುಗಳಿಗಾಗಿ ಬಡಿದಾಡಲು ಅಪಾರ ಎದೆಗಾರಿಕೆ, ಇಚ್ಛಾಶಕ್ತಿ ಬೇಕು. ಲಂಗುಲಗಾಮಿ ರದ ಸರ್ಕಾರ-ಪೊಲೀಸ್ ವ್ಯವಸ್ಥೆಗೆ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅರ್ಥ ಮಾಡಿಸಲು ಇವೆಲ್ಲಾ ಬೇಕೇಬೇಕು.

ಇಂತದ್ದರಲ್ಲಿ ಹಸನ್ ಮನ್ಸೂರ್ ಒಬ್ಬ ಕಮಿಟೆಡ್ ಮನುಷ್ಯ. ಅವರು ಮಾಡಿರುವ ಕೆಲಸಗಳನ್ನು ನೆನಪಿಸಿಕೊಂಡು ಅಭಿನಂದಿಸಲೆಂದೇ ಮೊನ್ನೆ ಈ ಸಭೆ ನಡೆದದ್ದು. ಕೆಲ ಎನ್‌ಜಿಓಗಳು ಅರೇಂಜ್ ಮಾಡಿದ್ದ ಈ ಸಭೆಯಲ್ಲಿ ವೇದಿಕೆಯ ಮೇಲೆ ಹಸನ್ ಮನ್ಸೂರ್ ಹಾಗೂ ಹಸನತ್ ಇದ್ದರು. ಕೆಲ ಗಣ್ಯರೂ ಇದ್ದರು. ನಮ್ಮ ಪ್ರಗತಿಪರರು ಆವಾಗಾವಾಗ ಮಾಡುವ ಎಡವಟ್ಟು ಅಲ್ಲೂ ಸಂಭವಿಸಿತು. ಸಂದರ್ಭ, ಸೂಕ್ಷ್ಮ ಗಮನಿಸದ ಸಂಘಟಕರು ಹಸನತ್‌ರ ಕೈಲಿ ನಾಲ್ಕು ಮಾತಾಡಿಸಬೇಕೆಂಬುದನ್ನು ಮರೆತು ಸಭೆ ಇನ್ನೇನು ಬರಕಾಸ್ತಾಯಿತು ಎನ್ನುವಾಗ ಸ್ವತಃ ಹಸನತ್ ಎದ್ದು 'ನಾನು ಒಂದೆರಡು ಮಾತಾಡಲಾ' ಅಂದರಂತೆ.

ಆಮೇಲೆ ಶುರುವಾಗಿದ್ದೇ ಈ companionship ಬಗೆಗಿನ ಹೊಚ್ಚಹೊಸ ಚಂದದ ಮಾತುಗಳು.

ತಮ್ಮ ಬದುಕಿನ ಗುರಿ ಸಾಧನೆ ಬಗ್ಗೆ ಮಾತಾಡುತ್ತಾ ಹೋದ ಹಸನತ್, ಹಸನ್ ಮನ್ಸೂರ್‌ರತ್ತ ಕೈತೋರಿ "ನನಗೆ ಹೆಚ್ಚೇನೂ ಗೊತ್ತಿರಲಿಲ್ಲ, ಆದರೆ ಈ ಜೆಂಟಲ್‌ಮ್ಯಾನ್ ಬಹಳಷ್ಟು ಕಲಿಸಿಕೊಟ್ಟರು" ಎಂದರು. ಅಲ್ಲಿದ್ದ ಜನರಿಗೆಲ್ಲಾ "ನೀವೆಲ್ಲಾ ನಮ್ಮ ಪ್ರಜ್ಞೆಯ ಭಾಗವಾಗಿದ್ದೀರಿ" ಎಂದು ಧನ್ಯವಾದ ತಿಳಿಸಿ ಕೊನೆಗೊಂದು ಶಾಯರಿ ಹೇಳಿದ್ದಾರೆ.

ಮಂಜಿಲೊಂಕೆ ಸಿಪಾಯಿಯೋ
ಮಂಜಿಲೊಂಕೆ ಬಾರೆಮೆ
ಮತ್ ಪೂಚೋ
ಸಫರ್ ಅಚ್ಛಾ ರಹಾ
ಹಂಸಫರ್ ಅಚ್ಛ ರಹಾ
ಗುರಿಯತ್ತ ಹೊರಟ
ಸಿಪಾಯಿಗಳೇ,
ನಾನು ಗುರಿ ತಲುಪಿದೆನಾ
ಹೇಳಲಾರೆ,
ಆದರೆ ಪಯಣ ಚೆನ್ನಾಗಿತ್ತು
ಸಹ ಪ್ರಯಾಣಿಕನೂ ಚೆನ್ನಾಗಿದ್ದ....

ಚೆಂದನೆಯ ವೃದ್ಧೆ ಹಸನತ್ ತಮ್ಮ ಜೀವನಯಾತ್ರೆಯ ಬಗ್ಗೆ, ಜೊತೆಗಾರ ಹಸನ್ ಮನ್ಸೂರ್ ಬಗ್ಗೆ ಹೀಗೆ ಭಾವುಕವಾಗಿ ಮಾತು ಮುಗಿಸುತ್ತಿದ್ದಂತೆ ಅಲ್ಲಿದ್ದ ಬಹುತೇಕರ ಕಣ್ಣುಗಳು ಒದ್ದೆಮುದ್ದೆ.

Do not walk behind me
For I cannot lead
Do not walk ahead of me
For I shall not follow
Just walk by my side
And be my friend

-ಸಾಂಗತ್ಯ ಕುರಿತಾದ ಆಲ್ಬರ್ಟ್ ಕಾಮುನ ಮಾತು ನೆನಪಿಸುವಂತಿಲ್ಲವೆ ಹಸನತ್‌ರ ಭಾಷಣ.

ಈ ವಿವರಗಳನ್ನೆಲ್ಲಾ ಕೇಳಿದ ಮೇಲೆ companionship ಬಗ್ಗೆ ಹರಟುತ್ತಿದ್ದಾಗ ಕವಿತಾ ಲಂಕೇಶ್ ಪ್ರಾಣಿ ಜಗತ್ತಿನ ಒಂದು ವಿಶಿಷ್ಟ ಸಂಗತಿ ಹೇಳಿದರು.

ಅದು ಪೆಂಗ್ವಿನ್ ಕುರಿತಾದ್ದು.

ಮದುವೆ-ಸಂಸಾರವೆಂಬ ಖಾಯಂ ವ್ಯವಸ್ಥೆಯಿರದ ಪ್ರಾಣಿ ಜಗತ್ತಿನಲ್ಲಿ ಈ ಪೆಂಗ್ವಿನ್‌ಗಳ ಜೀವನಕ್ರಮ ಬೇರೆಯಾಗಿದೆ. 'ಪ್ರೀತಿಸುವ ದಿನಗಳು' ಬಂದಾಗ ಈ ಪೆಂಗ್ವಿನ್‌ಗಳು ತಮ್ಮ ಹಿಂದಿನ ವರ್ಷದ ಸಂಗಾತಿಗಳನ್ನೇ ಹುಡುಕಿ ಜೊತೆಲಿರುತ್ತವಂತೆ. ಸಾವಿರಾರು ಸಂಖ್ಯೆಯಲ್ಲಿ ಗುಂಪಾಗಿ ಜೀವಿಸುವ ಹೆಚ್ಚುಕಡಿಮೆ ಒಂದೇ ತರ ಕಾಣುವ ಪೆಂಗ್ವಿನ್‌ಗಳು ಅದು ಹೇಗೆ ತಮ್ಮ ಜೊತೆಗಾರರಾಗಿದ್ದ ಇನ್ನೊಂದನ್ನು ಪತ್ತೆಹಚ್ಚುತ್ತವೆಂಬುದು ಆಶ್ಚರ್ಯ ಅಲ್ಲವಾ? ■

ಒಂದು ಪತ್ರ

ಟಿಪ್ಪು ಸುಲ್ತಾನರ ಕುರಿತು ಅವಾಂತರ ಹೇಳಿಕೆ

"ಟಿಪ್ಪೂ ಸುಲ್ತಾನ್ ಮತಾಂಧನಾಗಿದ್ದ, ಕನ್ನಡದ್ರೋಹಿಯಾಗಿದ್ದ, ಆತನ ಆಡಳಿತಾವಧಿಯಲ್ಲಿ ಪರ್ಷಿಯನ್ ಭಾಷೆ ಬಳಸಲಾಗುತ್ತಿತ್ತು" ಎಂಬ ಹುರುಳಿಲ್ಲದ ವಾದವನ್ನು ಮಾಡಿ ವಿವಾದವೆಬ್ಬಿಸಿದ್ದ ಸಚಿವ ಶಂಕರಮೂರ್ತಿಯ ಹೇಳಿಕೆಯನ್ನು ಪ್ರಜ್ಞಾವಂತರು ಖಂಡಿಸಿ ಪ್ರತಿಭಟಿಸಿದಾಗ "ನನ್ನ ಹೇಳಿಕೆಯಿಂದ ಯಾರಿಗಾದರೂ ನೋವುಂಟಾಗಿದ್ದರೆ ಕ್ಷಮಿಸಬೇಕು" ಎಂಬುದಾಗಿ ಹೇಳಿ ತಮ್ಮ ಅವಿವೇಕತನವನ್ನು ಈ ರಾಜ್ಯದ ಜನತೆಯ ಮುಂದೆ ಪ್ರದರ್ಶಿಸಿದ್ದರು.

ಇದೀಗ ಇದ್ದಕ್ಕಿದ್ದಂತೆ ವಕ್ಫ್ ಸಚಿವ ಮಮ್ತಾಜ್ ಅಲಿಖಾನ್‌ರವರು "ಶಂಕರಮೂರ್ತಿಯವರ ಹೇಳಿಕೆಯಲ್ಲಿ ಸತ್ಯಾಂಶವಿತ್ತು, ಟಿಪ್ಪೂ ಸುಲ್ತಾನ್ ತನ್ನ ಆಡಳಿತಾವಧಿಯಲ್ಲಿ ಹಿಂದೂಗಳನ್ನು ಇಸ್ಲಾಂ ಧರ್ಮಕ್ಕೆ ಮತಾಂತರ ಮಾಡಲು ಯತ್ನಿಸಿದ್ದು ನಿಜ" ಎಂಬ ಹೇಳಿಕೆ ನೀಡಿ ವಿವಾದವನ್ನು ಕೆದಕುವ ಯತ್ನ ಮಾಡಿದ್ದಾರೆ.

ಇತಿಹಾಸದ ಪುಟದಲ್ಲಿ ಅಚ್ಚಳಿಯದಂತೆ ಸೇರ್ಪಡೆಯಾಗಿರುವ ಟಿಪ್ಪೂ ಸುಲ್ತಾನರ ಬಗ್ಗೆ ಮಾತಾಡುವಷ್ಟು ನೈತಿಕತೆ ಈ ಸಚಿವರಿಗಿಲ್ಲ. ಟಿಪ್ಪೂವಿನ ಆಡಳಿತಾವಧಿಯಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿತ್ತು ಎಂಬುದಕ್ಕೆ ಚಾರಿತ್ರಿಕ ದಾಖಲೆಗಳಿರುವುದು ಇವರುಗಳಿಗೆ ತಿಳಿದಿಲ್ಲವೆಂದಲ್ಲ, ಒಟ್ಟನಲ್ಲಿ ಆರೆಸ್ಸೆಸ್ಸಿನ ತತ್ವ ಸಿದ್ಧಾಂತಗಳು ಬೆಳೆಯಬೇಕಾದರೆ ಯಾವ್ಯಾವ ಕುತಂತ್ರಗಾರಿಕೆ ಮಾಡಬೇಕೋ ಅವೆಲ್ಲವನ್ನೂ ಹಂತಹಂತವಾಗಿ ಮಾಡತೊಡಗಿದ್ದಾರೆ.

ಐತಿಹಾಸಿಕ ದಾಖಲೆಗಳಲ್ಲಿ ಆರೆಸ್ಸೆಸ್ ತತ್ವಗಳಿಗೆ ಸರಿಸಮನಾಗದ ಯಾವ ವ್ಯಕ್ತಿಗಳ ಹೆಸರೂ ಉಳಿಯಬಾರದು, ಅವರೆಲ್ಲರೂ ನಾಮಾವಶೇಷವಾಗಬೇಕೆಂಬುದು ಆರೆಸ್ಸೆಸ್ಸಿನ ನಿಲುವಾಗಿರಬಹುದು. ಆದ್ದರಿಂದ ಆ ನಿಲುವಿಗೆ ಬದ್ಧರಾಗಿರುವವರು ಒಂದೊಂದು ವಿವಾದಾತ್ಮಕ ಹೇಳಿಕೆಗಳನ್ನು ಕೊಟ್ಟು ಅದರಿಂದ ಲಾಭ ಪಡೆಯುವ ಯತ್ನದಲ್ಲಿದ್ದಾರೆ.



ಟಿಪ್ಪೂ ಸುಲ್ತಾನ್ ಒಬ್ಬ ಮತಾಂಧನಾಗಿದ್ದು ನಿಜವೆನ್ನುವವರು, ಯಾತಕ್ಕಾಗಿ ಜನರು ಮತಾಂತರಗೊಳ್ಳುತ್ತಿದ್ದರು, ತಮ್ಮ ಧರ್ಮವನ್ನು ಬಿಟ್ಟು ಬೇರೊಂದು ಧರ್ಮಕ್ಕೆ ಸೇರಿರುವವರ ಹಿನ್ನೆಲೆಯೇನಿತ್ತು ಎಂಬುದನ್ನು ಅಧ್ಯಯನ ಮಾಡಲಿ.

ಸ್ವಾಭಿಮಾನಿಯಾಗಿದ್ದ ಟಿಪ್ಪೂ ಈ ನಾಡಿನ ವಿರೋಧಿಯಾಗಿರಲಿಲ್ಲ, ಬಂಡವಾಳಶಾಹಿ ಪದ್ಧತಿಯನ್ನು, ವಸಾಹತುಶಾಹಿಯನ್ನು ಬಲವಾಗಿ ವಿರೋಧಿಸುತ್ತಿದ್ದರು. ತಮ್ಮ ಪ್ರಾಣವನ್ನೇ ಒತ್ತೆಯಿಟ್ಟು ಬ್ರಿಟಿಷರ ವಿರುದ್ಧ ಹೋರಾಡಿರುವ ಅಪ್ಪಟ ದೇಶಪ್ರೇಮಿಯಾಗಿದ್ದರು.

ಪರಮತಸಹಿಷ್ಣುವಾಗಿದ್ದ ಟಿಪ್ಪೂ ಮತಾಂಧ ಅರಸನಾಗಿರಲಿಲ್ಲ. ಶೃಂಗೇರಿ ಮಠ ಉಳಿಯಲು ಕಾರಣರಾಗಿದ್ದ, ಮತ್ತು ಅನೇಕ ದೇವಾಲಯಗಳಿಗೆ ದಾನ, ಪೂಜಾ ಪರಿಕರಗಳನ್ನು ಕೊಡುಗೆಯಾಗಿ ಕೊಟ್ಟಿದ್ದ ಟಿಪ್ಪೂ ಸುಲ್ತಾನರನ್ನು ಮುಸ್ಲಿಂ ಮತಾಂಧನೆಂದು ಕರೆಯುವವರು ನಿಜಕ್ಕೂ ಮೂರ್ಖರು.

-ಕಿರುಗುಂದ ರಫೀಕ್


ಜೀನಿಬಿ ಕತೆ

ತನ್ನ ವಿಧಿಯ ಬಗ್ಗೆ ದೂರಿದ ಮಹಿಳೆಯೊಬ್ಬಳಿಗೆ "ನಿನ್ನ ವಿಧಿಯನ್ನು ನಿರ್ಧರಿಸುವವಳು ನೀನೇ" ಎಂದು ಗುರುಗಳು ಹೇಳಿದರು.

"ಆದರೆ ಮಹಿಳೆಯಾಗಿ ಜನ್ಮವೆತ್ತುವುದು ನನ್ನ ಆಯ್ಕೆಯಾಗಿರಲಿಲ್ಲವಲ್ಲಾ?" ಎಂದು ಆಕೆ ಪ್ರಶ್ನಿಸಿದಳು.

"ಮಹಿಳೆಯಾಗಿ ಹುಟ್ಟಿದ್ದೇ ನಿನ್ನ ವಿಧಿಯಲ್ಲ, ಅದು ನಿನಗೆ ಬಂದ ಪಾಡು. ಆದರೆ ನಿನ್ನ ಸ್ತ್ರೀತನವನ್ನು ಒಪ್ಪಿಕೊಂಡು ನೀನು ನಿನ್ನ ಭವಿಷ್ಯವನ್ನು ಹೇಗೆ ರೂಪಿಸಿಕೊಳ್ಳುತ್ತೀಯೋ ಅದು ನಿನ್ನ ವಿಧಿ" ಎಂದು ಗುರುಗಳು ಹೇಳಿದರು.






ನಟ ಅಜಯ್‌ಗೆ ನಿರ್ಮಾಪಕನ ಜೀವ ಬೆದರಿಕೆ!

ಇಷ್ಟು ದಿನ ಸ್ಟಾರ್ ನಟರ ಕಾಲ್‌ಶೀಟ್ ಪಡೆಯಲು ಗಾಂಧಿನಗರದ ನಿರ್ಮಾಪಕರು ಪ್ರಭಾವಿ ವ್ಯಕ್ತಿಗಳ ಅಥವಾ ರಾಜಕಾರಣಿಗಳ ಇನ್‌ಫ್ಲುಯೆನ್ಸ್ ಬಳಸುತ್ತಿದ್ದರು. ಆದರೆ ಈಗ ಬಾಲಿವುಡ್ ಶೈಲಿಯಲ್ಲಿ ನಾಯಕನಟನ ಕಾಲ್‌ಶೀಟ್‌ಗಾಗಿ ರೌಡಿಸಂ ನಡೆಸುವ ಸಂಸ್ಕೃತಿ ಆರಂಭವಾಗಿದೆ.

ನಿನ್ನೆಮೊನ್ನೆಯ ತನಕ ಯಾವುದೇ ಸಿನಿಮಾಗಳಿಲ್ಲದೇ ಒದ್ದಾಡುತ್ತಿದ್ದ ಅಜಯ್ ಎಂಬ ಹೀರೋ ಪಾಲಿಗೆ 'ತಾಜ್‌ಮಹಲ್' ಚಿತ್ರದ ಯಶಸ್ಸೇ ಈಗ ಮುಳುವಾಗಿ ಪರಿಣಮಿಸಿದೆ ಎಂದರೆ ನಿಮಗೆ ಅಚ್ಚರಿಯಾಗಬಹುದು. ಆದರೆ ಅದು ನಿಜ. 'ಲಂಕೇಶ್' ವಾರ ಪತ್ರಿಕೆಗೆ ಸ್ವತಃ ಫೋನ್ ಮಾಡಿದ ಅಜಯ್ ತಿಳಿಸಿದ್ದೇನೆಂದರೆ 'ತಾಜ್‌ಮಹಲ್' ಚಿತ್ರದ ಯಶಸ್ಸಿನ ನಂತರ ಈತನ ಕಾಲ್‌ಶೀಟ್‌ಗಾಗಿ ಪ್ರವೀಣ್ ಕುಮಾರ್ ಅಲಿಯಾಸ್ ಡಿ.ಕೆ. ರಾಮಕೃಷ್ಣ ಎಂಬ ನಿರ್ಮಾಪಕನಿಂದ ಮೇಲಿಂದ ಮೇಲೆ ಒತ್ತಡಗಳು ಆರಂಭವಾಗಿವೆ. ಬರೀ ಒತ್ತಡಗಳಷ್ಟೇ ಆಗಿದ್ದರೆ ಈ ಹುಡುಗ ಅದು ಹೇಗೋ ನಿಭಾಯಿಸುತ್ತಿದ್ದ. ಆದರೆ ಪ್ರವೀಣ್ ಕುಮಾರ್ ಈತನ ಮೇಲೆ ಅಕ್ಷರಶಃ ಗೂಂಡಾಗಿರಿ ನಡೆಸಿದ್ದಾನೆ.


ಪ್ರವೀಣ್

ಈ ಹಿಂದೆ ಇದೇ ಪ್ರವೀಣ್ ಕುಮಾರ್ ರವಿಚಂದ್ರನ್ ಅಭಿನಯಿಸಿದ್ದ 'ಪಾಂಡುರಂಗ ವಿಠಲ' ಮತ್ತು 'ಯುಗಾದಿ' ಎಂಬ ಚಿತ್ರಗಳನ್ನು ನಿರ್ಮಿಸಿದ್ದನಲ್ಲದೆ ಇನ್ನೇನು ಬಿಡುಗಡೆಯಾಗಲು ರೆಡಿಯಾಗಿರುವ 'ಮಹರ್ಷಿ' ಎಂಬ ಚಿತ್ರದ ನಿರ್ಮಾಪಕನೂ ಈತನೇ. 'ತಾಜ್‌ಮಹಲ್' ಬಿಡುಗಡೆಯಾಗಿ ಯಾವಾಗ ಹಿಟ್ ಆಯಿತೋ ಆಗ ಪ್ರವೀಣ್ ಕುಮಾರ್ ಅಜಯ್ ಬಳಿ ಬಂದು ಆತ ಎಷ್ಟು ಬೇಡಬೇಡವೆಂದರೂ ಅವನ ಕೈಗೆ ಒಂದು ಲಕ್ಷದ ಅಡ್ವಾನ್ಸ್ ಕೊಟ್ಟು "ನನ್ನ ಮುಂದಿನ ಸಿನಿಮಾದಲ್ಲಿ ನಟಿಸಬೇಕು" ಎಂದಿದ್ದಾನೆ.

"ಸರಿ, ಇಷ್ಟೊಂದು ಒತ್ತಡ ಮಾಡುತ್ತಿದ್ದೀರಲ್ಲಾ ಇರಲಿ" ಎಂದ ಅಜಯ್ "ಆದಷ್ಟು ಬೇಗ ಕಥೆ ಸಿದ್ಧಮಾಡಿ" ಎಂದಿದ್ದಾನೆ. ಆದರೆ ಅಜಯ್‌ನಿಂದ ಪ್ರವೀಣ್ ಯಾವ ಕಾಲ್‌ಶೀಟಿಗೂ ಸಹಿ ಪಡೆದಿಲ್ಲ. ಡಿ. ರಾಜೇಂದ್ರಬಾಬು ಬಳಿ ಸಹಾಯಕನಾಗಿದ್ದ ಅರುಣ್ ಕುಮಾರ್ ಈ ಚಿತ್ರವನ್ನು ನಿರ್ದೇಶಿಸುತ್ತಾರೆ ಎಂದ ಪ್ರವೀಣ್ ಉಳಿದಂತೆ ನಾಯಕ ನಟಿ, ತಾಂತ್ರಿಕ ವರ್ಗ ಯಾರೆಂದೂ ಚರ್ಚಿಸಿಲ್ಲ. ಆದರೂ ಒಮ್ಮಿಂದೊಮ್ಮೆಗೆ ಪತ್ರಿಕೆಗಳಿಗೆ ಜಾಹೀರಾತುಗಳನ್ನು ನೀಡಿ "ನಮ್ಮ ಮುಂದಿನ ಚಿತ್ರದ ನಾಯಕ ನಟ ಅಜಯ್, ನಾಯಕ ನಟ ಪೂಜಾ ಗಾಂಧಿ" ಎಂದು ಸಾರಿದ್ದಾನೆ.

ಇದನ್ನು ಕಂಡು ಅಜಯ್ ಸಹಜವಾಗಿಯೇ ಕಂಗಾಲಾಗಿದ್ದಾನೆ. "ಇದೇನಿದು? ಇನ್ನೂ ಕಥೆಯೇ ಸಿದ್ಧಗೊಂಡಿಲ್ಲ, ನಾನು ಕಾಲ್‌ಶೀಟ್ ಕೂಡ ನೀಡಿಲ್ಲ ಆದರೂ ನೀವು ಜಾಹೀರಾತು ನೀಡಿದ್ದೀರಲ್ಲಾ" ಎಂದು ಪ್ರವೀಣ್‌ಕುಮಾರ್‌ನನ್ನು ಪ್ರಶ್ನಿಸಿದ್ದಾನೆ.

ಆದರೆ ಅಜಯ್‌ನ ಈ ಪ್ರಶ್ನೆಗೆ "ನಿನ್ನ ಡೇಟ್ಸ್‌ಗೋಸ್ಕರ ನಿನ್ನ ಪರ್ಮಿಷನ್ ಬೇರೆ ತೊಗೋಬೇಕಾ? ನಾನು ಡಿಸೈಡ್ ಮಾಡಿದ ಮೇಲೆ ಮುಗೀತು. ನನ್ನ ಸಿನಿಮಾದಲ್ಲಿ ನಟಿಸಲಿಲ್ಲ ಅಂದರೆ ಬೇರೆ ಯಾವ ಚಿತ್ರದಲ್ಲೂ ನಿನ್ನ ಮುಖ ಕಾಣಿಸಬಾರದು... ನನ್ನ ಕಾಂಟ್ಯಾಕ್ಟ್‌ಗಳು ಎಂಥದ್ದು ಅಂತಾ ನಿನಗೆ ಗೊತ್ತಾ? ನಾನು ಎಂಕೌಂಟರ್‌ಗೇ ಬೆದರಿಲಿಲ್ವಿನಿ" ಎಂದು ಥೇಟು ಬೀದಿ ರೌಡಿಯ ಹಾಗೆ ಧಮಕಿ ಹಾಕಿದ್ದಾನೆ ಪ್ರವೀಣ್.

ಪ್ರವೀಣ್ ಕುಮಾರನ ಇಂತಹ ವರ್ತನೆಯಿಂದ ಬೇಸರಗೊಂಡ ಅಜಯ್ "ನನಗೆ ನಿಮ್ಮ ಚಿತ್ರದಲ್ಲಿ ನಟಿಸಲು ಇಷ್ಟವಿಲ್ಲ, ನೀವು ಕೊಟ್ಟ ಹಣ ವಾಪಸ್ ತಗೊಳ್ಳಿ. ನನ್ನಿಂದ ಏನಾದರೂ ತಪ್ಪಾಗಿದ್ದರೆ ಛೇಂಬರ್‌ನಲ್ಲಿ ದೂರುಕೊಡಿ. ಅದುಬಿಟ್ಟು ನನಗೆ ಮಾನಸಿಕವಾಗಿ ಒತ್ತಡ ಉಂಟುಮಾಡಬೇಡಿ" ಎಂದು ಗೋಗರೆದಿದ್ದಾನೆ. ಆದರೆ ಪ್ರವೀಣ್ ಮಾತ್ರ ಪಟ್ಟುಬಿಡದೆ ಅಜಯ್‌ನ ಬೆನ್ನು ಹತ್ತಿದ್ದಾನೆ.

ಈ ಹಿಂದೆ ಇದೇ ಅಜಯ್ ಸೋಲಿನ ಸುಳಿಯಲ್ಲಿದ್ದಾಗ ಒಂದು ಸಣ್ಣ ಸಮಾಧಾನವನ್ನಾಗಲಿ, ಆತ್ಮಸ್ಥೈರ್ಯವನ್ನಾಗಲಿ ಗಾಂಧಿನಗರದವರು ನೀಡಿರಲಿಲ್ಲ. ಕಳೆದ ಐದಾರು ವರ್ಷಗಳಿಂದ ಚಿತ್ರರಂಗದಲ್ಲಿದ್ದೂ ಸಾಕಷ್ಟು ಕಷ್ಟಪಟ್ಟವನು ಅಜಯ್. ಇಂಥ ಹುಡುಗನನ್ನು ಪ್ರವೀಣಕುಮಾರನಂಥ ಗೂಂಡಾ ನಿರ್ಮಾಪಕನಿಂದ ಬಚಾವು ಮಾಡಬೇಕಿರುವ ಹೊಣೆ ಛೇಂಬರ್ ಮುಂದಿದೆ. ಇಲ್ಲದಿದ್ದಲ್ಲಿ ಈಗ ತಾನೆ ಚೇತರಿಸಿಕೊಳ್ಳುತ್ತಿರುವ ಕನ್ನಡ ಚಿತ್ರರಂಗ ಮತ್ತೆ ರೌಡಿಗಳ, ಮಾಫಿಯಾ ದೊರೆಗಳ ಹಿಡಿತಕ್ಕೆ ಸಿಲುಕುವುದರಲ್ಲಿ ಯಾವ ಸಂದೇಹವೂ ಇಲ್ಲ.

■ ಅರುಣ್.ಜಿ


ಕ್ರೇಜಿಸ್ಟಾರ್ ಮೇಲೇ ಕೈ ಮಾಡಿದ್ದ!

ಈ ಪ್ರವೀಣ್ ಕುಮಾರ್ ಎಂಬ ನಿರ್ಮಾಪಕ ತನ್ನ ರೌಡಿಗಿರಿಯನ್ನು ಪ್ರದರ್ಶಿಸಿರುವುದು ಇದೇ ಮೊದಲಲ್ಲ. 2006ರ ಅಕ್ಟೋಬರ್ 27 ರಂದು ಊಟಿಯಲ್ಲಿ 'ಯುಗಾದಿ' ಸಿನಿಮಾದ ಚಿತ್ರೀಕರಣ ನಡೆದಿತ್ತು. ಆಗ ಅಲ್ಲಿಗೆ ತಿರುಪತಿಯಿಂದ ರವಿಚಂದ್ರನ್ ಬರುವ ಹೊತ್ತಿಗೆ ಸ್ವಲ್ಪ ತಡವಾಗಿತ್ತು. ಅದನ್ನು ನೋಡಿದ ಈ ಪ್ರವೀಣನಿಗೆ ಎಷ್ಟು ರೇಗಿತ್ತೆಂದರೆ ರವಿಚಂದ್ರನ್ ಒಬ್ಬ ಸ್ಟಾರ್ ನಟ ಎಂಬುದನ್ನೂ ಪರಿಗಣಿಸದೆ, ಅವರ ಮೇಲೆ ಏಕಾಏಕಿ ಹಲ್ಲೆ ಮಾಡಿದ್ದ.


ಮಾತ್ರವಲ್ಲ "ಶೂಟಿಂಗ್ ಮುಗಿಸದೇ ನಿನ್ನ ಕಾರು ಹೇಗೆ ಊಟಿಯಿಂದ ಆಚೆ ಹೋಗುತ್ತೆ ನೋಡುತ್ತೇನೆ" ಎಂದೂ ಅವಾಜ್ ಹಾಕಿದ್ದ. ಆ ಪ್ರಕರಣ ಅಂದಿನ ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯೂ ಆಗಿತ್ತು. ಆದರೆ ಅದರ ಬಗ್ಗೆ ಮಾತನಾಡಲು ಇಚ್ಛಿಸದ ರವಿಚಂದ್ರನ್ "ಆ ಪ್ರಕರಣ ನಡೆದದ್ದು ನಿಜ. ಅದರ ಬಗ್ಗೆ ಮಾತನಾಡಲೂ ನನಗೆ ಇಷ್ಟವಿಲ್ಲ. ಆದರೆ ಇನ್ನೆಂದಿಗೂ ಇಂಥ ನಿರ್ಮಾಪಕನ ಸಿನಿಮಾದಲ್ಲಿ ನಟಿಸುವುದಿಲ್ಲ. ಸಿನಿಮಾದ ಗಂಧಗಾಳಿ ಗೊತ್ತಿಲ್ಲದ ಪ್ರವೀಣ್ ಕುಮಾರ್‌ರಂಥವರು ಇರುವ ತನಕ ಚಿತ್ರರಂಗ ಉದ್ಧಾರವಾಗುವುದಿಲ್ಲ" ಎಂದು ಹೇಳಿ ಸುಮ್ಮನಾಗಿದ್ದರು.

ರವಿಚಂದ್ರನ್‌ರಂಥ ದಿಗ್ಗಜನ ಬಾಯನ್ನೇ ಈ ಪ್ರವೀಣ್ ಕುಮಾರ್ ಕಟ್ಟಿಹಾಕಿದ್ದನೆಂದರೆ ಆತನ ಗೂಂಡಾಗಿರಿ ಇನ್ನಾವ ಮಟ್ಟದ್ದಿರಬಹುದು?

ರವಿಚಂದ್ರನ್‌ರಿಗೇ ಈ ಪರಿ ಹಿಂಸೆ ನೀಡಿದ್ದ ಪ್ರವೀಣ್ ತಾನು ಮಾಡಿದ್ದ ತಪ್ಪಿಗೆ ಕ್ಷಮೆಯನ್ನೂ ಕೇಳಿರಲಿಲ್ಲ. ಆದರೆ 'ಯುಗಾದಿ' ಚಿತ್ರದ ಪಾಲುದಾರ ನಿರ್ಮಾಪಕರಾದ ಉಮೇಶ್ ಬಣಕಾರ್ ಮತ್ತು ಗಣೇಶ್ ಅವರು ರವಿಚಂದ್ರನ್ ಬಳಿ ಕ್ಷಮೆ ಯಾಚಿಸಿದ್ದರು.



ಕೇವಲ ಹತ್ತು ರೂ.ಗೆ ಇಳೆಯರಾಜಾ ಸಂಗೀತ



ಕನ್ನಡ ಚಿತ್ರರಂಗದಲ್ಲಿ ಮತ್ತೊಮ್ಮೆ ಕ್ಯಾಸೆಟ್ ಕಂಪೆನಿಗಳ ನಡುವೆ ಯುದ್ಧ ಆರಂಭವಾಗಿದೆ. ಇದಕ್ಕೆ ಮುನ್ನುಡಿ ಬರೆದಿರುವವರು 'ಅಜಂತಾ' ಎಂಬ ಸಿನಿಮಾವನ್ನು ನಿರ್ಮಿಸಿ, ನಿರ್ದೇಶಿಸಿರುವ ರಾಜಪ್ಪ ರವಿಶಂಕರ್ ಎಂಬುವವರು.


ಯಾವುದೇ ಸದ್ದುಗದ್ದಲವಿಲ್ಲದೇ ತಮ್ಮ ಚಿತ್ರವನ್ನು ಮುಗಿಸಿರುವ ರಾಜಪ್ಪ ಈಗ ಮಾತ್ರ ಕ್ಯಾಸೆಟ್ ಕಂಪೆನಿಗಳ ಮಾಲೀಕರ ಆಕ್ರೋಶಕ್ಕೆ ಒಳಗಾಗಿ ಸುದ್ದಿಮಾಡಿದ್ದಾರೆ. ಇದಕ್ಕೆ ಕಾರಣವಿಷ್ಟೇ: ಈ ಚಿತ್ರಕ್ಕೆ ರಾಗಬ್ರಹ್ಮ ಇಳೆಯರಾಜ ಸಂಗೀತವನ್ನು ನೀಡಿದ್ದಾರೆ ಎಂದು ಗೊತ್ತಾದಾಗ ಅದರ ಕ್ಯಾಸೆಟ್ ಮಾರಾಟದ ಹಕ್ಕನ್ನು ಕೇಳಲು ಒಂದು ಕ್ಯಾಸೆಟ್ ಕಂಪೆನಿ ಮಾಲೀಕರು ಹೋಗಿದ್ದಾರೆ.

ಆದರೆ ಅವರನ್ನು ಕಂಡ ಕೂಡಲೇ ರಾಜಪ್ಪ "ನೀವು ಕೊಡುವ ನಾಲ್ಕುಮುಕ್ಕಾಲು ಕಾಸು ನಮಗೆ ಎಲ್ಲಿಗೂ ಸಾಕಾಗುವುದಿಲ್ಲ. ಆ ಕಾರಣದಿಂದ ನಾನೇ ಈ ಕ್ಯಾಸೆಟ್ ಅನ್ನು ಬಿಡುಗಡೆ ಮಾಡುತ್ತೇನೆ" ಎಂದು ಹೇಳಿ ಅವರನ್ನು ವಾಪಾಸ್ ಕಳಿಸಿದ್ದಾರೆ. ಅಷ್ಟೇ ಆಗಿದ್ದರೆ ಪರವಾಗಿರಲಿಲ್ಲ. ಆದರೆ ತಮ್ಮ ಚಿತ್ರದ ಕ್ಯಾಸೆಟನ್ನು ಕೇವಲ ಹತ್ತು ರೂಪಾಯಿಗಳಿಗೆ ಮಾರಾಟ ಮಾಡುವುದಾಗಿ ರಾಜಪ್ಪ ನಿರ್ಧರಿಸಿದ್ದಾರೆ. ಇದೇ ಕ್ಯಾಸೆಟ್ ಕಂಪೆನಿಗಳಿಗೆ ನುಂಗಲಾರದ ಬಿಸಿತುಪ್ಪವಾಗಿದೆ. ಯಾಕೆಂದರೆ ಇಳೆಯರಾಜ ಸಂಗೀತ ನಿರ್ದೇಶನದ ಕ್ಯಾಸೆಟ್ ಕೇವಲ ಹತ್ತು ರೂಪಾಯಿಗೆ ಸಿಗುತ್ತದೆಯೆಂದರೆ ಯಾರು ತಾನೇ ಬೇಡ ಅಂತಾರೆ?

ಇದರ ಜೊತೆಗೆ ರಾಜಪ್ಪನವರು ಇನ್ನೂ ಒಂದು ಗಿಮಿಕ್ ಮಾಡಿದ್ದಾರೆ. ಅದೇನೆಂದರೆ ಚಿತ್ರಬಿಡುಗಡೆಯ ದಿನ ಪತ್ರಿಕೆಯಲ್ಲಿ ಬರುವ ಜಾಹೀರಾತಿನ ತುಣುಕನ್ನು ತಂದು ನೀಡಿದರೆ ಕ್ಯಾಸೆಟ್ ಅನ್ನು ಕೇವಲ ಆರು ರೂಪಾಯಿಗೆ ನೀಡುತ್ತಾರಂತೆ.

ಈ ಹಿಂದೆ 'ಫ್ರೆಂಡ್ಸ್' ಚಿತ್ರ ಬಿಡುಗಡೆಯಾದಾಗ, ಆನಂದ ಆಡಿಯೋ ಸಂಸ್ಥೆಯ ಮಾಲೀಕ ಮೋಹನ್ ಕೂಡ ಇದೇ ರೀತಿ ಹದಿನೆಂಟು ರೂಪಾಯಿಗೆ ಕ್ಯಾಸೆಟ್ ನೀಡಿ ಸುದ್ದಿಮಾಡಿದ್ದರು. ಆ ಗಿಮಿಕ್‌ನಿಂದ ಚಿತ್ರಕ್ಕೂ ಬಹಳ ಲಾಭವಾಗಿತ್ತು. ಈಗ ರಾಜಪ್ಪನವರೂ ಯಶಸ್ವಿಯಾಗುತ್ತಾರೆ ಎಂದು ಕಾದುನೋಡಬೇಕು.


'ಮಂದಾಕಿ'ನಿಯ ಸುತ್ತ ವಿವಾದದ ಹುತ್ತ


ಶ್ರೀನಿವಾಸ್

'ಮಂದಾಕಿನಿ' ಚಿತ್ರದ ನಿರ್ಮಾಪಕ ಶ್ರೀನಿವಾಸ್ ಮತ್ತು ನಿರ್ದೇಶಕ ರಮೇಶ್ ಸುರ್ವೆ ನಡುವಿನ ಕೋಳಿಜಗಳ ಮೊನ್ನೆ ಪತ್ರಿಕಾಗೋಷ್ಠಿಯಲ್ಲಿ ಬಹಿರಂಗವಾಯಿತು.

ಅಂದು "ಮಂದಾಕಿನಿಯೇ ನನ್ನ ಮೊದಲ ಮತ್ತು ಅಂತಿಮ ಚಿತ್ರ" ಎಂದು ನಿರ್ಮಾಪಕ ಶ್ರೀನಿವಾಸ್ ಘೋಷಿಸಿದರಲ್ಲದೆ ಅದೇ ವಾಕ್ಯವನ್ನು ಬರೆದ ಟ್ರೋಫಿಯನ್ನು ಪತ್ರಕರ್ತರಿಗೆ ನೀಡಿ ಅವರನ್ನು ದಂಗುಬಡಿಸಿದರು.

ಇಂತಹ ನಿರ್ಧಾರಕ್ಕೆ ಬರಲು ಗಾಂಧಿನಗರದಲ್ಲಿ ಆದ ಭ್ರಮನಿರಸನವೇ ಮುಖ್ಯ ಕಾರಣ ಎಂದು ಹೇಳುತ್ತಾ ಪ್ರತೀ ಹಂತದಲ್ಲೂ ಯಾವ್ಯಾವ ಅವಮಾನವನ್ನು ಅನುಭವಿಸಿದೆ ಎಂದು ಶ್ರೀನಿವಾಸ್ ಸುದೀರ್ಘವಾಗಿ ವಿವರಿಸಿದರು. ಆ ಮಾತಿನಲ್ಲಿ ಅವರಿಗೆ ನಿರ್ದೇಶಕ ರಮೇಶ್ ಸುರ್ವೆ ಮೇಲೆ ಇದ್ದ ಅಸಮಾಧಾನ ಕೂಡಾ ವ್ಯಕ್ತವಾಯಿತು.



ರಮೇಶ್ ಸುರ್ವೆ

ವಾಸ್ತವವಾಗಿ "ಮಂದಾಕಿನಿಯ ನಂತರ ಜೋಗಿ ಖ್ಯಾತಿಯ ಪ್ರೇಮ್ ನಿರ್ದೇಶನದಲ್ಲಿ ಪೇಪರ್ ಎಂಬ ಹೊಸ ಚಿತ್ರ ನಿರ್ಮಿಸುವ ಬಗ್ಗೆ ಎಲ್ಲಾ ಮಾತುಕತೆ ಮುಗಿದಿತ್ತು. ಅದೇರೀತಿ ಮೂರು ಜನ ಸಿನಿಮಾ ಪತ್ರಕರ್ತರಿಗೆ ನಿರ್ದೇಶನ ಮಾಡುವ ಅವಕಾಶವನ್ನು ಪ್ರಾಮಿಸ್ ಮಾಡಿದ್ದೆ. ಆದರೆ ಈಗ ಈ ನಾಲ್ಕು ಚಿತ್ರಗಳನ್ನು ಕೈ ಬಿಟ್ಟು ಇನ್ನುಮುಂದೆ ಚಿತ್ರ ಮಾಡುವುದಿಲ್ಲ ಎಂಬ ನಿರ್ಧಾರಕ್ಕೆ ಬಂದಿದ್ದೇನೆ. ಇದಕ್ಕೆಲ್ಲಾ ಕಾರಣ ರಮೇಶ್ ಸುರ್ವೆ" ಎಂದು ಅವರು ನೇರವಾಗಿ ಆರೋಪಿಸದಿದ್ದರೂ, ಸುರ್ವೆ ಬಗ್ಗೆ ಇದ್ದ ಅಸಮಾಧಾನ ಎದ್ದು ಕಾಣುತ್ತಿತ್ತು.

ಆನಂತರ ಸುರ್ವೆ ಮತ್ತು ಶ್ರೀನಿವಾಸ್ ಜಂಟಿಯಾಗಿ ಸೆನ್ಸಾರ್ ಆಫೀಸರ್ ಚಂದ್ರಶೇಖರ್ ಮೇಲೆ ವಾಗ್ದಾಳಿಗಿಳಿದರು. "ನಾವು ಸೆನ್ಸಾರ್‌ನ ಪುನರ್ ಪರಿಶೀಲಿಸಿ ಎಂದು ಕೇಳದಿದ್ದರೂ, ಸೆನ್ಸಾರ್ ಆಫೀಸರ್ ಹೇಗೆ ಅದನ್ನು ಪುನರ್ ಪರಿಶೀಲಿಸಿದರು?" ಎಂಬುದೇ ಅವರಿಬ್ಬರ ತಕರಾರಾಗಿತ್ತು. 'ಮಂದಾಕಿನಿ' ಚಿತ್ರಕ್ಕೆ 'ಎ' ಸರ್ಟಿಫಿಕೇಟ್ ನೀಡಿದ ಹಿನ್ನೆಲೆಯಲ್ಲಿ ಆ ಚಿತ್ರ ಬಿಡುಗಡೆಯಾದ ನಂತರ ಕೋರ್ಟ್ ಮೆಟ್ಟಿಲೇರುತ್ತೇನೆ ಎಂದು ನಿರ್ದೇಶಕರು ಘೋಷಿಸಿದರು.

ಅಂತೂ ಪತ್ರಿಕಾಗೋಷ್ಠಿಯಲ್ಲಿ ಶ್ರೀನಿವಾಸ್ ತನ್ನ ನಿರ್ದೇಶಕ ಸುರ್ವೆ ಮೇಲೆ ಆರೋಪಗಳ ಸುರಿಮಳೆ ಮಾಡುತ್ತಾರೆಂಬ ಆಸೆಯಿಂದ ಹೋಗಿದ್ದ ಪತ್ರಕರ್ತರಿಗೆ ಭಾರೀ ನಿರಾಶೆಯಾಯಿತು.

ಆಪರೇಷನ್ ಆರಂಭಿಸಿದ ಜಯಮಾಲಾ!



ಡಾ|| ಜಯಮಾಲಾ ಫಿಲಂ ಛೇಂಬರ್ ಅಧ್ಯಕ್ಷೆಯಾದ ನಂತರ ಒಂದೊಂದೇ ಆಪರೇಷನ್ ಮಾಡಿ ಯಶಸ್ವಿಯಾಗಿಸಿಕೊಳ್ಳಲು ಹೊರಟಿದ್ದಾರೆ. ಈಗಾಗಲೇ ಅವರು ಕೈಗೊಂಡಿರುವ ಕೆಲವು ಕಠಿಣವಾದ ನಿರ್ಧಾರಗಳು ಎಲ್ಲರ ಮೆಚ್ಚುಗೆ ಗಳಿಸಿವೆ. ಅವರಲ್ಲಿ ಕೆಲವು ಈ ರೀತಿ ಇವೆ.

ಮೊದಲನೆಯದಾಗಿ, ಇನ್ನು ಮುಂದೆ ಕನ್ನಡ ಚಿತ್ರಗಳಿಗೆ ಆಂಗ್ಲ ಟೈಟಲ್‌ಗಳನ್ನಿಡುವಂತಿಲ್ಲ. ತಮಿಳುನಾಡಿನಲ್ಲಿ ಬಹಳ ಹಿಂದೆಯೇ ಈ ರೀತಿಯ ಆಂಗ್ಲ ಟೈಟಲ್‌ಗಳ ಬಗ್ಗೆ ನಿರ್ಬಂಧ ಮಾಡಲಾಗಿದೆ. ಎರಡನೆಯದಾಗಿ, ಥಿಯೇಟರ್ ಸಮಸ್ಯೆ ಪರಿಹರಿಸುವ ದೃಷ್ಟಿಯಿಂದ ಸೆನ್ಸಾರ್ ಆದ ನಂತರ ವಾರಕ್ಕೆರಡು ಚಿತ್ರಗಳನ್ನು ಬಿಡುಗಡೆ ಮಾಡಲು ಅನುಮತಿ ನೀಡಲಾಗುವುದು. ಇವೆರಡು ನಿರ್ಧಾರಗಳನ್ನು ನಿಜಕ್ಕೂ ಮೆಚ್ಚಬಹುದು.

ಆದರೆ ಇದೇ ಜಯಮಾಲಾರವರು ಕಳೆದ ತಿಂಗಳು ರೀಮೇಕ್ ಚಿತ್ರಗಳಿಗೆ ತೆರಿಗೆ ವಿನಾಯಿತಿ ನೀಡಿ ಎಂದು ಸರ್ಕಾರಕ್ಕೆ ಮನವಿ ಮಾಡಿ ಕನ್ನಡ ಪ್ರೇಮಿಗಳಲ್ಲಿ ನಿರುತ್ಸಾಹ ಹುಟ್ಟಿಸಿದ್ದರು. ಆದರೆ ಈಗ ಅವರ ಕನ್ನಡ ಪ್ರೇಮ ಉಕ್ಕಿಬಂದಿರುವುದು ಆಶ್ಚರ್ಯ ಮೂಡಿಸುತ್ತದೆ. ಒರಿಜಿನಲ್ ತೆಲುಗು ಅಥವಾ ತಮಿಳು ಚಿತ್ರವನ್ನು ಕನ್ನಡಕ್ಕೆ ಭಟ್ಟಿ ಇಳಿಸಿದರೂ ಅದಕ್ಕೆ ಕನ್ನಡದ ಹೆಸರನ್ನೇ ಇಡಬೇಕೆಂದು ಹೇಳುವ ಮೂಲಕ ಜಯಮಾಲಾ ತಮ್ಮ ಕಳೆದುಹೋದ ವರ್ಚಸ್ಸಿಗೆ ತೇಪೆ ಹಾಕಲು ಹೊರಟಿದ್ದಾರೆ ಎನಿಸುತ್ತದೆ. ■

R B P LANKESH, Kannada Weekly Price Rs. 12/- 17-9-2008 RNI No. KARKAN2005/14648 Regd.No.KA/RNI/BGS/



ಕವಿತಾ ಲಂಕೇಶರ ಧಾರಾವಾಹಿ

ನೀ ನಡೆವ ಹಾದಿಯಲ್ಲಿ...

ಇದುವರೆಗೂ ವಿಭಿನ್ನ ಕಥಾವಸ್ತುಗಳನ್ನು ಹೊಂದಿರುವ ಸಿನಿಮಾಗಳನ್ನು ನಿರ್ದೇಶಿಸಿ ವಿಮರ್ಶಕರ ಮತ್ತು ಪ್ರೇಕ್ಷಕರ ಮೆಚ್ಚುಗೆ ಪಡೆದಿರುವ, ಹಲವಾರು ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಪ್ರಶಸ್ತಿಗಳನ್ನು ಗೆದ್ದಿರುವ ಕವಿತಾ ಲಂಕೇಶ್ ಮೊಟ್ಟ ಮೊದಲ ಬಾರಿಗೆ ಕಿರುತೆರೆಯನ್ನು ಪ್ರವೇಶಿಸುತ್ತಿದ್ದಾರೆ.

ಅವರು ಕತೆ ರಚಿಸಿ, ನಿರ್ಮಿಸಿ, ನಿರ್ದೇಶಿಸಿರುವ 'ನೀ ನಡೆವ ಹಾದಿಯಲ್ಲಿ' ಎಂಬ ಧಾರಾವಾಹಿ ಸೆಪ್ಟೆಂಬರ್ 8ರಿಂದ 'ಕಸ್ತೂರಿ' ಚಾನೆಲ್‌ನಲ್ಲಿ ಸೋಮವಾರದಿಂದ ಶುಕ್ರವಾರದ ತನಕ ಸಂಜೆ 4.30ಕ್ಕೆ ಪ್ರಸಾರವಾಗಲಿದೆ.

ಸಾಮಾನ್ಯವಾಗಿ ಟೀವಿ ಧಾರಾವಾಹಿಗಳು ಮಹಿಳೆಯರ ಸುತ್ತಲೇ ಹೆಣೆಯಲ್ಪಟ್ಟಿರುತ್ತವೆ. ಆದರೆ ಕೆಲ ಧಾರಾವಾಹಿಗಳಲ್ಲಿ ಮಹಿಳೆಯರ ದುಷ್ಟತನವೇ ಪ್ರಮುಖವಾಗಿದ್ದರೆ, ಇನ್ನೂ ಕೆಲವುಗಳಲ್ಲಿ ಆಕೆಯ ಗೋಳಿನ ಕತೆಯೇ ಮುಖ್ಯವಾಗಿರುತ್ತದೆ. ಆದರೆ ಕವಿತಾ ಲಂಕೇಶರ ಧಾರಾವಾಹಿ ಇವೆಲ್ಲವುಗಳಿಗಿಂತ ಭಿನ್ನವಾಗಿರುತ್ತದೆ. 'ಪ್ರೀತಿ ಪ್ರೇಮ ಪ್ರಣಯ'ದಂತಹ ಸಿನಿಮಾದಲ್ಲಿ ವೃದ್ಧರಿಗೆ ಸಂಬಂಧಿಸಿದ ಗಾಢವಾದ ವಿಚಾರವನ್ನೂ ನೈಜವಾಗಿ



ರೂಪಿಸಿ ಮನೆಮಂದಿಯ ಗಮನ ಸೆಳೆದಿದ್ದ ಕವಿತಾರವರು ಈ ಧಾರಾವಾಹಿಯಲ್ಲೂ ಸೀರಿಯಸ್ ವಿಷಯಗಳನ್ನು ಕೈಗೆತ್ತಿಕೊಂಡರೂ ಅವು ಜನರ ಮನ ಮುಟ್ಟುವಂತೆ ರೂಪಿಸಿದ್ದಾರೆ.

ಅಷ್ಟೇ ಅಲ್ಲ, 'ಪ್ರೀತಿ ಪ್ರೇಮ ಪ್ರಣಯ' ಚಿತ್ರದಲ್ಲಿ ಭಾರತಿಯವರು ನಿರ್ವಹಿಸಿದ್ದ ಪಾತ್ರದ ಮುಂದುವರಿದ ಭಾಗದಂತಿದೆ 'ನೀ ನಡೆವ ಹಾದಿಯಲ್ಲಿ...'ನ ಲಕ್ಷ್ಮಿ ಚಂದ್ರಶೇಖರ್‌ರವರ ವಿಧವೆಯ ಪಾತ್ರ. ಮಾತ್ರವಲ್ಲದೆ ಅವರ ಪುತ್ರಿಯರಾಗಿ ನಟಿಸಿರುವ ಶಮಾ ಸಂಜಯ್ ಅವರ ವಕೀಲೆಯ ಪಾತ್ರ ಮತ್ತು ದೀಪಾ ನಾರಾಯಣಸ್ವಾಮಿ ನಿರ್ವಹಿಸಿರುವ ಶಾಲಾ ಟೀಚರ್ ಪಾತ್ರಗಳ ಮೂಲಕ ಕವಿತಾರವರು ಪ್ರಸ್ತುತ ಸಮಾಜದ ಸವಾಲುಗಳನ್ನೂ ಕೈಗೆತ್ತಿಕೊಂಡಿದ್ದಾರೆ. ಈ ಧಾರಾವಾಹಿಯಲ್ಲಿ ಜಾತೀಯತೆ, ಧಾರ್ಮಿಕ ಅಸಹಿಷ್ಣತೆ, ಪತ್ರಿಕೋದ್ಯಮ, ಕ್ರೈಮ್ ಸೇರಿದಂತೆ ಹಲವಾರು ಕೌತುಕದ ವಿಷಯಗಳೂ ಮೂಡಿಬಂದಿವೆ.



ಇದೆಲ್ಲಕ್ಕಿಂತ ಮಿಗಿಲಾಗಿ ಮಹಿಳೆಯರನ್ನು ಅಬಲೆಯರಂತೆ ತೋರಿಸುವ ಬದಲಾಗಿ ಆಧುನಿಕ ಮಹಿಳೆ ಸ್ವಾತಂತ್ರಳೂ ಹೌದು, ಸ್ವಾಭಿಮಾನಿಯೂ ಹೌದು, ಸ್ವಾವಲಂಭಿಯೂ ಹೌದು ಎಂದು ತೋರಿಸಲಾಗಿದೆ.

ಕವಿತಾ ಲಂಕೇಶರ ಪರಿಕಲ್ಪನೆಯ ಕಥೆಯನ್ನು ಮತ್ತೊಬ್ಬ ಮಹಿಳಾ ಲೇಖಕಿ ಚಂದ್ರಿಕಾ ವಿಸ್ತರಿಸುತ್ತಿದ್ದಾರೆ. ಜೊತೆಗೆ ಕೇಶವ್ ಚಂದ್ರರ ಸಂಭಾಷಣೆಯೂ ಇದೆ.

ಕವಿತಾ ಲಂಕೇಶರು 'ನಡೆಯುತ್ತಿರುವ ಹಾದಿ'ಯಲ್ಲಿ ನಗೆಹೂವು ಬಾಡದಿರಲಿ ಎಂದು ಹಾರೈಸೋಣವೇ?

■ ಅರುಣ್


ಶುರುವಾಯ್ತು 'ಧಿಮಾಕು'



ನವೀನ್ ಕೃಷ್ಣ ಅರ್ಥಾತ್ ನಟಿ ಶ್ರೀನಿವಾಸ ಮೂರ್ತಿಯ ಸುಪುತ್ರ ನಟಿಸಿರುವ 'ಧಿಮಾಕು' ಚಿತ್ರ ಮುಂದಿನವಾರ ತೆರೆ ಕಾಣಲಿದೆ. ಸಾಧಾರಣವಾಗಿ ಚಿತ್ರ ಬಿಡುಗಡೆಯಾಗುವ ಹಿಂದಿನದಿನ ರಾತ್ರಿ ಒಂಬತ್ತು ಗಂಟೆಯ ನಂತರವೇ ನಿರ್ಮಾಪಕರು ತಮ್ಮ ಚಿತ್ರವನ್ನು ಉದ್ಯಮದವರಿಗೆ ಮತ್ತು ಪತ್ರಕರ್ತರಿಗೆ ತೋರಿಸುತ್ತಾರೆ. ಯಾಕೆಂದರೆ ಆ ಚಿತ್ರ ಚೆನ್ನಾಗಿಲ್ಲದಿದ್ದರೆ ಆ ಸುದ್ದಿ ಗಾಂಧಿನಗರದಲ್ಲಿ ವೇಗವಾಗಿ ಹಬ್ಬಿ ಅದರ ವ್ಯಾಪಾರಕ್ಕೆ ತೊಂದರೆಯಾಗುತ್ತದೆ.

ಆದರೆ ನವೀನ್ ಕೃಷ್ಣ ತಮ್ಮ ಚಿತ್ರ ಬಿಡುಗಡೆಯಾಗುವ ಐದು ದಿನ ಮುನ್ನವೇ ಅದನ್ನು ಉದ್ಯಮ ಮತ್ತು ಪತ್ರಕರ್ತರಿಗೆ ತೋರಿಸಿದರು. ಹೇಗಿದ್ದರೂ ಚಿತ್ರದ ಟೈಟಲ್ 'ಧಿಮಾಕು' ತಾನೇ? ಹೀಗೆ ಐದು ದಿನ ಮೊದಲೇ ಚಿತ್ರವನ್ನು ತೋರಿಸುವ ಮೂಲಕ ನವೀನ್ ತಮ್ಮ ಧಿಮಾಕನ್ನು ಪ್ರದರ್ಶಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಇಷ್ಟು ಅಡ್ವಾನ್ಸ್ ಆಗಿ, ಆತ್ಮವಿಶ್ವಾಸದಿಂದ ತಮ್ಮ ಚಿತ್ರವನ್ನು ತೋರಿಸಿದವರೇ ಇಲ್ಲ. ನವೀನ್ ಕೃಷ್ಣನ ಆತ್ಮವಿಶ್ವಾಸಕ್ಕೆ ಮತ್ತು 'ಧಿಮಾಕಿಗೆ' ನಮ್ಮ ಚಿಯರ್ಸ್.

ಚೈತ್ರವಿಲ್ಲದ ಚಂದ್ರಮ



'ಚೈತ್ರದ ಚಂದ್ರಮ' ಚಿತ್ರ ನೋಡಿದಾಗ ಮೊದಲಿಗೆ ಅನಿಸಿದ್ದು, ನಿರ್ದೇಶಕ ಎಸ್. ನಾರಾಯಣ್‌ಗೆ ಮಗನ ಮೇಲೆ ಇಷ್ಟೊಂದು ಮಮತೆ ಇರಬಾರದಿತ್ತು ಎಂದು. ಯಾಕೆಂದರೆ ಅಮೋಘ ಮೂರು ಗಂಟೆಗಳ ಕಾಲ ಸಾಗುವ ಈ ಚಿತ್ರವನ್ನು ಸ್ವಲ್ಪ ಕತ್ತರಿಸಿ ಟ್ರಿಮ್ ಮಾಡಲು ನಾರಾಯಣ್ ಕರುಳು ಚುರ್ರೆನಿಸಿತೋ ಏನೋ? ಆದಕ್ಕಾಗಿ 180 ನಿಮಿಷಗಳ ಕಾಲ ಜನರನ್ನು ಇನ್ನಿಲ್ಲದಂತೆ ಪೀಡಿಸುತ್ತಾರೆ. ಅವರ ಮಗ ಪಂಕಜ್ ತನ್ನ ಶಕ್ತಿ ಮೀರಿ ನಟಿಸಲು ಪ್ರಯತ್ನಿಸಿದ್ದಾನೆ. ಫೈಟಿಂಗ್ ದೃಶ್ಯಗಳಲ್ಲಿ ಪರವಾಗಿಲ್ಲ ಎನಿಸಿದರೂ ನೃತ್ಯದಲ್ಲಿ ಸಾಕಷ್ಟು ಸುಧಾರಿಸಬೇಕು ಎನಿಸಿಕೊಳ್ಳುತ್ತಾನೆ. ನಾಯಕಿ ಅಮೂಲ್ಯ ಈ ಚಿತ್ರವೂ 'ಚೆಲುವಿನಚಿತ್ತಾರ'ದ ಮುಂದುವರೆದ ಭಾಗ ಎಂಬಂತೆ ನಟಿಸಿದ್ದಾಳೆ.

ಇನ್ನು ಸಿನಿಮಾ ಬಗ್ಗೆ ಹೇಳುವುದಾದರೆ, ಒರಟಾದ ಸಂಭಾಷಣೆ ಮತ್ತು ಅನಗತ್ಯ ಫೈಟಿಂಗ್ ದೃಶ್ಯಗಳನ್ನು ನಾರಾಯಣ್ ತುರುಕಿರುವುದರಿಂದ ಒಂದು ಸುಂದರ ಪ್ರೇಮಕಾವ್ಯವಾಗಬಹುದಿದ್ದ ಚಿತ್ರವನ್ನು ಹಾಳುಗೆಡವಿದ್ದಾರೆ. ಕಾಶ್ಮೀರದಂತಹ ಸುಂದರ ಲೊಕೇಷನ್‌ನಲ್ಲಿ ನಾಯಕ-ನಾಯಕಿ ಹಾಡಿಗೆ ಕುಣಿದಾಡಿದರೂ ಅದು ಮನಸ್ಸಿಗೆ ಮುದನೀಡುವುದಿಲ್ಲ. ಗ್ರಾಫಿಕ್ಸ್ ಅಂತೂ ಚೆನ್ನಾಗಿ ಮೂಡಿಬಂದಿಲ್ಲದ ಕಾರಣ ಹಾಡುಗಳು ನೀರಸವಾಗಿ ಕಾಣಿಸುತ್ತವೆ. ಇದಕ್ಕೆ ಒಂದು ಕಾರಣ ನಾರಾಯಣ್ ಅವರ ಸಂಗೀತ ನಿರ್ದೇಶನ ಎಂದರೆ ತಪ್ಪಾಗಲಾರದು. ತನ್ನ ಮಿತಿಯನ್ನು ಅರಿತಿರುವ ನಾರಾಯಣ್, ಮಣಿರತ್ನಂ ನಿರ್ದೇಶನದ 'ರೋಜಾ' ಸಿನಿಮಾದ ಹಿನ್ನೆಲೆ ಸಂಗೀತವನ್ನು ಯಥಾವತ್ತಾಗಿ ಇಳಿಸಿದ್ದಾರೆ. ಮತ್ತೊಂದೆಡೆ 'ಲಗಾನ್' ಚಿತ್ರದ ಕ್ರಿಕೆಟ್ ಆಟವನ್ನು ಕ್ಲೈಮ್ಯಾಕ್ಸ್‌ನಲ್ಲಿ ಭಟ್ಟಿ ಇಳಿಸಿದ್ದಾರೆ.

ಕಾಪಿ ಹೊಡೆಯುವುದರಲ್ಲಿ ನಿಸ್ಸೀಮರಾದ ನಾರಾಯಣ್ ತಮ್ಮದು 'ಸ್ವಮೇಕ್' ಚಿತ್ರ ಎಂದು ಹೇಳಿದರೂ ಅದರಲ್ಲಿ ಎಲ್ಲೂ ಸ್ವಂತಿಕೆ ಕಾಣಿಸುವುದಿಲ್ಲ. ತಮ್ಮ ಮಗನಿಗಾಗಿ ಅತ್ಯಂತ ಶ್ರೀಮಂತವಾಗಿ ನಿರ್ಮಿಸಿರುವ ಈ ಚಿತ್ರದಲ್ಲಿ ಒಂದಿಷ್ಟು ಕ್ರಿಯೇಟಿವಿಟಿ ಇದ್ದಿದ್ದರೆ ಚೆನ್ನಾಗಿರುತಿತ್ತು.

ಬರಲಿದ್ದಾನೆ ಗಣೇಶನ ತಮ್ಮ ಮಹೇಶ



ನಟ ಗಣೇಶ್ ಅವರ ಸಹೋದರ ಮಹೇಶ್ ಸದ್ಯದಲ್ಲೇ ತಮ್ಮ ಮುಖಕ್ಕೆ ಬಣ್ಣ ಹಚ್ಚಿ ನಾಯಕ ನಟನಾಗುವ ಸಿದ್ಧತೆಯಲ್ಲಿದ್ದಾರೆ. ಅವರ ಎಂಟ್ರಿಗೆ ವೇದಿಕೆಯನ್ನು ಕಲ್ಪಿಸುತ್ತಿರುವವರು 'ತಾಜ್‌ಮಹಲ್' ಚಿತ್ರದ ನಿರ್ದೇಶಕ ಚಂದ್ರು.

ಮಹೇಶ್‌ನದು ಕೂಡಾ ಅಣ್ಣ ಗಣೇಶ್ ತರಹ ಚೌಕ ಮುಖ. ಅದೇ ನಗು. ಅದೇ ಸ್ಟೈಲ್ ಕೂಡಾ. ಆದರೆ ಒಂದೇ ಒಂದು ವ್ಯತ್ಯಾಸವೆಂದರೆ ಮಹೇಶ್ ಅಣ್ಣ ಗಣೇಶ್‌ಗಿಂತಲೂ ಸ್ವಲ್ಪ ಎತ್ತರಕ್ಕಿದ್ದಾನೆ. ಒಂದು ರೀತಿಯಲ್ಲಿ ಸ್ವಲ್ಪ ಉದ್ದನೆಯ ಗಣೇಶ್‌ನ ತದ್ರೂಪಿ ಮಹೇಶ ಪ್ರೇಕ್ಷಕರನ್ನು ನೋಡಲು ಬರುತ್ತಿದ್ದಾನೆ ಎಂದರೆ ತಪ್ಪಾಗಲಾರದು.

ತಾನೂ ನಾಯಕ ನಟನಾಗಬೇಕೆಂಬುದು ಮಹೇಶನ ಸ್ವಂತ ಕನಸು. ಆದರೆ ಆತನ ಬೆಂಗಾವಲಿಗೆ ನಿಂತಿರುವವನು ಅಣ್ಣ ಗಣೇಶ್. ಇಲ್ಲೊಂದು ವಿಶೇಷತೆ ನೋಡಿ: 'ಮುಂಗಾರು ಮಳೆ'ಯ ನಾಯಕಿ ಪೂಜಾ ಗಾಂಧಿ ಕೂಡಾ ಇತ್ತೀಚೆಗೆ ತನ್ನ ಸಹೋದರಿ ರಾಧಿಕಾ ಗಾಂಧಿಯನ್ನು ನಾಯಕಿಯನ್ನಾಗಿ ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದ್ದಾರೆ. ಈಗ ಪೂಜಾ ಗಾಂಧಿಯ ಹಾದಿಯನ್ನೇ 'ಮುಂಗಾರು ಮಳೆ'ಯ ನಾಯಕ ಗಣೇಶ್ ಹಿಡಿದಿದ್ದಾರೆ.

'ತಾಜ್‌ಮಹಲ್' ಚಿತ್ರದ ಮುಖಾಂತರ ದಿಢೀರನೆ ತಾರಾಮೌಲ್ಯ ಪಡೆದಿರುವ ಅದರ ನಿರ್ದೇಶಕ ಚಂದ್ರು 'ಜೋಗಿ'ಯ ಪ್ರೇಮ್ ಮಾದರಿಯಲ್ಲೇ ಸಾಗಿದ್ದಾರೆ. ಯಾಕೆಂದರೆ ಪ್ರೇಮ್ ಕೂಡಾ ಇಂತಹ ಗಿಮಿಕ್ಕುಗಳನ್ನು ಮಾಡುವುದರಲ್ಲಿ ಎತ್ತಿದ ಕೈ. ತನ್ನ ಚೊಚ್ಚಲ ಚಿತ್ರ 'ತಾಜ್‌ಮಹಲ್' ಚಿತ್ರಕ್ಕೂ ಚಂದ್ರು ಆರಂಭದಿಂದಲೂ ಇದೇ ರೀತಿಯಲ್ಲಿ ಪಬ್ಲಿಸಿಟಿ ಪಡೆದಿದ್ದರು. ಅದೇನೇ ಇರಲಿ, ಸದ್ಯಕ್ಕೆ ಗಣೇಶನ ತಮ್ಮ ಮಹೇಶನನ್ನು ನಾಯಕ ನಟನನ್ನಾಗಿಸುವ ಮೂಲಕ ಗಾಂಧಿನಗರದಲ್ಲಿ ಚಂದ್ರು ಕುತೂಹಲ ಸೃಷ್ಟಿಸಿದ್ದಾರೆ.



ಹಿಂದೊಂದು ಕಾಲವಿತ್ತು, ತಾರೆಯರ ಮಕ್ಕಳೂ ತಾರೆಯರಾಗುತ್ತಿದ್ದರು. ಆದರೆ ಈಗಿನದು ಸೂಪರ್‌ಸಾನಿಕ್ ಯುಗ. ಹೀಗಾಗಿ ತಾರೆಯರು ಮದುವೆಯಾಗಿ, ಅವರಿಗೆ ಮಕ್ಕಳಾಗಿ ಅವರು ದೊಡ್ಡವರಾಗಿ ನಟರಾಗುವ ತನಕ ಕಾಯುವ ತಾಳ್ಮೆ ಯಾರಿಗೂ ಇಲ್ಲ. ಆದ್ದರಿಂದ ತಾರೆಯರ ಅಣ್ಣನೋ, ತಮ್ಮನೋ, ತಂಗಿಯೋ ನಾಯಕನಟ ನಟಿಯಾಗುವ ಹೊಸ ಟ್ರೆಂಡ್ ಕನ್ನಡ ಚಿತ್ರರಂಗದಲ್ಲಿ ಪ್ರಾರಂಭವಾಗಿದೆ.

ಆದರೆ ನಟ ಅಥವಾ ನಟಿ ಸೂಪರ್ ಹಿಟ್ ಚಿತ್ರಗಳನ್ನು ನೀಡುತ್ತಾರೆ ಎಂದ ಮಾತ್ರಕ್ಕೆ ಅವರ ತಮ್ಮ/ತಂಗಿ ಕೂಡ ಸೂಪರ್ ಸ್ಟಾರ್‌ಗಳಾಗುತ್ತಾರೆ ಎಂದು ಗ್ಯಾರಂಟಿ ಕೊಡಲಾಗುವುದಿಲ್ಲ. ಉದಾಹರಣೆಗೆ ಕ್ರೇಜಿ ಸ್ಟಾರ್ ರವಿಚಂದ್ರನ್ ಅವರ ಸಹೋದರ ಬಾಲಾಜಿಯನ್ನೇ ತೆಗೆದುಕೊಳ್ಳಿ. ಈತ ಇಷ್ಟೊತ್ತಿಗೆ ಕನಿಷ್ಠವೆಂದರೂ ಎರಡು ಡಜನ್ ಚಿತ್ರಗಳಲ್ಲಿ ನಟಿಸಬೇಕಿತ್ತು. ಆದರೆ ಪಾಪ, ಈತ ತನ್ನ ಮೊದಲ ಚಿತ್ರ ಸಂಪೂರ್ಣಗೊಳ್ಳಲು ಬರೋಬ್ಬರಿ ಎಂಟು ವರ್ಷಗಳ ಕಾಲ ಕಾಯಬೇಕಾಗಿತ್ತು. ಹಾಗೆಯೇ ಶಿವರಾಜ್‌ಕುಮಾರ್ ಅವರ ಸಹೋದರ ರಾಘವೇಂದ್ರರಾಜ್‌ಕುಮಾರ್ ಕೇಸ್ ಕೂಡ. ಇವರು ಕಳೆದ ಹಲವು ವರ್ಷಗಳಿಂದ ನಟನೆಯಿಂದ ದೂರ ಉಳಿದಿದ್ದಾರೆ. ವಿಜಯರಾಘವೇಂದ್ರ ಮತ್ತಾತನ ಸಹೋದರ ಮುರುಳಿ, ಇವರಿಬ್ಬರೂ ಈಗ ಮಂಕಾಗಿದ್ದಾರೆ. ಈ ಸಾಲಿಗೆ ಅಪವಾದವೆಂಬುದಿದ್ದರೆ ಅದು ಅನಂತ್ ಮತ್ತು ಶಂಕರ್‌ನಾಗ್ ಸಹೋದರರು ಮಾತ್ರ!

ಅದೇನೇ ಇರಲಿ, ಮಹೇಶ್‌ನ ಆರಂಗ್ರೇಟಂಗೆ ನಮ್ಮ ಶುಭಕಾಮನೆಗಳು.

■ ಶೆಣೈ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajaji